ಎರಡು ಭಾಗ ಜಿಲ್ಲೆಗಳು ಅಭಾವಕ್ಕೆ ಒಳಪಟ್ಟಿದ್ದಾಗಿವೆ. ಕಳೆದ ಎರಡು ವರ್ಷ ಪರಿಸ್ಥಿತಿ ಅಷ್ಟೊಂದು ಉತ್ತಮವಾಗಿರಲಿಲ್ಲ. ಹೋದ ವರ್ಷ ಕೂಡ ಮಳೆ ಬೆಳೆ ಅಷ್ಟು ಚೆನ್ನಾಗಿ ಇರಲಿಲ್ಲ. ಒಬ್ಬ ಮಹನೀಯರು ತಮ್ಮ ಅನುಭವದಿಂದ ಅಗ್ರಿಕಲ್ಚರಲ್ ಸೈಕಲ್ 5 ವರ್ಷ ಎಂದು ಮಾಡಿದ್ದಾರೆ.

In a cycle of 5 years, there will be one good year, one bad year, one year neither good nor bad, and two indifferent years.

ಕಳೆದ ಎರಡು ವರ್ಷ ಇನ್‌ಡಿಫರೆಂಟ ಇಯರ್ಸ್ ಎಂದು ಒಟ್ಟಿನಲ್ಲಿ ಹೇಳಬಹುದು. ಆದರ ಜೊತೆಗೆ ಈ ವರ್ಷ ಮಾನ್‌ಸೂನ್ ಲೇಟಾಗಿದೆ. ಹೋದ ವರ್ಷ ಕೂಡ ಲೇಟ್ ಆಗಿತ್ತು. ಮುಂಗಾರಿ ಬೆಳೆ ಬಂದ ಮೇರೆ ಹೋದ ವರ್ಷ ಮಳೆ ಬಿತ್ತು. ಮಳೆ ಬೇಗನೆ ಬರಲಿಲ್ಲ. ಈ ವರ್ಷ ಬೇಗನೆ ಮಳೆ ಪ್ರಾರಂಭವಾಗಬೇಕಾಗಿತ್ತು. ಕಳೆದ 15 ದಿವಸಗಳಲ್ಲಿ ಅನೇಕ ಭಾಗದಲ್ಲಿ ಮಳೆ ಬರಲಿಲ್ಲ. ಈ ವರ್ಷ ಮಾನ್ಸೂನ್ ಲೇಟ್ ಆಗುವುದರ ಜೊತೆಗೆ ಹಿಂದಿನ ಎರಡು ವರ್ಷ ಮಳೆ ಬೆಳೆ ಸಾಧಾರಣವಾಗಿರುವುದ ರಿಂದ ಈ ವರ್ಷ ಅಭಾವ ಪರಿಸ್ಥಿತಿ ಸಾಮಾನ್ಯವಾಗಿ ಬರುವ ಹಾಗೆ ಇದೆ.

ಅಧ್ಯಕ್ಷರು.—ಈಗ ಎದ್ದು ಅರ್ಧಗಂಟೆಯ ನಂತರ ಮತ್ತೆ ಸೇರೋಣ.

The House adjourned for Recess at Three of the Clock and reassemled at Thirty-Minutes past Three of the Clock.

[MR. DEPUTY SPEAKER in the Chair.]

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ನಾನು ದೇಶದಲ್ಲಿರುವ ಪರಿಸ್ಥಿತಿ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುತ್ತಾ ಇದ್ದೆ. ಒಟ್ಟಿನಲ್ಲಿ ಈ ವರ್ಷ ಮಳೆ ಬಹಳ ನಿಧಾನವಾಗಿದೆ. ಅನೇಕ ಕಡೆಗಳಲ್ಲಿ ಬಿತ್ತನೆಯಾಗಿಲ್ಲ. ಕೆಲವು ಕಡೆ ಇನ್ನೂ ಉಳಿಮೆ ಆಗದ ಪರಿಸ್ಥಿತಿ ಇದೆ. ಹೀಗಾದರೆ ದೇಶ ದಲ್ಲಿ ಇನ್ನು ಒಳ್ಳೆ ಮಳೆ ಬಂದರೂ ಕೂಡ ಅಷ್ಟು ಒಳ್ಳೆಯ ಬೆಳೆ ಆಗುತ್ತದೆಂದು ಹೇಳುವುದಕ್ಕಾಗುವು ದಿಲ್ಲ. It may turn out to be a normal year. ಇನ್ನು ಮುಂದೆ ಬಹಳ ಮಳೆ ಬಂದರೂ ಕೂಡ ಸಾಧಾರಣವಾದ ಕ್ರಾಪ್ ಇಯರ್ ಆಗುತ್ತದೆಯೆ ವಿನ our expecting a good year is very remote. ಅದು ಬಹಳ ದೂರ ಇದೆ. ರಿಲೀಫ್ ಮೆಶರ್ಸ್ ವಿಷಯವಾಗಿ, ಡೀಟೇಲ್ ಆಗಿ ಕೊಡುವಾಗ, ಏನೇನು ಮಾಡುತ್ತಾ ಇದ್ದೇವೆ, 1964ರ ಫ್ಯಾಮಿನ್ನಿನಲ್ಲಿ ಎಷ್ಟು ಖರ್ಚು ಮಾಡಿ ದ್ದೇವೆ, ಎಷ್ಟು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್, ತಕಾವಿ ಲೋನ್ಸ್ ಕೊಡುತ್ತಾ ಇದ್ದೇವೆ, ವೆಲ್ ಇರ್ರಿಗೇಶನ್ನಿಗೆ ಎಷ್ಟು ಕೊಡುತ್ತಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ಡೆವಲಪ್ ಡಿಪಾರ್ಟ್ ಮೆಂಟು, ಪಿ. ಡಬ್ಲ್ಯು.ಡಿ. ವರ್ಕ್ಸ್ ಎಕ್ಸ್‌ಪಿಡೈಟ್ ಮಾಡಬೇಕು. ಒಟ್ಟಿನಲ್ಲಿ ಎಲ್ಲಾ ಜನಕ್ಕೂ ಕೆಲಸ ಕೊಡಬೇಕು ಅನ್ನುವುದು ಉದ್ದೇಶ. ಜನಕ್ಕೆ ಕೆಲಸ ಸಿಗಬೇಕು. ಅದಕ್ಕೆ ಎಲ್ಲ ಡಿಪಾರ್ಟುಮೆಂಟು ಗಳಲ್ಲಿಯೂ ಕೆಲಸಗಳು ಬಹಳ ತ್ವರಿತವಾಗಿ ನಡೆದರೆ ಲಕ್ಷಾಂತರ ಜನಕ್ಕೆ ಕೆಲಸ ಸಿಗುತ್ತದೆ. ಈ ದೃಷ್ಟಿಯಿಂದ 3--4 ಸಲ ಸಂಬಂಧಪಟ್ಟ ಇಲಾಖೆಯವರು ಬೆರತು ಕಾರ್ಯಕ್ರಮ ತೆಗೆದುಕೊಂಡು ಕೆಲಸ ನಡೆಯುತ್ತಾ ಇದೆ. ಡೀಟೇಲ್ಸ್ ಆಮೇಲೆ ಹೇಳುತ್ತೇನೆ. ಯಾವ ಯಾವ ತಾಲ್ಲೂಕಿನಲ್ಲಿ ಮಳೆ ಅಭಾವದಿಂದಾಗಿ ತೊಂದರೆಯಾಗಿದೆ ಎಂಬ ಬಗ್ಗೆ ಡೀಟೇಲ್ಸ್ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ 172–173 ತಾಲ್ಲೂಕುಗಳು ಇರುವುದು, ಅವುಗಳದ್ದನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ. ಎಲ್ಲಾ ತಾಲ್ಲೂಕು ಪ್ರತಿನಿಧಿಗಳೂ ಈ ಮಾನ್ಯ ಸಭೆಯಲ್ಲಿದ್ದಾರೆ. ಹಾಗಿರುವಾಗ, ಒಂದು ತಾಲ್ಲೂಕು ಹೇಳಿ ಒಂದು ತಾಲ್ಲೂಕನ್ನು ಹೇಳದೆ ಬಿಟ್ಟರೆ ಅಸಮಾಧಾನವಾಗುತ್ತದೆ. ಆದ್ದರಿಂದ ಡೀಟೇಲ್ಸ್ ಮಾನ್ಯ ಸದಸ್ಯರೇ ಹೇಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಅಧಿಕಾರಿಗಳು ಬಂದಿದ್ದಾರೆ. ನಮಗೆ ಟೈಪ್ ಮಾಡಿಸಿ ತಾಲ್ಲೂಕುವಾರು ಕಳೆದ ವರ್ಷ ಹಿಂದೆ ಆದ ಮಳೆ ಎಷ್ಟು, ಈವರೆಗೂ ಎಷ್ಟು ಮಳೆಯಾಗಿದೆ ಎಂದು ಪಟ್ಟಿಮಾಡಿಸಿ ಕೊಡಿಸಿದರೆ ಆನಂದವಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಬಹುಶಃ ಡಿ. ಸಿ. ಗಳ ಕಾನ್‌ಫೆರೆನ್ಸ್ ಆದಮೇಲೆ ಡಿಬೇಟು ಇಟ್ಟು ಕೊಂಡಿದ್ದರೆ ಈ ಡೀಟೇಲ್ಸು ಕೊಡುತ್ತಿದ್ದೆ. ಪ್ರತಿಯೊಂದು ಜಿಲ್ಲೆಯಿಂದಲೂ ಡೀಟೇಲ್ಸ್ ಕಲೆಕ್ಟ್ ಮಾಡಿಕೊಳ್ಳುತ್ತಿದ್ದೇನೆ. ನಾಳೆ ಡಿ. ಸಿಸ್. ಕಾನ್‌ಫರೆನ್ಸು ಮುಕ್ತಾಯವಾಗುತ್ತದೆ. ನಾಡಿದ್ದಾಗಿದ್ದರೆ ಡೀಟೇಲ್ಸ್ ಕೊಡಿಸುತ್ತಾ ಇದ್ದೆ. ನಾನು ಬಿಸಿನೆಸ್ ಅಡ್‌ವೈಸರಿ ಕಮಿಟಿಯಲ್ಲಿಲ್ಲ. ಅದೇನು ಕಾರಣವೋ ಇವತ್ತೆ ಡಿಬೇಟು ಇಟ್ಟುಕೊಂಡಿದ್ದಾರೆ. ಈಗ ಡಿ. ಸಿಸ್. ಕಾನ್‌ಫರೆನ್ಸು ನಡೆಯುತ್ತಾ ಇದೆ, ನಾನು ಇಲ್ಲಿ ಇರಬೇಕಾಗಿದೆ. ನಿನ್ನೆ ನಮ್ಮ ವಿರೋಧಪಕ್ಷದ ನಾಯಕರು ಸ್ವಲ್ಪ ಆತುರಪಡಿಸಿದ್ದರಿಂದ ಬಹುಶಃ ಇವತ್ತು ಡಿಬೇಟು ಇಟ್ಟುಕೊಂಡಿರುತ್ತಾರೆ ಅಂತ ಕಾಣುತ್ತೆ. ಈ ವಿಚಾರದಲ್ಲಿ ಎಷ್ಟು ಬೇಗ ಕೊಡುವುದಕ್ಕೆ ಸಾಧ್ಯವೋ ಅಷ್ಟು ಬೇಗ ಡಿಬೇಟು ಮುಗಿಯುವುದಕ್ಕೆ ಮುಂಚೆ ಕೊಡವುದಕ್ಕೆ ಪ್ರಯತ್ನಪಡುತ್ತೇನೆ.

ಎರಡನೆಯದಾಗಿ, ಪರಿಹಾರದ ವಿಷಯದಲ್ಲಿ ಆಮೇಲೆ ಡೀಟೇಲ್ಸ್ ಹೇಳುತ್ತೇನೆ ಅಂತ ಹೇಳಿದೆ. ಮುಖ್ಯವಾಗಿ ಪರಿಹಾರದ ವಿಷಯದಲ್ಲಿ ಮಾನ್ಯ ಸದಸ್ಯರು ಮನಸ್ಸಿನಲ್ಲಿ ಇಷ್ಟು ಇಟ್ಟು ಕೊಡಬೇಕು. ಶಾಶ್ವತ ಪರಿಹಾರ ಒಂದು ಕಡೆ ಯೋಚನೆ ಮಾಡಬೇಕು. ತಾತ್ಕಾಲಿಕ ಪರಿಹಾರ ಒಂದು ಕಡೆ ಯೋಚನೆ ಮಾಡಬೇಕು. ಕನ್ನಡ ದೇಶದಲ್ಲಿ 2 ಕೋಟಿ 75 ಎಕರೆಗಿಂತಲೂ ಮೇಲೆ ಸಾಗುವಳಿಯಾಗುತ್ತಿರುವ ಭೂಮಿ ಇದೆ. ಈ 2 ಕೋಟಿ 75 ಲಕ್ಷ ಎಕರೆಯಲ್ಲಿ, ಇಲ್ಲಿ ನೀರಾವರಿ ಕೆಳಗಿರುವುದು 23 ಲಕ್ಷ ಮಾತ್ರ; ಅಂದರೆ ಏಳೂವರೆ ಅಥವ ಎಂಟು ಪರ್ಸೆಂಟಿಗೆ ಇಳಿಯುತ್ತದೆ. ಎಂಟು ಪರ್ಸೆಂಟು ಇರ್ರಿಗೇಷನ್ ಇಟ್ಟುಕೊಂಡು, ನಾವು ದೇಶದಲ್ಲಿ ಹೆಚ್ಚಾಗಿ ಸಮೃದ್ಧಿಯಾಗಿ ಬೆಳೆಯುತ್ತೇವೆಂದರೆ ಬಹಳ ಅನುಮಾನ. ನಮಗೆ ಇರ್ರಿಗೇಶನ್ ಬೇಕು. ನಮ್ಮ ಸಮಸ್ಯೆ ಅದು. Providing more water to our crops and giving assured water supply is the main problem. ಬೇರೆ ಅಡ್‌ಜಾಯಿನಿಂಗ್ ಏರಿಯಾಗಳದ್ದು ನೋಡಿದರೆ, ಆಂಧ್ರದಲ್ಲಿ 40 ಪರ್ಸೆಂಟು ಇರ್ರಿಗೇಶನ್ ಆಗುತ್ತಿದೆ; ತಮಿಳು ನಾಡಿನಲ್ಲಿ ಅವರದೂ ಜಾಸ್ತಿ ಇದೆ. ಆಲ್-ಇಂಡಿಯ ಆವರೇಜು 22 ಪರ್ಸೆಂಟಿಗೆ ಬರುತ್ತದೆ. When that is the case, ಇಲ್ಲಿ ಎಂಟು ಪರ್ಸೆಂಟು ಇರ್ರಿಗೇಷನ್ ಇದೆ. ಬಹುಶಃ ಹಿಂದೂಸ್ಥಾನದಲ್ಲಿ, ಮಹಾರಾಷ್ಟ್ರ ಕನ್ನಡ ದೇಶದಲ್ಲಿ ಇಷ್ಟೊಂದು ಲೊ ಪರ್ಸೆಂಟೇಜ್ ಇರುವುದು ಎಂದು ಜ್ಞಾಪಕಕ್ಕೆ ಬರುತ್ತಿದೆ. ಮಹಾರಾಷ್ಟ್ರದಲ್ಲಿ ಕಡಿಮೆ ಇರುವುದಕ್ಕೆ ಕಾರಣವಿರಬಹುದು. ದೊಡ್ಡ, ಭಾರಿ ನದಿಗಳೆಲ್ಲಾ ಇರುವುದು ನಮ್ಮ ಕನ್ನಡ ದೇಶದಲ್ಲಿ; ಘಟಪ್ರಭಾ, ಮಲಪ್ರಭಾ, ಭೀಮಾ, ಕೃಷ್ಣ, ಗೋದಾವರಿ, ತುಂಗಭದ್ರ, ಪಾಲಾರ್, ಪೆನ್ನಾರ್, ಕಾಳಿನದಿ, ಚಂದ್ರಹೊಳೆ, ಮುಂತಾದ ಭಾರಿ ಭಾರಿ ಹೊಳೆಗಳಿವೆ. ಬೇಕಾದಷ್ಟು ನೀರು ಹರಿಯುತ್ತಾ ಇದೆ. ಫಲವತ್ತಾದ ಎರೆಮಣ್ಣಿನಿಂದ ಕೂಡಿರುವ ಭೂಮಿಗಳಿವೆ, ದೇಹಧಾರ್ಢ್ಯವಿದ್ದು ಕಷ್ಟಪಡುವ ರೈತರಿದ್ದಾರೆ. ಫಲವತ್ತಾದ ಮಣ್ಣು, ತುಂಬಿ ಹರಿಯುವ ನದಿಗಳು, ಧೃಢಕಾಯರಾಗಿ ಮೀಸೆ ಇಟ್ಟುಕೊಂಡಿರುವ ಕನ್ನಡಿಗರನ್ನಿಟ್ಟುಕೊಂಡಿರುವ ಕನ್ನಡ ದೇಶದಲ್ಲಿ, ನೀರು ಒಂದು ಕೊಟ್ಟಿದ್ದೆ ಆದರೆ, ಬಂಗಾರ ಬೆಳೆಯುವಷ್ಟು ಧಾರಢ್ಯ ನಮ್ಮ ರೈತರಿಗೆ ಇದೆ. ಇವರಿಗೆ ನೀರು ಹಚ್ಚಿಗೆ ಕೊಡುವುದೇ ಪ್ರಾಬ್ಲಮ್. ನೀರನ್ನು ಒದಗಿಸುವುದರಲ್ಲಿ ಎರಡು ವಿಧವಿದೆ: ಒಂದು ಮೇಜರ್ ಇರ್ರಿಗೇಷನ್ ಪ್ರಾಜೆಕ್ಟುಗಳು. ಇನ್ನೊಂದು ಮೀಡಿಯಂ ಮತ್ತು ಮೈನರ್ ಪ್ರಾಜೆಕ್ಟುಗಳು. ಈ ಮೇಜರ್ ಇರ್ರಿಗೇಷನ್ ಬಹಳ ಮುಖ್ಯವಾದುದಾದರೂ ಕೂಡ ದೇಶಕ್ಕೆ ಅವುಗಳಿಂದ ಪ್ರತಿಫಲ ದೊರಕಬೇಕಾದರೆ ಬಹಳ ನಿಧಾನವಾಗುತ್ತದೆ. ಆದ್ದರಿಂದ ಮೈನರ್ ಇರ್ರಿಗೇಷನ್ನಿಗೆ ಸಾಧ್ಯವಾದಷ್ಟೂ ನಾವು ಗಮನ ಕೊಡಬೇಕು. ಮೈನರ್ ಇರ್ರಿಗೇಷನ್ ಎಂದರೆ ತಕ್ಷಣ ಅದು ಪ್ರತಿಫಲ ಕೊಡುತ್ತದೆ. ಈಗ 50 ಕೋಟಿ ರೂಪಾಯಿ ಮೈನರ್ ಇರ್ರಿಗೇಷನ್ನಿಗೆ ಖರ್ಚುಮಾಡಿದರೆ, ಬಹ ಶಃ ಬರುವ ವರ್ಷ ಪ್ರತಿಫಲ ಬರುತ್ತದೆ. ಇಲ್ಲಿ ಮಾನ್ಯ ಸದಸ್ಯರನೇಕರು ರೈತರಿದ್ದಾರೆ; ಅವರಿಗೆ ಗೊತ್ತಿದೆ: ರೈತ ಬಾವಿ ಅಗೆಯುತ್ತಾ ಇರುವಾಗಲೆ ಬೆಳೆ ಮಾಡಿದ ಸಂದರ್ಭಗಳಿವೆ. ಕಲ್ಲು ಕಟ್ಟಡ ಬಾವಿಗೆ ಆಗುವುದರೊಳಗೇ, ಬಾವಿ ನೀರನ್ನು ಉಪಯೋಗಿಸಿಕೊಂಡು ಬೆಳೆ ತೆಗೆಯುತ್ತಾರೆ. ಇನ್ನೂ ಬಾವಿ ಕೆಲಸ ಮುಗಿಯುವುದರೊಳಗೇ ಅದರಿಂದ ಪ್ರತಿಫಲ ಬರುತ್ತದೆ. ಮೈನರ್ ಇರ್ರಿಗೇಷನ್ನಿನಲ್ಲಿ ಆ ಅಸ್ಪದವಿರುತ್ತದೆ. ಆದ್ದರಿಂದ 50 ಕೋಟಿ ರೂಪಾಯಿ ಮೈನರ್ ಇರ್ರಿಗೇಷನ್ನಿಗೆ ಖರ್ಚುಮಾಡಿದರೂ, ಮನಿ ಸರ್ಕುಲೇಶನ್ನಿಗೆ ಸೇರಿಕೊಂಡು, ಉತ್ಪತ್ತಿಯಿಲ್ಲದೆ, ಇನ್‌ಫ್ಲೇಶನರಿ ಟೆಂಡೆನ್ಸಿಸಿಗೆ ಸ್ಕೋಪು ಕೊಡುವುದಿಲ್ಲ. ಎಷ್ಟು ಖರ್ಚುಮಾಡಿದರೆ, ಅಷ್ಟು ಬೇಗ ಉತ್ಪಾದನೆ ಬರುತ್ತದೆ. ಮನಿ ಸರ್ಕುಲೇಶನ್ ಜಾಸ್ತಿಯಾದರೂ ಕೂಡ ಫುಡ್ ಸರ್ಕುಲೇಶನ್ ಜಾಸ್ತಿಯಾಗುತ್ತದೆ. ಇನ್‌ಫ್ಲೇಶನರಿ ಟೆಂಡೆನ್ಸಿ ಬರುವುದಿಲ್ಲ. ಮೇಜರ್ ಇರ್ರಿಗೇಶನ್ನಿಗೆ ನೂರು ಕೋಟಿ ಖರ್ಚುಮಾಡಿದರೆ ಮನಿ ಸರ್ಕುಲೇಶನ್ನಿಗೆ ಸೇರಿಕೊಳ್ಳುತ್ತದೆ, ಅದರೆ ಉತ್ಪತ್ತಿ ಬರುವುದಿಲ್ಲ. More money in circulation less food products ಇದೆ. ಹೀಗಾದರೆ ಇನ್‌ಫ್ಲೇಶನ್ ಬರುತ್ತದೆ. Less food will have higher rates and higher prices. That is one of the reason today why high prices exist.

ಹತ್ತು ವರ್ಷದ ಮೊದಲೇ ಯೋಚನೆಮಾಡಿ ಸಾಧ್ಯವಾದಷ್ಟು ಮೈನರ್ ಪ್ರಾಜೆಕ್ಟುಗಳಿಗೆ ಗವರ್ನಮೆಂಟ್ ಆಫ್ ಇಂಡಿಯದವರು ಗಮನ ಕೊಟ್ಟಿದ್ದರೆ, ತಕ್ಷಣ ಉತ್ಪತ್ತಿ ಜಾಸ್ತಿಯಾಗಿ ಪ್ರತಿ ಫಲ ದೊರಕುತ್ತಿತ್ತು; ಅದರಿಂದ ಎಷ್ಟು ಮನಿ ಸರ್ಕುಲೇಶನ್ ಜಾಸ್ತಿಯಾದರೂ, ಅಷ್ಟು ಫುಡ್ ಪ್ರೊಡಕ್ಷನ್ ಜಾಸ್ತಿಯಾಗುತ್ತಿತ್ತು, ಪ್ರೈಸು ಏರುವುದಕ್ಕೆ, ಇನ್‌ಫ್ಲೇಶನ್ನಿಗೆ ಅವಕಾಶವಿರುತ್ತಿರಲಿಲ್ಲ.

ಆದ್ದರಿಂದ ಈಗ ದೇಶದಲ್ಲಿ ಮೈನರ್ ಇರ್ರಿಗೇಶನ್ ಕಡೆಗೆ ಗಮನಕೊಟ್ಟು ಬಿಜಾಪುರ, ಬೆಳಗಾಂ ನ ಕೆಲವು ಭಾಗಗಳೂ ಸೇರಿಕೊಂಡು ಕೋಲಾರ ಜಿಲ್ಲೆಯವರಿಗೂ ಈ ಎಲ್ಲಾ ಜಿಲ್ಲೆಗಳಲ್ಲೂ ಒಂದು ಬೆಲ್ಟ್ ಇದೆ, ಮೈಸೂರು ಡಿಸ್ಟ್ರಿಕ್ಟ್‌ನ ಕೆಲವು ತಾಲ್ಲೂಕುಗಳು, ಮಂಡ್ಯ ಡಿಸ್ಟ್ರಿಕ್ಟ್‌ನ ನಾಗ ಮಂಗಲ, ಕೃಷ್ಣರಾಜಪೇಟೆ ತಾಲ್ಲೂಕುಗಳ ಕೆಲವು ಭಾಗಗಳು ಇವುಗಳೆಲ್ಲಾ ಬರಗಾಲ ಪ್ರದೇಶ ವಾಗಿರುವುದರಿಂದ ಇವುಗಳೆಲ್ಲಾ ಡೆವಲಪ್ ಆಗಬೇಕಾದರೆ, 40 ಕೋಟಿ ರೂಪಾಯಿನ ಒಂದು ಇಂಟೆಗ್ರೇಟೆಡ್ ಪ್ಲಾನನ್ನು ತಯಾರು ಮಾಡಿದ್ದೇವೆ. ಅದರಲ್ಲಿ ಸಾಯಿಲ್ ಕನ್‌ಸರ್‌ವೇಷನ್, ಅಫಾರಸ್ಟೇಷನ್, ಕಾಂಟೂರ್ ಬಂಡಿಂಗ್, ಅನಿಮಲ್ ಹಸ್ಬೆಂಡರಿ, ಕಾಟೇಜ್ ಇಂಡಸ್ಟ್ರೀಸ್ ಇವು ಗಳೆಲ್ಲಾ ಬರುತ್ತವೆ. ಜನರಿಗೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಏನೇನು ಅಸ್ಪದ ಇದೆ ಅವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಹಿಂದೆ 50 ವರ್ಷದಲ್ಲಿ ನಮ್ಮ ದೇಶದಲ್ಲಿ ಎಷ್ಟು ಬರಗಾಲ ಬಂದಿತ್ತು, ಆಗ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರು ಎಂಬುದನ್ನು ನೋಡಿಕೊಂಡು ತಾತ್ಕಾ ಲಿಕ ಪರಿಹಾರಕ್ಕೆ ಆ ರೀತಿ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡುವುದಕ್ಕಿಂತಲೂ ಒಂದೇ ವರ್ಷದಲ್ಲಿ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಬಹಳ ಮಟ್ಟಿಗೆ it is an insurance against famine ಎಂಬ ದೃಷ್ಟಿಯಿಂದ ಇಂಟಿಗ್ರೇಟೆಡ್ ಪ್ಲಾನನ್ನು ತಯಾರುಮಾಡಿ ಅದನ್ನು ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದು ಈ ಪ್ರದೇಶಗಳಿಗೆ ಬಹಳ ಮುಖ್ಯವಾದ ಪ್ಲಾನ್ ಆಗಿದೆ. ಮೇಜರ್ ಇರ್ರಿಗೇಶನ್‌ನಲ್ಲಿ ಕೃಷ್ಣಾ ವಾಟರ್ಸ್‌ನ್ನು ಹೇಗೆ ಉಪಯೋಗಿಸಬೇಕೆಂಬ ಪ್ಲಾನ್ 285 ಕೋಟಿ ರೂಪಾಯಿಗಳ 15 ವರ್ಷದ ಪ್ಲಾನ್ ಏನಿದೆ ಅದನ್ನು ತಾತ್ಕಾಲಿಕ ಪ್ಲಾನ್‌ನ ಜೊತೆಯಲ್ಲಿ ತಯಾರುಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರ ಕೊಡುವ ವಿಷಯದಲ್ಲಿ ಸರ್ಕಾರದವರು ತಕಾವಿ ಲೋನ್ ಕೊಡುವುದು, ಬಾವಿ ತೆಗೆಯಲು ಸಾಲ ಕೊಡುವುದು ಈ ತರಹ ರಿಲೀಫ್ ವರ್ಕ್ಸ್‌ಗೂ ಕೂಡ ಸರ್ಕಾರದವರು ಇನ್ನೂ ಕ್ಷಾಮ ಬರದೇ ಇರುವಾಗಲೇ 1964ನೇ ಇಸವಿಗೆ ಸುಮಾರು 65 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದೇವೆ, ಬೆಳಗಾಂನವರು ನಮಗೆ ಮಂಜೂರಾತಿ ಬರುವುದು ನಿಧಾನವಾಗುತ್ತದೆ ಎಂದು ಹೇಳುತ್ತಾ ಇದ್ದುದರಿಂದ ಬೆಳಗಾಂ ಒಂದಕ್ಕೆ 18 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ, ಅಭಾವ ಪರಿಸ್ಥಿತಿ ಉಂಟಾದರೆ ತಕ್ಷಣ ಡಿವಿಜನಲ್ ಕಮಿಷನರೇ ಅದನ್ನು ಮಂಜೂರು ಮಾಡಬಹುದು. ಅದೇ ರೀತಿ ಬೇರೆ ಡಿವಿಜನ್‌ಗಳಿಗೂ ಕೂಡ 1964ರ ಫ್ಯಾಮಿನ್‌ಗೋಸ್ಕರ ಎಂದು ಹೇಳಿ ಹಣವನ್ನು ಮೀಸಲಾಗಿ ಇಟ್ಟಿದ್ದೇವೆ. ಇದು ತಾತ್ಕಾಲಿಕವಾದ್ದು ಆಯಿತು ಇನ್ನು ಮುಂದೆ ಏನಾದರೂ ಬಹಳ ಕೆಟ್ಟ ಪರಿಣಾಮ ಉಂಟಾದದ್ದೇ ಆದರೆ ಅದಕ್ಕೆ ಏನು ಮಾಡಬೇಕೆಂಬುದನ್ನು ಸರ್ಕಾರದವರು ಮತ್ತು ಡೆಪ್ಯೂಟಿ ಕಮಿಷನರುಗಳು ಎಲ್ಲಾ ಸೇರಿದ್ದಾರೆ, ಮಾನ್ಯ ಸಭೆಯ ಸದಸ್ಯರು ಎಲ್ಲರೂ ಇಲ್ಲಿ ಸೇರಿದ್ದೀರಿ, ನೀವುಗಳು ಏನು ಹೇಳುತ್ತೀರೋ ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಎಷ್ಟು ತಕಾವಿ ಸಾಲ ಕೊಡಬೇಕು. ಎಷ್ಟು ರಸ್ತೆಗಳು ಅಥವಾ ಗೋಕಟ್ಟೆಗಳನ್ನು ಕಟ್ಟಬೇಕು ಎಷ್ಟು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಕೊಡಬೇಕು, ಬಾವಿಗಳಿಗೆ ಎಷ್ಟು ಸಾಲ ಕೊಡಬೇಕು ಎನ್ನುವುದನ್ನೆಲ್ಲಾ ಇನ್ನು ಎರಡು ಮೂರು ದಿವಸದಲ್ಲಿ ತೀರ್ಮಾನಮಾಡುವವರು ಆಗಿದ್ದೇವೆ. ಬಹುಶಃ ನಾಳೆ ಸಂಜೆಯ ವೇಳೆಗೆ ತೀರ್ಮಾನವಾದರೆ ಅದನ್ನು ಈ ಮಾನ್ಯ ಸಭೆಯಲ್ಲಿ ಇಡುವುದಕ್ಕೆ ಸಿದ್ಧವಾಗಿದ್ದೇನೆ. ಇದು ರಿಲೀಫ್ ವಿಷಯ ಆಯಿತು.

ಇನ್ನು ಮೂರನೆಯ ರೆಸಲ್ಯೂಷನ್ ಹೈಪ್ರೈಸ್‌ಗೆ ಸಂಬಂಧಪಟ್ಟ ವಿಷಯ. ಇದು ಮೈಸೂರ ಸಂಸ್ಥಾನಕ್ಕೆ ಸಂಬಂಧಪಟ್ಟದ್ದು ಮಾತ್ರವಲ್ಲ ಎಂಬ ಅಂಶವನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳ ಬೇಕು. ಆಲ್ ಇಂಡಿಯಾ ಪ್ರೈಸ್ ಸ್ಟ್ರಕ್ಚರ್ ಒಂದೊಂದು ಬೆಲೆ ಇದೆ ಎಂದು ಅಂದುಕೊಂಡು ಹೋದರೆ ಆಗುವುದಿಲ್ಲ. ಆಲ್ ಇಂಡಿಯಾ ಪ್ರೈಸ್ ಲೆವಲ್ ಒಂದೇ ಇರುತ್ತದೆ. ಆಹಾರ ಧಾನ್ಯಗಳ ಬೆಲೆ ಸುಮಾರು ಲಿವಿಂಗ್ ಇಂಡೆಕ್ಸ್ ಎನ್ನುತ್ತಾರೆ ಅದು 20—24 ಪರ್ಸೆಂಟ್ ಜಾಸ್ತಿಯಾಗಿದೆ. ಇಂಡಿವಿಜ್ಯುಯಲ್ ಕಮಾಡಿಟೀಸ್ ತೆಗೆದುಕೊಂಡರೆ 50 ರಿಂದ 60 ಪರ್ಸೆಂಟ್‌ನಷ್ಟು ಏರಿದೆ. ಒಟ್ಟಿ ನಲ್ಲಿ ಇದು ಮೈಸೂರು ದೇಶಕ್ಕೆ ಒಂದಕ್ಕೆ ಇಲ್ಲ, ಇದು ಇಡೀ ಇಂಡಿಯಾದೇಶಕ್ಕೆ ಅನ್ವಯಿಸುತ್ತದೆ. ಸೌತ್ ಜೋನ್ ಅಂತ ಹೇಳಿ ಇತ್ತು. 1956ರಲ್ಲಿ ನಾನು ಕೇಂದ್ರದಲ್ಲಿ ಆಹಾರ ಶಾಖೆಯ ಉಪಮಂತ್ರಿ ಯಾಗಿದ್ದಾಗ ಸೌತ್ ಜೋನ್ ಅಂತ ಮಾಡಿದ್ದೆವು, ಸೌತ್ ಜೋನ್ ಎಂದರೆ ಏನು ಎಂಬುದನ್ನು ಒಂದೆರಡು ಮಾತಿನಲ್ಲಿ ಹೇಳುತ್ತೇನೆ. ದಕ್ಷಿಣ ಭಾರತದಲ್ಲಿ ದಕ್ಷಿಣ ವಲಯಕ್ಕೆ ನಾಲ್ಕು ಸಂಸ್ಥಾನಗಳು ಸೇರುತ್ತವೆ, ಅವು ಯಾವುವು ಎಂದರೆ ಆಂಧ್ರ, ಮದರಾಸು, ಕೇರಳ ಮತ್ತು ಮೈಸೂರು. ಸುಮ್ಮನೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಕೂಪನ್, ಕಂಟ್ರೋಲ್, ಪ್ರೊಕ್ಯೂರ್ಮೆಂಟ್ ಅಂತ ಹೇಳಿ ಅವುಗಳನ್ನೆಲ್ಲಾ ಇಟ್ಟುಕೊಳ್ಳುವುದಕ್ಕಿಂತಲೂ ಮೂವ್‌ಮೆಂಟ್ ಆಫ್ ಫುಡ್‌ಗ್ರೇನ್ಸ್ ಇರಬೇಕೆಂಬ ದೃಷ್ಟಿಯಿಂದ ಸೌತ್‌ಜೋನ್ ಅಂತ ಹೇಳಿ ಮಾಡಿದೆವು. ಆಂಧ್ರದಲ್ಲಿ ಅಕ್ಕಿ ಅವರಿಗೆ ಸರ್‌ಪ್ಲಸ್ ಆಗಿತ್ತು. ಬೆಜವಾಡ ರೈಲ್ವೆಸ್ಟೇಷನ್‌ನಲ್ಲಿ ಲೆಕ್ಕ ತೆಗೆದುಕೊಂಡು ನೋಡಿದೆವು, 6 ಲಕ್ಷ ಟನ್ ಅಕ್ಕಿ ಆಂಧ್ರದಿಂದ ವರ್ಷೇ ವರ್ಷೇ ಹೊರಕ್ಕೆ ಹೋಗುತ್ತಾ ಇತ್ತು-ಅದು ಬರೀ ರೈಲ್ವೆ ಮುಖಾಂತರ-ಇನ್ನು ಟ್ರಕ್ಸ್ ಮತ್ತು ಮಾಡರನ್ ಮೀನ್ಸ್ ಆಫ್ ಕಮ್ಯೂನಿಕೇಷನ್ಸ್ ಮುಖಾಂತರ 2 ಲಕ್ಷ ಟನ್ ಆದರೂ ಹೋಗುತ್ತಾ ಇರಬಹುದು ಎಂದು ಲೆಕ್ಕ ತೆಗೆದುಕೊಂಡು 8 ಲಕ್ಷ ಟನ್ ಅಕ್ಕಿ ಆಂಧ್ರದಲ್ಲಿ ಸರ್‌ಪ್ಲಸ್ ಇದೆ ಎಂದು ಲೆಕ್ಕ ಸಿಕ್ಕಿತು. ಇತರ ಪ್ರದೇಶಗಳನ್ನು ಡಿಫಿಸಿಟ್ ಏರಿಯಾ ಎಂದು ಲೆಕ್ಕ ಹಾಕಿದೆವು. ಕೇರಳದಲ್ಲಿ 12 ಲಕ್ಷ ಟನ್ ಅವರಿಗೆ ಬೇಕಾಗಿತ್ತು, 6 ಲಕ್ಷಟನ್ ಅವರು ಹೊರಗಿನಿಂದ ತೆಗೆದುಕೊಳ್ಳುತ್ತಾ ಇದ್ದರು. ಅಲ್ಲಿ 50 ಪರ್ಸೆಂಟ್ ಡಿಫಿಸಿಟ್ ಇತ್ತು. ಮದರಾಸ್‌ನಲ್ಲಿ ಸುಮಾರು ಒಂದು ಲಕ್ಷಟನ್ ಇತ್ತು. ಮೈಸೂರಿನಲ್ಲಿ ಸುಮಾರು 50 ಸಾವಿರ ಟನ್, ಈ ರೀತಿ ಒಟ್ಟು ಏಳೂವರೆ ಲಕ್ಷ ಅಥವಾ 8 ಲಕ್ಷಟನ್ ಡಿಫಿಸಿಟ್ ಬರುತ್ತದೆ. ಅದನ್ನು 8 ಲಕ್ಷಟನ್ ಅಷ್ಟು ಆಂಧ್ರದಲ್ಲಿ ಜಾಸ್ತಿ ಇರುವುದರಿಂದ ಸರಿಪಡಿಸಿಕೊಳ್ಳಬಹುದು ಎಂದು ಹೇಳಿ ಒಂದು ವ್ಯವಸ್ಥೆಯನ್ನು ಮಾಡಿದ್ದೆವು. ಅದ ಬಹಳ ಚೆನ್ನಾಗಿ ನಡೆದುಕೊಂಡು ಹೋಯಿತು—ಅದು ಸುಮಾರು 6 ವರ್ಷಗಳ ಕಾಲ ನಡೆದಮೇಲೆ ಈ ವರ್ಷ ಕೇಂದ್ರ ಸರ್ಕಾರದವರು ನಮ್ಮನ್ನು ಕೇಳದೆ ಅಲ್ಲಿ ಒಂದು ಲೆವೀಯನ್ನು ಇಂಪೋಸ್ ಮಾಡಿದರು. ಅದರ ಪರಿಣಾಮವಾಗಿ ಬೆಂಗಳೂರಿಗೆ ಬರುತ್ತಾ ಇದ್ದ ಅಕ್ಕಿ ನಿಂತುಹೋಯಿತು. ಅವರು ಲೆವೀ ಸಿಸ್ಟಂ ಇಂಟ್ರಡ್ಯೂಸ್ ಮಾಡಿದಮೇಲೆ ವರ್ತಕರು ನೂರು ಮೂಟೆ ಅಕ್ಕಿ ಕಳುಹಿಸಬೇಕಾದರೆ 60 ರೂಪಾಯಿನಂತೆ ಕೊಂಡುಕೊಂಡು 40 ರೂಪಾಯಿನಂತೆ ಸರ್ಕಾರದವರಿಗೆ ಕೊಡಬೇಕು. 20 ರೂಪಾಯಿ ನಷ್ಟವಾಗುತ್ತದೆ. ಯಾವ ದಾನಶೂರ ಕರ್ಣನಾನೆ ಆ ರೀತಿ ನಷ್ಟ ಮಾಡಿಕೊಂಡು ಕಳುಹಿಸುತ್ತಾನೆ? ಅವನು ಅದನ್ನು ಬೆಂಗಳೂರಿನವರ ಮೇಲೆ ಹಾಕಿದ, ಇಲ್ಲಿ ಪಲ್ಲಾ ಒಂದಕ್ಕೆ 70 ರೂಪಾಯಿ ಆಯಿತು. ಆಂಧ್ರದಿಂದ ಬೆಂಗಳೂರಿಗೆ ಬರುತ್ತಾ ಇದ್ದ ಒಂದೂವರೆ ಎರಡು ಲಕ್ಷ ಟನ್ ನಿಂತು ಹೋಯಿತು. ಡೆಲ್ಲಿಗೆ ಹೋಗಿದ್ದಾಗ ಅದನ್ನು ತೆಗೆದುಬಿಡಿ ಎಂದು ಹೇಳಿದೆವು, ಆದರೆ ಅವರು ಮನಸ್ಸು ಮಾಡಲಿಲ್ಲ. ಈಗ ತಮಗೆ ಗೊತ್ತಿದೆ ಮುಖ್ಯ ಮಂತ್ರಿಗಳು ಚೀಫ್ ಮಿನಿಸ್ಟರ ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ಆ ಲೆವೀಯನ್ನು ತೆಗೆದು ಫ್ರೀ ಫ್ಲೋ ಆಫ್ ರೈಸ್‌ಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡಿದರೆ ಈ ಸಮಸ್ಯೆ ಖಾಯಮ್ಮಾಗಿ ಪರಿಹಾರವಾಗುತ್ತದೆ. ಅದರಿಂದ ಬಹುಮಟ್ಟಿಗೆ ಅಕ್ಕಿಯ ಬೆಲೆಯೂ ಕೂಡ ಇಳಿಯುತ್ತದೆ. ಈಗ ಬೆಂಗಳೂರಿನಲ್ಲಿ 80-85 ರೂಪಾಯಿಗಳವರೆಗೂ ಹೋಗಿದೆ. ಅದು ಹತ್ತು ರೂಪಾಯಿ ನಷ್ಟಾದರೂ ಖಾಯಂ ಆಗಿ ಕಡಿಮೆಯಾಗುತ್ತದೆ. ರೈಲ್ವೆ ಮಿನಿಸ್ಟರನ್ನೂ ಸಹ ಕೇಳಿದ್ದೇವೆ, ಅವರೂ ಸಹ ಆದಷ್ಟು ಜಾಗ್ರತೆ ವ್ಯಾಗನ್ ಕೊಡುತ್ತೇವೆ ಎಂದು ಹೇಳಿದ್ದಾರೆ, ವಿಜಯವಾಡದಿಂದ ಇಲ್ಲಿಗೆ ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದಾರೆ, ಮೊದಲನೆಯದಾಗಿ ಮಂಗಳೂರು ಜಿಲ್ಲೆಗೆ ಬೇಕಾಗಿದ್ದ ಅಕ್ಕಿ ಸರಬರಾಯಿ ಮಾಡಲು ಕಾರ್ಯಕ್ರಮ ಕೈಕೊಳ್ಳಲಾಗಿದೆ, 2-3 ದಿವಸಗಳಲ್ಲಿ ಮೂವ್‌ಮೆಂಟ್ ಅಂದರೆ ಸರಬರಾಜು ಹೋಗಲು ಪ್ರಾರಂಭವಾಗುತ್ತದೆ. ರಾಯಚೂರು, ಕುಷ್ಟಗಿ, ಗೋಕಾಕ್ ಮುಂತಾದ ಕಡೆಗಳಲ್ಲಿ 4-5 ತಿಂಗಳಿಂದ ಕ್ಷಾಮವಿದೆಯೆಂದು ಹೇಳುತ್ತಿರುವುದರಿಂದ ಅಲ್ಲಿಗೆ ಒಂದು ಲಕ್ಷ ಪಲ್ಲ ಗೋದಿ ಸರಬರಾಯಿ ಮಾಡುತ್ತೇವೆ, ಡೆಪ್ಯುಟಿ ಕಮಿಷನರು ಎಲ್ಲೆಲ್ಲಿಗೆ ಎಷ್ಟೆಷ್ಟು ಬೇಕೆಂಬುದನ್ನು ನೋಡಿ ಕೇಳಿದಾಗ ಅಲಾಟ್ ಮಾಡುತ್ತಾರೆ. ಈಗ ತಿಂಗಳಿಗೆ ಒಂದು ಲಕ್ಷ ಪಲ್ಲ ಗೋಧಿ ಬರುತ್ತದೆ, ತಕ್ಷಣ ಎರಡು ಲಕ್ಷ ಪಲ್ಲ ಗೋದಿ ಕೊಡಲು ಒಪ್ಪಿದ್ದಾರೆ. ಅದನ್ನು ಸಾಗಿಸುವ ಕೆಲಸ ಪ್ರಾರಂಭವಾಗಿದೆ. ಮೊನ್ನೆ ಬೆಳಿಗ್ಗೆ ಸಾಗಾಣಿಕೆ ಪ್ರಾರಂಭವಾಯಿತೆಂದು ದೆಹಲಿಯಿಂದ ಫೋನ್‌ಮಾಡಿದ್ದಾರೆ. ವ್ಯಾಗನ್ ಹೊರಟಿದೆ, ಬಹುಶ: 7-8 ದಿವಸಗಳಲ್ಲಿ ಹಂಚಲು ಅವಕಾಶವಾಗಬಹುದು. ಈಗ ಜೋಳವಿಲ್ಲ, ಗೋಧಿ ಉಪಯೋಗಿಸುವವರಿಗೆ ಸಾಧ್ಯವಾದಷ್ಟು ಅದನ್ನೊದಗಿಸಲು ಪ್ರಯತ್ನಮಾಡುತ್ತೇವೆ. 2 ಲಕ್ಷ ಪಲ್ಲ ಗೋದಿ ಕೊಡಲು ಕೇಂದ್ರಸರ್ಕಾರ ಒಪ್ಪಿ ಕಳುಹಿಸುತ್ತಿದೆ. ಒಂದು ಲಕ್ಷ ಪಲ್ಲ ಅಕ್ಕಿ ನಾಳೆ ಅಥವಾ ನಾಡಿದ್ದು ಸಾಗಿಸಲು ಪ್ರಾರಂಭಮಾಡುತ್ತಾರೆ. ಕೇಂದ್ರ ಸರ್ಕಾರದಿಂದ ಅಷ್ಟು ಅಕ್ಕಿ ಬರುವುದರ ಜೊತೆಗೆ ಆಂಧ್ರದಿಂದ ಫ್ರೀ ಮೂವ್‌ಮೆಂಟ್‌ಗೆ ಅವಕಾಶ ಕೊಟ್ಟಿರುವುದರಿಂದ ಅಲ್ಲಿಂದಲೂ ಬೇಕಾದಷ್ಟು ಬರುತ್ತದೆ; ಸುಮಾರು 15 ಲಕ್ಷ ಪಲ್ಲ ಬರುತ್ತದೆ. ಅದೆಲ್ಲಾ ಬಂದು ಹಂಚಲು ಪ್ರಾರಂಭಿಸಿದಾಗ ಒಂದು ಹದ್ದುಬಸ್ತಿಗೆ ಬರುತ್ತದೆ. ಆದರೆ ದರ ಅಷ್ಟೊಂದು ಕೆಳಕ್ಕೆ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ; ಪಲ್ಲಾಕ್ಕೆ 10 ರೂಪಾಯಿ ಇಳಿಯಬಹುದು. ಪೂರ್ಣವಾಗಿ ದರವನ್ನು ಹಿಂದಿದ್ದ ಲೆವಲ್‌ಗೆ ತರುವುದು ಕಷ್ಟ. ಈಗ ಹಣ ದೇಶದಲ್ಲಿ ಬಹಳವಾಗಿದೆ, ಪ್ಲಾನ್ ಖರ್ಚು ಜಾಸ್ತಿಯಾಗಿದೆ, ಡಿಫೆನ್ಸ್ ಬಾಬತು ಖರ್ಚು

ಸಹ ಬಹಳವಾಗಿದೆ. ಇದರ ಜೊತೆಗೆ ಜನಸಂಖ್ಯೆ ಕೂಡ ಬೇಕಾದಷ್ಟು ಜಾಸ್ತಿಯಾಗುತ್ತಿದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ 10 ಕೋಟಿಯಷ್ಟು ಜನಸಂಖ್ಯೆ ಜಾಸ್ತಿಯಾಗಿದೆ. ಬಹುಶಃ ಪಾಕೀಸ್ಥಾನಕ್ಕಂತ ಹೆಚ್ಚಾಗಿದೆ. 1971ರ ಸೆನ್ಸಸ್ ಹೊತ್ತಿಗೆ 56 ಕೋಟಿ ಆಗಬಹುದೆಂದು ಹೇಳುತ್ತಾರೆ. ಅದು ನಿಜ. ಈಗ 46 ಕೋಟಿ ಇದೆ, ಬಹುಶಃ 6-7 ವರ್ಷಗಳಲ್ಲಿ ಅಷ್ಟಾಗಬಹುದೆಂಬ ನಿರೀಕ್ಷೆಯಿರಬಹುದು. ಒಂದು ಕಡೆ ಜನಸಂಖ್ಯೆ ಬೆಳೆಯುತ್ತಿದ್ದರೆ ಇನ್ನೊಂದು ಕಡೆ ಡಿಫೆನ್ಸ್ ಖರ್ಚು ಜಾಸ್ತಿಯಾಗುತ್ತಿದೆ. ಆಹಾರ ಬೆಳೆಯುವುದು ಬಹಳ ಕಷ್ಟದ ಕೆಲಸ, ಸ್ವಲ್ಪ ಪ್ರಯಾಸ ಜಾಸ್ತಿ. ಕಷ್ಟ ಪಡುವ ಜನರ ಸಂಖ್ಯೆ ಕಡಮೆಯಾಗುತ್ತಿದೆ. ಆದುದರಿಂದ ಆಹಾರ ಪದಾರ್ಥಗಳ ಬೆಲೆ ಹಿಂದಿದ್ದಷ್ಟು ಕಡಮೆ ಯಾಗಲಾರದು. ಹಿಂದೆ ರೂಪಾಯಿಗೆ 4 ಸೇರು ಅಕ್ಕಿಯಿದ್ದರೆ ಈಗ ಒಂದು ಸೇರಿನಂತೆ ದೊರೆತರೆ ಅದೇ ಪುಣ್ಯ. ನೇಗಿಲು ಹಿಡಿದುಕೊಂಡು ಉತ್ತು ಬಿತ್ತಿ ಬೆಳೆ ಮಾಡಲು ಬಹಳ ಮಂದಿ ಇಷ್ಟಪಡುವುದಿಲ್ಲ. ನಮ್ಮ ಮಕ್ಕಳು ವಿದ್ಯಾವಂತರಾಗುತ್ತಿದ್ದಾರೆ, ಅವರು ನೇಗಿಲು ಹಿಡಿಯಲು ಒಪ್ಪುವುದಿಲ್ಲ, ಟ್ರಾಕ್ಟರ್ ಅಥವ ಬುಲ್‌ಡೋಜರ್ ಕೊಟ್ಟರೆ ವ್ಯವಸಾಯ ಮಾಡಬಹುದು. ಆದರೆ ನಮ್ಮ ದೇಶದಲ್ಲಿ ಮೆಕನೈಜೇಷನ್ ಇಲ್ಲ, ಅದನ್ನು ತರಲು ಅನೇಕ ಕಾರಣಗಳಿಂದ ಸಾಧ್ಯವಾಗಿಲ್ಲ. ವಿದ್ಯಾವಂತರು ಮೆಕನೈಜೇಷನ್ ಇಲ್ಲದೆ ವ್ಯವಸಾಯ ಮಾಡಲು ಒಪ್ಪುವುದು ಬಹಳ ಕಷ್ಟ. ಈ ದಿವಸ ಅಮೇರಿಕಾದಲ್ಲಿ ಒಬ್ಬ ತನಗೆ ಬೇಕಾಗುವುದಕ್ಕಿಂತ ಹೆಚ್ಚಾಗಿ ಬೆಳೆದು ಇನ್ನೂ 20 ಜನರಿಗಾಗುವಷ್ಟನ್ನು ಒದಗಿಸುತ್ತಾನೆ. ಅಮೇರಿಕಾದಲ್ಲಿರುವ 20 ಕೋಟಿ ಜನರಲ್ಲಿ 2 ಕೋಟಿ ಅಥವಾ 3 ಕೋಟಿ ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ, ಅವರು ತಮಗೆ ಬೇಕಾದಷ್ಟನ್ನು ಮಾತ್ರವಲ್ಲವೆ ಇತರರಿಗೂ ಆಗುವಷ್ಟು ಬೆಳೆಯುತ್ತಾರೆ. ಆದರೆ ಅಲ್ಲಿ ಮೆಷೀನರಿ ಸಹಾಯ ದೊರೆಯುವುದು. ಇಲ್ಲಿ ಮನುಷ್ಯನೇ ಕಷ್ಟಪಟ್ಟು ಬೆಳೆಯಬೇಕು. ಮೆಷೀನರಿಯ ಸಹಾಯದಿಂದ ಬೆಳೆದರೆ ಬೆಲೆ ಕಡಮೆಯಾಗಬಹುದು, ಮನುಷ್ಯ ಕೈಯಿಂದ ಕಷ್ಟಪಟ್ಟು ಬೆಳೆದರೆ ಖರ್ಚು ಮತ್ತು ಕಷ್ಟ ಹೆಚ್ಚುತ್ತದೆ. ಆ ದೃಷ್ಟಿಯಿಂದ ಆಹಾರ ವಸ್ತುಗಳ ಬೆಲೆ ಹಿಂದೂಸ್ಥಾನದಲ್ಲಿ ಕಡಮೆಯಾಗುತ್ತದೆಂಬುದನ್ನು ಮರೆಯಬೇಕು, ಈಗಿರುವ ಬೆಲೆ ರೈತರಿಗೆ ಅನುಕೂಲವಾಗಿದೆ. ಆದರೆ ಉಪಯೋಗಿಸುವವರಿಗೆ ತೊಂದರೆಯಾಗುತ್ತದೆ. ಈಗಿನ ಬೆಲೆಯ ಅನಕೂಲ ರೈತರಿಗೆ ಹೋಗುವುದಿಲ್ಲ ಎಂಬ ಅಪಾದನೆಯಿದೆ; ಸೇಕಡ 90 ಭಾಗ ವರ್ತಕರಿಗೆ ಹೋಗುತ್ತದೆಂದು ಹೇಳುತ್ತಾರೆ. ಕೆಲವು ರೈತರು ಸಹಕಾರ ಸಂಸ್ಥೆಗಳಿಂದ ದೊರೆಯುವ ಸಾಲ, ದಾಸ್ತಾನಿಡಲು ಇರುವ ಅನುಕೂಲ ಮುಂತಾದ ಸೌಕರ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ಶಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಆಹಾರ ಪದಾರ್ಥಗಳ ಬೆಲೆ ಈಗಿರುವುದಕ್ಕಿಂತ 10 ರೂಪಾಯಿ ಕಡಮೆಯಾಗುತ್ತದೆ. ಇದರ ಜೊತೆಗೆ ಮುಂದೆ ಜಾಸ್ತಿಯಾಗದಂತೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ತಮ್ಮ ತಾಲ್ಲೂಕುಗಳಲ್ಲಿರುವ ಪರಿಸ್ಥಿತಿ ತಿಳಿಸಿದರೆ ನಾವು ಎಲ್ಲಾ ವಿಷಯಗಳನ್ನೂ ತಿಳಿದುಕೊಂಡು ಉತ್ತರ ಹೇಳುವಾಗ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ—ಮುಖ್ಯಮಂತ್ರಿಗಳ ಸಭೆಯಲ್ಲೇನು ತೀರ್ಮಾನವಾಗಿದೆ, ಸರ್ಕಾರ ಏನು ಕಾರ್ಯಕ್ರಮ ಕೈಕೊಳ್ಳಬೇಕೆಂದಿದೆ ಎಂದು ಹೇಳಿದರೆ ಒಳ್ಳೆಯದು. ಈಗ ಪತ್ರಿಕೆಗಳಲ್ಲಿ ಕೆಲವು ವಿಷಯಗಳು ಪ್ರಕಟವಾಗಿವೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳೇನು ಸಲಹೆ ಕೊಟ್ಟರು, ಮುಂದೇನು ಕಾರ್ಯಕ್ರಮ ಕೈಕೊಳ್ಳುತ್ತಾರೆ ಎಂಬುದನ್ನು ಹೇಳಿದರೆ ನಾವು ಊಹಿಸುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿ ಹೇಳಲು ಎಷ್ಟು ಅವಕಾಶವಿದೆಯೋ ಅಷ್ಟನ್ನು ಹೇಳಿದ್ದೇನೆ, ಮಿಕ್ಕ ವಿಷಯ ಸಭೆಗೆ ಬೇಕಾಗಿಲ್ಲ, ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ. 2 ಲಕ್ಷ ಪಲ್ಲ ಗೋಧಿ ಕೊಡಲು ಒಪ್ಪಿದರು, ಅದನ್ನು ತಕ್ಷಣ ಕಳುಹಿಸುತ್ತಾರೆ, ಒಂದು ಲಕ್ಷ ಪಲ್ಲ ಅಕ್ಕಿ ಕೊಡಲು ಒಪ್ಪಿಕೊಂಡರು, ನಾಳೆ ನಾಡಿದ್ದರಲ್ಲಿ ಅದನ್ನೂ ಕಳುಹಿಸುತ್ತಾರೆ. ನಾವು 40 ಕೋಟಿ ರೂಪಾಯಿಗಳ ಪ್ಲಾನ್ ಕಳುಹಿಸಿದ್ದೇವೆ, ಅದನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳಬೇಕೆಂದು ಹೇಳಿದ್ದೇವೆ. ಬರುವ ತಿಂಗಳು ಕೇಂದ್ರದ ಆಹಾರ ಸಚಿವರಾದ ಸುಬ್ರಹ್ಮಣ್ಯಂರವರು ಬರುತ್ತಾರೆ. ಮೈನರ್ ಇರಿಗೇಷನ್, ಪೌಲ್ಟ್ರಿ ಅನಿಮಲ್ ಹಸ್ಬೆಂಡ್ರಿ, ಹಾರ್ಟಿಕಲ್ಚರ್ ಮುಂತಾದುವುಗಳ ಡೆವಲಪ್‌ಮೆಂಟ್ ಬಗ್ಗೆ ಕೆಲವು ಯೋಜನೆಗಳನ್ನು ಮಾಡಬೇಕೆಂದು ಹೇಳಿದ್ದರು, ಅದರಂತೆ ಮಾಡುತ್ತಿದ್ದೇವೆ, 6 ನೆಯ ತಾರೀಖು ಇಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

4-00 P.M.

ಶ್ರೀ ಎಸ್. ಗೋಪಾಲಗೌಡ.—ಸಕ್ಕರೆ ಹಾಗೂ ಗೋಧಿ ಇವುಗಳ ಬಗ್ಗೆ ಹತೋಟಿ ಯಾವ ರೀತಿ ಇರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸಕ್ಕರೆಯನ್ನು ಬೆಂಗಳೂರು ಸಿಟಿಯಲ್ಲಿ ಮಾತ್ರ ಶೇಕಡಾ ಅರವತ್ತು ಭಾಗದಷ್ಟು ಸೊಸೈಟಿಗಳ ಮೂಲಕ ಹಂಚುತ್ತಿದ್ದೇವೆ. ಶೇಕಡಾ ನಲವತ್ತರಷ್ಟು ಭಾಗ ವರ್ತಕರುಗಳ ಮೂಲಕ ಹಂಚುತ್ತಿದ್ದೇವೆ. ಸರಕಾರದವರು ಇನ್ನು ಮುಂದೆ ಎಲ್ಲ ಪದಾರ್ಥಗಳನ್ನೂ ಸಹಕಾರ ಸಂಘಗಳ ಮೂಲಕವೇ ಮಾರಾಟ ಮಾಡಬೇಕೆಂದು ಕೇಂದ್ರ ಸರಕಾರದವರೂ ಹೇಳಿದ್ದಾರೆ. ಆದರೆ ಎಲ್ಲ ಕಡೆಯೂ ಸೊಸೈಟಿಗಳು ಇಲ್ಲ. ಎಲ್ಲೆಲ್ಲಿ ಸೊಸೈಟಿಗಳಿರುತ್ತವೋ ಅಲ್ಲೆಲ್ಲಾ ಹಂಚುವ ವ್ಯವಸ್ಥೆ ಮಾಡಲಾಗುತ್ತದೆ. ಎಲ್ಲಿ ಇಲ್ಲವೋ ಅಲ್ಲಿ ವರ್ತಕರುಗಳ ಮೂಲಕ ಇಲ್ಲವೇ ಫೇರು ಪ್ರೈಸ್ ಷಾಪುಗಳ ಮೂಲಕ ಹಂಚುವ ವ್ಯವಸ್ಥೆ ಮಾಡಬೇಕಾಗಿದೆ. ಈಗ ಬೆಂಗಳೂರಿನಲ್ಲೇ ಸಾಕಷ್ಟು ಸೊಸೈಟಿಗಳು ಇಲ್ಲ. ಕೇವಲ 60 ಸೊಸೈಟಿಗಳಿವೆ. ಅದರಿಂದ ನಾವು 1,200 ಡಿಪೋಗಳಿಗೆ ಸಕ್ಕರೆ ಹಂಚಲು ಪರ್ಮಿಟ್ಟುಗಳನ್ನು ಕೊಟ್ಟಿದ್ದೇವೆ. ಇವರೆಲ್ಲ ಸಿಟಿಯ ಎಲ್ಲ ಭಾಗದಲ್ಲೂ ಸ್ಟೋರುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವಂತಹವರು. ಇವರಲ್ಲಿ ಎಲ್ಲ ಸಾಮಾನುಗಳನ್ನು ಕೊಂಡುಕೊಳ್ಳುವ ಜನರು ಬಂದಾಗ ಸಕ್ಕರೆಯನ್ನೂ ಕೇಳುತ್ತಾರೆ. ಆಗ ಅವರನ್ನೂ ಮಲ್ಲೇಶ್ವರದ ಸೊಸೈಟಿಗೋ ಇಲ್ಲವೇ ಬಸವನಗುಡಿಯ ಸೊಸೈಟಿಗೋ ಹೋಗಬೇಕೆಂದು ಹೇಳಿದರೆ ಅವರುಗಳಿಗೆ ಬಹುತೊಂದರೆಯಾಗುತ್ತದೆ. ಆದುದರಿಂದ ಸಕ್ಕರೆ ಎಲ್ಲವನ್ನೂ ಪೂರ್ತಿಯಾಗಿ ಸೊಸೈಟಿಗಳವರೇ ಮಾರಬೇಕೆಂದು ಮಾಡಿಲ್ಲ. ಎಲ್ಲ ಬೀದಿ ಬೀದಿಗಳಲ್ಲಿಯೂ ಪ್ರಾವಿಷನ್ನು ಸ್ಟೋರುಗಳನ್ನಿಟ್ಟುಕೊಂಡಿರುವ ವರ್ತಕರುಗಳಿಗೂ ಪರ್ಮಿಟ್ಟುಗಳನ್ನು ಕೊಟ್ಟು ಸಕ್ಕರೆ ಮಾರಲು ಅವಕಾಶವನ್ನು ಮಾಡಿ ಕೊಡಲಾಗಿದೆ, ಇದರಿಂದ ಕೊಳ್ಳುವ ಜನರಿಗೂ ಅನುಕೂಲ ವಾಗುತ್ತದೆ ಎಂದು ಈ ರೀತಿ ಮಾಡಲಾಗಿದೆ. ಬರೀ ಸಕ್ಕರೆಗಾಗಿ ಒಂದು ಡಿಪೋ ಮಾಡಬೇಕಾದರೆ ಕನಿಷ್ಟಪಕ್ಷ 500 ರೂಪಾಯಿಗಳಷ್ಟು ಬಂಡವಾಳ ಇರಬೇಕು. ಅದಕ್ಕೆ ಒಬ್ಬರು ಗುಮಾಸ್ತರು, ಬಿಲ್ಲು ಬರೆಯಲು ಮೇಜು ಮತ್ತು ಕುರ್ಚಿ ಇತ್ಯಾದಿಗಳೆಲ್ಲಾ ಬೇಕು. ಇದೆಲ್ಲ ಮಾಡಿ ಬರೀ ಸಕ್ಕರೆ ಒಂದನ್ನೇ ಮಾರಿದರೆ ಅವನಿಗೆ ಲಾಭ ಬರುವುದಿಲ್ಲ. ಇತರ ಸಾಮಾನುಗಳನ್ನು ಇಟ್ಟು ಕೊಂಡಿರುವವರಿಗೆ ಸಕ್ಕರೆಯನ್ನೂ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಅದರಲ್ಲೂ ಡಿಪೋ ಇಡಲು ಸಾಕಷ್ಟು ಅನುಭವ ಪಡೆದಿರುವವರು ಇರಬೇಕು. ಆದ್ದರಿಂದ ಈಗ ಈ ಬೆಂಗಳೂರು ಸಿಟಿಯಲ್ಲಿ 1,200 ಕಡೆಗಳಲ್ಲಿ ಹಂಚುತ್ತಿದ್ದೇವೆ. ಆಗಲೇ ಹೇಳಿದ ಹಾಗೆ ಸಕ್ಕರೆ ಶೇಕಡಾ 60 ಭಾಗದಷ್ಟು ಸೊಸೈಟಿಗಳ ಮೂಲಕ ಹಂಚಲಾಗುತ್ತಿದೆ ಮತ್ತು ಶೇಕಡಾ 40 ಭಾಗದಷ್ಟು ಇತರ ಕಡೆಗಳಲ್ಲಿ ಹಂಚಲಾಗುತ್ತಿದೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಮೈಸೂರು ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ಮಾನ್ಯ ಆಹಾರ ಸಚಿವರು ಈ ಸಭೆಯ ಮುಂದೆ ಬಹಳ ಸೂಕ್ಷ್ಮವಾಗಿ ಪರಿಚಯ ಮಾಡುತ್ತ ದೇಶದ ಎಲ್ಲ ಪ್ರದೇಶಗಳಲ್ಲೂ ಇರತಕ್ಕ ಪರಿಸ್ಥಿತಿಯನ್ನು ಕುರಿತು ಕೆಲವು ಅಂಕಿಅಂಶಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಆಹಾರ ಪರಿಸ್ಥಿತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಈ ಅಭಾವದ ಪರಿಸ್ಥಿತಿಯ ವಿಚಾರ ನಮ್ಮ ಸಭೆಯಲ್ಲಿ ವರ್ಷೇ ವರ್ಷೇ ಬರುತ್ತಲೇ ಇದೆ.

DEPUTY SPEAKER.—There are so many members who wish to participate in the Debate. It would therefore, be better if each member takes as much less time as possible.

ಶ್ರೀ ಎಸ್. ಶಿವಪ್ಪ.—ಇದರ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ಸರ್ವೇ ಸಾಮಾನ್ಯವಾಗಿ ಒಂದೇ ಧಾಟಿಯಲ್ಲೇ ಚರ್ಚೆಗಳು ಹಾಗೂ ಮಂತ್ರಿಗಳ ಉತ್ತರಗಳು ನಡೆಯುತ್ತಿರುತ್ತವೆ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಈ ದೇಶದಲ್ಲಿ ಎಷ್ಟು ಆಹಾರ ಬೆಳೆಯಬೇಕೋ ಅಷ್ಟನ್ನು ಮಾತ್ರ ಬೆಳೆಸಿದರೆ ಸಾಕು ಎಂದು ಸರಕಾರಕ್ಕೆ ಯೋಚನೆ ಇರುವ ಹಾಗಿದೆ. ಆದರೆ ದೇಶದಲ್ಲಿ ಪುಷ್ಟಿಕರ ವಾದ ಆಹಾರವನ್ನು ದಿಟ್ಟತನವಾದ ಜನರನ್ನು ಬೆಳೆಸಬೇಕು ಎನ್ನುವುದು ಸರಕಾರದ ಜವಾಬ್ದಾರಿ ಯಲ್ಲ ಎಂದು ತಿಳಿದಿರುವಂತೆ ತೋರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಸರಕಾರ ಅಧಿಕಾರಕ್ಕೆ ಬಂದು 16 ವರ್ಷಗಳಾದರೂ ಈ ಆಹಾರದ ಸಮಸ್ಯೆಯನ್ನು ಪರಿಹಾರ ಮಾಡಲು ಏನೊಂದು ಶಾಶ್ವತವಾದ ಕಾರ್ಯಕ್ರಮವನ್ನು ಮಾಡದೇ ಬರೀ ಟೆಂಪರರಿ ಮೆಷರ್ಸ್‌ಗಳನ್ನು ಮಾಡಿ ಕೊಂಡು ಬಂದಿದ್ದಾರೆಯೇ ಹೊರತು ಮತ್ತೇನೂ ಮಾಡಿಲ್ಲ ಎಂದು ಅವರೇ ಎದೆ ತಟ್ಟಿಕೊಂಡು ಹೇಳಬೇಕಾಗಿದೆ. ನಿಮ್ಮ ಪ್ಲಾನುಗಳ ಬಗ್ಗೆ ಒಂದು ಇಂಟರೀಂ ರಿಪೋರ್ಟು ಕೊಟ್ಟಿರುವ ಒಂದು ಅಂಕೆ ಸಂಖ್ಯೆಗಳ ಪ್ರಕಾರ ಮೈಸೂರು ದೇಶದಲ್ಲಿ ನಮಗೆ ಬೇಕಾಗುವ ಧಾನ್ಯ ಸುಮಾರು 40 ದಶ ಲಕ್ಷ ಟನ್ನುಗಳಷ್ಟು ಎಂದರೆ 40 ಮಿಲಿಯನ್ನು ಟನ್ನುಗಳು ಆಹಾರ ಬೇಕು. ಈ ಹತ್ತು ವರ್ಷಗಳ ಅವಧಿಯಲ್ಲಿ 28 ಲಕ್ಷದಷ್ಟು ಜನಸಂಖ್ಯೆ ಏರುತ್ತಿರುವ ಈ ಕಾಲದಲ್ಲಿ ಇಲ್ಲಿರುವ ಅಂಕೆ ಸಂಖ್ಯೆಗಳಂತೆ ನಮಗೆ ಬೆಳೆಯಾಗಿರುವುದು ಕೇವಲ 31 ದಶಲಕ್ಷ ಟನ್ನುಗಳಷ್ಟು ಮಾತ್ರ ಆಹಾರವನ್ನು ಬೆಳೆಯ ಲಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆಯೊಳಗೆ 40 ದಶಲಕ್ಷ ಟನ್ನುಗಳಷ್ಟು ಆಹಾರ ಬೆಳೆಯಬೇಕೆಂದು ಅಂದಾಜಿತ್ತು. ಆದರೆ ದೇಶದಲ್ಲೀಗ ಸರಕಾರ ಆಹಾರದ ಉತ್ಪತ್ತಿಯನ್ನು ಜಾಸ್ತಿ

ಮಾಡಲು ಇರಿಗೇಷನ್ನು ಪ್ರಾಜೆಕ್ಟುಗಳು, ಗೊಬ್ಬರ ತಯಾರಿಕಾ ಕಾರ್ಖಾನೆಗಳು ಇವನ್ನು ತಯಾರು ಮಾಡಿ ಎಷ್ಟು ಉತ್ಪಾದದೆಯನ್ನು ಹೆಚ್ಚಿಸಬೇಕೆಂದು ಸರಕಾರ ಮಾಡಿ ಎಷ್ಟು ಉತ್ಪಾದನೆ ಮಾಡ ಬೇಕೆಂದು ಇದ್ದರೋ ಅಷ್ಟು ಉತ್ಪತ್ತಿ ಮಾಡಲು ಅವರ ನಿರೀಕ್ಷೆಯಂತೆ ಬಂದಿಲ್ಲ. ರೈತ ಈ ದೇಶದ ಬೆನ್ನು ಮೂಳೆ ಎಂದು ಬಾಯಲ್ಲೇನೋ ಹೇಳುತ್ತ ಬಂದಿದ್ದಾರೆ. ರೈತ ಹೇಗೋ ದವಸವನ್ನು ಬೆಳೆದುಕೊಂಡು ಜೀವನ ಮಾಡುತ್ತಾನೆ. ಅವನಿಗೂ ಭೂದೇವಿಯು ಕರುಣೆ ಬಂದು ವರುಣ ದೇವರ ಕೃಪೆ ಇದ್ದು ಮಳೆ ಬಂದರೆ ಏನೋ ಅಷ್ಟೋ ಇಷ್ಟೋ ಆಹಾರ ದವಸವನ್ನು ಬೆಳೆಯುತ್ತಾನೆ. ಕಾಲ ಕಾಲಕ್ಕೆ ಸರಿಯಾಗಿ ದೇಶದಲ್ಲಿ ಮಳೆ ಬಾರದಿದ್ದರೆ ಕ್ಷಾಮ ಬಂದೇ ಬರುತ್ತದೆ. ಸರ್ಕಾರದವರು ತಮ್ಮ ಒಂದು ಜವಾಬ್ದಾರಿಯನ್ನು ಈ ಮಳೆಯ ಮೇಲೆ ಹಾಕಿ ತಮ್ಮದೇನೂ ತಪ್ಪಿಲ್ಲ ಎಂದು ಹೇಳು ತ್ತಿದ್ದಾರೆ. ಇದು ಸರ್ವಥಾ ಸರಿಯಲ್ಲ. ಮಳೆ ಬಾರದಿದ್ದರೆ ದೇಶದಲ್ಲಿ ದುರ್ಭಿಕ್ಷತೆಯುಂಟಾಗು ತ್ತದ ಎಂದು ಹೇಳತಕ್ಕದ್ದು 20ನೇ ಶತಮಾನದ ವಿಚಾರ ಅದು. ಈ ನೀತಿ ಈಗ ಮಾಯವಾಗಿದೆ.

[MR. SPEAKER in the Chair]

ಈ 20ನೇ ಶತಮಾನದಲ್ಲೂ ನಮ್ಮ ಸರಕಾರ ಇಂತಾ ಹಳೇ ಕಂದಾಚಾರದ ನೀತಿಯನ್ನೇ ಮುಂದುವರಿಸಿಕೊಂಡು ಬರುತ್ತಿರುವುದು ಇವರ ಒಂದು ಅಶಕ್ತತೆಯನ್ನು ಎತ್ತಿ ತೋರಿಸುತ್ತಿದೆ ಎಂದು ನಾನು ಹೇಳದೆ ವಿಧಿಯಿಲ್ಲ. ಇಲ್ಲಿಯವರೆಗಾದರೂ ಸರಕಾರದವರು ದೇಶಕ್ಕೆ ಬೇಕಾದ ಆಹಾರದ ವಿಚಾರದಲ್ಲಿ ಏನು ಒಂದು ಟಾರ್ಜೆಟ್ಟನ್ನು ಫಿಕ್ಸ್ ಮಾಡಿದ್ದಾರೆ ? ನಮ್ಮ ಸರಕಾರದವರ ಇಂದಿನ ಧೋರಣೆಯೇನೆಂದರೆ : ದೇಶಕ್ಕೆ ಬೇಕಾಗುವ ಆಹಾರವನ್ನು ಎಲ್ಲಿಂದ ತರಬೇಕು, ಹೇಗೆ ತರಬೇಕು ಎಂಬುದೇ ವಿನಾ ಅವರಲ್ಲಿ ದೇಶದಲ್ಲೇ ಅದನ್ನು ಶಾಶ್ವತವಾಗಿ ಉತ್ಪಾದನೆ ಮಾಡ ಬೇಕೆಂಬ ಉತ್ಸಾಹವಿಲ್ಲ. ಹಾಗೆ ಅವರಿಗೆ ದೇಶದಲ್ಲಿರತಕ್ಕ ಜನಗಳಿಗೆ ಸಾಕಷ್ಟು ಆಹಾರವನ್ನು ಕೊಡಬೇಕು ಎಂಬ ಆಕಾಂಕ್ಷೆಯೂ ಇಲ್ಲ. ಸರಕಾರದ ಧೋರಣೆ ಹೀಗಿದೆ. ಹಾಗೊಂದು ವೇಳೆ ಇವರಿಗೆ ಅಂಥಾ ಆಶೆ ಆಕಾಂಕ್ಷೆಗಳಿದ್ದರೆ ಇಲ್ಲಿಯವರೆಗಾದರೂ ಇವರೇಕೆ ಒಂದು ಟಾರ್ಜೆಟ್ಟನ್ನು ನಿಗದಿ ಮಾಡಿ, ತಮ್ಮ ಯೋಜನೆಗಳ ಪ್ರಕಾರ ನಮ್ಮ ದೇಶಕ್ಕಾಗುವ ಆಹಾರವನ್ನು ಪಡೆಯತಕ್ಕ ಹಾದಿಯಲ್ಲಿ ಇವರು ಇಲ್ಲಿಯವರೆಗೂ ಸಫಲರಾಗಿಲ್ಲ ? ಇವರ ಯೋಜನೆಗಳೇಕೆ ಫಲಕಾರಿಯಾಗಿಲ್ಲ ? ಸರಕಾರ ದವರ ಯೋಜನೆಗಳನ್ನು ಪರಿಪೂರ್ಣಗೊಳಿಸತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕವರೆಲ್ಲ ಯಾವತ್ತೂ ಈ ಯೋಜನೆಗಳ ವೆಚ್ಚವನ್ನು 10 ಕೋಟಿಯಿಂದ 20 ಕೋಟಿಗೂ, 20 ಕೋಟಿಯನ್ನು 30 ಕೋಟಿಗೂ ಹೇಗೆ ಏರಿಸಬೇಕೆಂಬುದರಲ್ಲಿ ತಲ್ಲೀನರಾಗಿದ್ದಾರೆಯೇ ಶಿವಾಯಿ, ಆ ಅಧಿಕಾರಿಗಳಿಗೆ ಅವುಗಳು ಯಶಸ್ವಿಗೊಳ್ಳಬೇಕೆಂಬ ವಿಚಾರದಲ್ಲಿ ಅವರಿಗೇನೇನೂ ಆಸಕ್ತಿಯಿಲ್ಲ. ಇಲ್ಲಿಯವರೆಗೆ ಈ ಯೋಜನೆ ಗಳಿಗೆ ಖರ್ಚಾಗಿರತಕ್ಕ ಹಣವೆಷ್ಟು, ಅವುಗಳಿಂದ ಈ ದಿವಸ ಬರತಕ್ಕ ಉತ್ಪತ್ತಿಯೇನು ಎಂಬುದರ ಕಡೆಗೆ ಯಾರೊಬ್ಬರ ಗಮನವೂ ಹರಿದಿಲ್ಲ. ಆದರೆ ಇಲ್ಲಿಯವರೆಗೆ ಈಗಾಗಲೇ ಕೋಟ್ಯಾಂತರ ರೂಪಾಯಿಗಳು ಖರ್ಚಾಗಿದೆ. ಸರಕಾರದವರು ಈ ಪ್ಲಾನಿನ ಸೋಗಿನಲ್ಲಿ ಮೇಜರ್ ಮತ್ತು ಮೈನರ್ ಇರಿಗೇಷನ್ನಿನ ಬಗ್ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಅವುಗಳಿಂದ ಈ ದಿವಸ ದೇಶಕ್ಕೆಷ್ಟು ಪ್ರಯೋಜನ ಬರಬೇಕಾಗಿತ್ತೋ ಅಷ್ಟು ಬಂದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಕೆಲಸವಾಗದಿದ್ದರೂ ಹಣ ಮಾತ್ರ ಖರ್ಚಾಗಿದೆ. ಅಂದರೆ ಅಷ್ಟು ಹಣ ದುರ್ವಿನಿ ಯೋಗವಾಗಿದೆ ಎಂದು ಹೇಳುತ್ತೇನೆ. ಇದು ಸರಕಾರದವರು ಕೊಡತಕ್ಕ ಹೇಳಿಕೆಗಳಿಂದಲೇ ವ್ಯಕ್ತ ಪಟ್ಟಿದೆ. ಈ ಯೋಜನೆಯಲ್ಲಿ ತೊಡಗಿರತಕ್ಕವರೆಲ್ಲಾ ಕೇವಲ ಹಣ ಸಂಪಾದನೆಯಲ್ಲೇ ನಿರತರಾಗಿ ದ್ದುದರಿಂದ ಯೋಜನೆಗಳ ಕೆಲಸ ಸರಿಯಾಗಿ ಕಾರ್ಯಗತವಾಗಲು ಅವಕಾಶವಾಗಲಿಲ್ಲವೆಂದು ಕಂಡು ಬರುತ್ತಿದೆ. ಇಂದು ಸರ್ಕಾರದ ಒಂದು ಆಡಳಿತ ದಕ್ಷತೆ ಎಷ್ಟು ಶಿಥಿಲವಾಗಿದೆ ಎಂಬುದಕ್ಕೆ ಇದಕ್ಕಿಂತಲೂ ಬೇರೆ ಉದಾಹರಣೆ ಬೇಕಾಗಿಲ್ಲ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ಯೋಜನೆ ಗಳನ್ನು ಕೈಗೊಂಡಿದಾಗ್ಯೂ ನಮ್ಮ ಸರಕಾರ ಯಾವತ್ತೂ ಡೆಲ್ಲಿಗೆ ಭಿಕ್ಷಾಪಾತ್ರೆಯನ್ನು ಹಿಡಿದು ಕೊಂಡು ಹೋಗತಕ್ಕದ್ದು ಒಂದು ವಾಡಿಕೆಯಾಗಿ ಬಂದಿದೆ. ಈ ದಿವಸ ಪ್ಲಾನುಗಳ ವಿಚಾರವನ್ನೇ ಎತ್ತದೆ ನಮ್ಮ ಮಂತ್ರಿಗಳು ಡೆಲ್ಲಿಯಿಂದ ನಾವು ನಮ್ಮ ರಾಜ್ಯಕ್ಕೆ ಒಂದು ಲಕ್ಷ ಟನ್ ಅಕ್ಕಿಯನ್ನು ತಂದಿದ್ದೇವೆ, ಎರಡು ಲಕ್ಷ ಟನ್ ಗೋಧಿಯನ್ನು ತಂದಿದ್ದೇವೆ ಎಂದು ಹೇಳುತ್ತಿದ್ದಾರೆ. ನಮ್ಮ ಸರಕಾರದವರು ಯಾವತ್ತೂ ಹೀಗೆ ಭಿಕ್ಷಾಪಾತ್ರೆಯನ್ನು ಹಿಡಿದು ಭಿಕ್ಷವನ್ನೆತ್ತಿ ಮೈಸೂರು ದೇಶದ ಕ್ಷಾಮವನ್ನು ಪಾರುಮಾಡುತ್ತೇವೆಂಬುದಾಗಿ ಭಾವಿಸಿಕೊಂಡಿದ್ದರೆ ಅವರಿಗೆ ಖಂಡಿತವಾಗಿ ನಮ್ಮ ದೇಶದ ಜನರ ಆರೋಗ್ಯವನ್ನು ಕಾಪಾಡತಕ್ಕ ಶಕ್ತಿ ಖಂಡಿತ ಇಲ್ಲ ಎಂದು ನಾನು ಹೇಳುತ್ತೇನೆ. ಸರ್ಕಾರದವರು ದೇಶದಲ್ಲಿ ಆಗಿಂದಾಗ್ಗೆ ತಲೆದೋರತಕ್ಕ ಕ್ಷಾಮಡಾಮರಗಳ ಹಾವಳಿಯನ್ನು ತಡೆಗಟ್ಟಲು ಒಂದು ಶಾಶ್ವತವಾದ ಯೋಜನೆಯನ್ನು ಎಂದಿನವರೆಗೆ ಕೈಗೊಳ್ಳುವುದಿಲ್ಲವೋ ಅಂದಿನ ವರೆಗೆ ಇವರಿಗೆ ದೇಶದಲ್ಲಿರತಕ್ಕ ಜನರಲ್ಲಿ ಒಂದು ಶಾಂತಿಯನ್ನು, ನೆಮ್ಮದಿಯನ್ನು ಕಾಪಾಡಲು

(ಶ್ರೀ ಎಸ್. ಶಿವಪ್ಪ)

ಸಾಧ್ಯವಿಲ್ಲವೆಂದು ಎಂದು ನಾನವರಿಗೆ ತಿಳಿಸಬೇಕಾಗಿದೆ. ಅವರು ಈ ಹೊತ್ತು ಇದಕ್ಕಾಗಿ 40-50 ಕೋಟಿ ರೂಪಾಯಿಗಳ ಒಂದು ಫಂಡನ್ನು ಕ್ರಿಯೇಟ್ ಮಾಡಿದ್ದೇವೆಂದು ಹೇಳುತ್ತಿದ್ದರೂ ಅವರಲ್ಲಿ ದುಡ್ಡಿಲ್ಲ. ಹಾಗೆ ದುಡ್ಡಿದ್ದಿದ್ದರೆ ಅದರಿಂದೇನು ಸಾರ್ಥಕವಾಗಿದೆ? ಇವರಲ್ಲಿ ದುಡ್ಡಿರಬೇಕಾದರೆ ಅದಕ್ಕೆ ಡೆಲ್ಲಿಯವರಿಂದ ಆಶೀರ್ವಾದ ಬರಬೇಕು. ಅಲ್ಲಿಂದ ಹಣ ಬಾರದಿದ್ದರೆ ಇಲ್ಲೇನೂ ಕೆಲಸ ಗಳಾಗುವುದಿಲ್ಲ. ಇಂದು ನಮ್ಮ ಕಣ್ಣ ಮುಂದೆ ಇರತಕ್ಕ ಕೆಲಸಗಳನ್ನೆಲ್ಲ ಇವರು ಪೂರ್ಣ ಮಾಡಿಲ್ಲ ಇದಕ್ಕೆ ಕಾರಣ ನಮ್ಮ ಸರ್ಕಾರದಲ್ಲಿರುವುದು ಅಕ್ಷಯ ಪಾತ್ರೆಯಲ್ಲ, ಅದು ತೂತಿನ ಒಂದು ಕೊಡ. ಅದರಿಂದಲೇ ದೇಶದಲ್ಲಿ ತಪ್ಪದಂತೆ ವರ್ಷ ವರ್ಷ ಕ್ಷಾಮ ಬರುತ್ತಿದೆ. ಇದರ ವಿಚಾರವಾಗಿ ನಾವು ಇದೇ ಸಭೆಯಲ್ಲಿ ಅನೇಕ ಸಲಹೆಗಳನ್ನು ಕೊಟ್ಟೆವು. ಇಂಥಾ ಕ್ಷಾಮಗಾಲದ ಎಚ್ಚರಿಕೆಗಾಗಿ ಇಲ್ಲಿ ಒಂದು ಬಫರ್‌ಸ್ಟಾಕನ್ನು ಇಂತಿಷ್ಟು ಇಡಬೇಕೆಂದು ಪದೇ ಪದೇ ಹೇಳುತ್ತಲೇ ಇದ್ದೇವೆ. ಸರ್ಕಾರ ದವರೇಕೆ ಇಲ್ಲಿಯತನಕ ಪ್ರಯತ್ನ ಮಾಡಲಿಲ್ಲ? ಜನರು ಅನ್ನ ನೀರಿಲ್ಲದೆ ಸಾಯುವುದಕ್ಕೆ ಪ್ರಾರಂಭ ವಾದಮೇಲೆ, ದನಗಳಿಗೆ ತಿನ್ನುವುದಕ್ಕೆ ಹುಲ್ಲಿಲ್ಲದೆ ಅವು ಸಾಯುವುದಕ್ಕೆ ಪ್ರಾರಂಭವಾದಮೇಲೆ ನಾವಿಲ್ಲಿ ಆ ವಿಚಾರವಾಗಿ ಚರ್ಚೆಯನ್ನಾರಂಭಿಸಿದ ನಂತರ ಸರಕಾರದವರು ಕಣ್ಣನ್ನು ತೆರೆಯುತ್ತಾರೆ. ಮೊದಲೇ ಏಕೆ ಸರಕಾರದವರು ಒಂದು ಹತ್ತು ಲಕ್ಷ ಟನ್ ಅಕ್ಕಿ, ರಾಗಿ, ಗೋಧಿಯನ್ನು ಒಂದು ಬಫರ್‌ಸ್ಟಾಕಾಗಿ ಇಡಬಾರದು ಎಂತ ಕೇಳುತ್ತೇನೆ? ಇಷ್ಟು ಸುಲಭವಾದ ಒಂದು ಕೆಲಸವನ್ನು ಮಾಡಲಾರದ ಸರಕಾರ ಇನ್ನಾವ ಕೆಲಸವನ್ನು ಮಾಡತಕ್ಕ ಶಕ್ತಿ ಇದಕ್ಕಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಹತ್ತು ಲಕ್ಷ ಟನ್ ಎಂದರೆ ಎಷ್ಟಾಯಿತು? ತಮಗೆ ಅದೂ ಕೂಡ ಗೊತ್ತಿಲ್ಲವೆಂದು ಕಾಣುತ್ತದೆ...... ಸೌತ್ ಜೋನಿಗೆ ನಾವು 5 ಲಕ್ಷ ಟನ್ ಅಕ್ಕಿಯನ್ನು ಇಂಪೋರ್ಟ್ ಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಹಾಗೆ ತಮ್ಮ ಲೆಕ್ಕದ ಪ್ರಕಾರ ಹೋದರೆ ಕೇರಳಕ್ಕೇ 6 ಲಕ್ಷ ಟನ್ ಬೇಕು ಇನ್ನು ಮೈಸೂರಿಗೆ ಒಂದು ಒಂದೂವರೆ ಲಕ್ಷ ಟನ್ ಬೇಕು. ಅಷ್ಟು ಮಾತ್ರ ಇಲ್ಲಿ ಡಿಫಿಸಿಟ್ಟಿದೆ. ನನ ಅಭಿಪ್ರಾಯದಲ್ಲಿ ಇಡೀ ದೇಶಕ್ಕೆ ಇಂಥ ಒಂದು ಬಫರ್ ಸ್ಟಾಕನ್ನು ಇಡದೇ ಹೋದರೆ ಮುಂದೆ ಬಹಳ ತೊಂದರೆಗೀಡಾಗಬೇಕಾಗುವುದೆಂದು ಇಂದೇ ಎಚ್ಚರ ಮಾಡುತ್ತೇನೆ. ಇಷ್ಟನ್ನು ಸ್ಟಾಕ್ ಮಾಡಲು ಸರಕಾರದವರಿಗೆ ಇರತಕ್ಕ ತೊಂದರೆಯೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಸೊಸೈಟಿಗಳಲ್ಲಿ ಒಂದು ಲಕ್ಷ ಟನ್ ದಾಸ್ತಾನಿಟ್ಟಿದ್ದೇವೆ.

ಶ್ರೀ ಎಸ್. ಶಿವಪ್ಪ.—ಅದಕ್ಕಾದರೂ ಏನು ಪ್ರಯತ್ನ ಮಾಡಿದ್ದೀರಿ? ಈ ದಿವಸ ಆಹಾರದ ಬೆಲೆಗಳು ಬೇರೆ ವಿಷದಂತೆ ಗಗನಕ್ಕೇರುತ್ತಿವೆ. ಈ ಬೆಂಗಳೂರು ನಗರದಲ್ಲಿ ಇಡೀ ಭಾರತದಲ್ಲೇ ಎಲ್ಲಿಯೂ ಇಲ್ಲದಂತ ಕಾಸ್ಟಾಫ್ ಲಿವಿಂಗ್ ಇಂಡೆಕ್ಸಿದೆ. ಇದರಿಂದ ಇಲ್ಲಿ ಬೆಲೆಗಳು ಅಷ್ಟು ಹೆಚ್ಚಾಗಿವೆಯೆಂಬುದನ್ನು ಇದು ಸೂಚಿಸುತ್ತಿದೆ. ಇದರಿಂದ ಇಲ್ಲಿ ಮಧ್ಯಮ ವರ್ಗದವರು ಜೀವನ ಮಾಡುವುದು ಬಹಳ ಕಷ್ಟ. ಇದನ್ನು ಸರಕಾರದವರು ಗಮನಕ್ಕೆ ತೆಗೆದುಕೊಂಡು ಧಾನ್ಯಗಳ ಬೆಲೆಯನ್ನು ನೇರವಾಗಿ ಅವರ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ನಾನು ಸೂಚಿಸುತ್ತಿದ್ದೇನೆ. ಆದರೆ ಈ ಹತೋಟಿಯ ಕ್ರಮ ಕೇವಲ ಒಂದು ಶಾಸನ ಮಾತ್ರದಿಂದಾಗುವುದಿಲ್ಲ. ಸರಕಾರದವರು ಈ ಒಂದು ಧೋರಣೆಯಿಂದ ಅವರು ಯಾವ ಕೆಲಸವನ್ನು ಮಾಡುವುದಕ್ಕೆ ಕೈ ಹಾಕಿದರೂ ಅದರಲ್ಲಿ ಅವರಿಗೆ ಜಯ ದೊರೆತಿಲ್ಲ; ಅವರು ಎಲ್ಲಾ ಕೆಲಸಗಳಲ್ಲೂ ವಿಫಲರಾಗಿದ್ದಾರೆ. ಹೀಗಾಗಿ ಅವರು ತಮ್ಮ ಒಂದು ರಾಷ್ಟ್ರೀಕರಣದ ಬಾಬುಗಳಲ್ಲೆಲ್ಲಾ ವಿಫಲರಾಗಿದ್ದಾರೆ. ಈ ದಿವಸ ಸತ್ಯಸಂಧತೆಯಿಂದ ಕೆಲಸ ಮಾಡತಕ್ಕ ಜನ ಆಡಳಿತದಲ್ಲಿಲ್ಲದಿರುವುದೇ ಇದಕ್ಕೆ ಕಾರಣ. ಈ ದಿವಸ ಸರಕಾರದವರು ಒಬ್ಬ ವ್ಯಾಪಾರಿಯಂತೆ ದೇಶದ ಆಡಳಿತವನ್ನು ನಡೆಸುತ್ತಿದ್ದಾರೆಂದು ಜನರು ಚಳುವಳಿಯೇಳತಕ್ಕ ಸಂಭವ ಬಂದರೂ ಬರಬಹುದು. ಸರ್ಕಾರದವರು ಎಲ್ಲಿ ಕೈ ಹಾಕಿದರೂ ಊರ್ಜಿತವಿಲ್ಲ. ಅದು ನಮ್ಮ ದುರ್ದೈವವೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಇವತ್ತು ಸರ್ಕಾರ ಯಾವುದಕ್ಕೆ ಕೈಹಾಕಿದರೂ ಅದನ್ನು ಜನತೆ ಒಂದು ಸಂಶಯ ರೂಪದಲ್ಲಿ ನೋಡುತ್ತಿದೆ. ಆದರೂ ಇವತ್ತು ಕೊ-ಆಪರೇಟಿವ್ ಸೊಸೈಟಿಗಳ ಮುಖಾಂತರ ಮತ್ತು ಸ್ಟೇಟ್ ಟ್ರೇಡಿಂಗ್ ಮುಖಾಂತರ ಆಹಾರದ ಮಾರಾಟ ಪದ್ಧತಿಯನ್ನು ಜಾರಿಗೆ ತರುವರೆಂದು ದೆಹಲಿಯಲ್ಲಿ ನಡೆದ ಆಹಾರ ಸಮ್ಮೇಳನ ದಿಂದ ವರ್ತಮಾನ ಬಂದಿದೆ. ಮೈಸೂರು ದೇಶದ ಪ್ರತಿಯೊಂದು ಗ್ರಾಮದಲ್ಲೂ ಏನೇನು ಕ್ರಮ ಗಳನ್ನು ತೆಗೆದುಕೊಂಡು ಅಲ್ಲಿ ಜಾರಿಗೆ ತರುತ್ತೇವೆಂಬುದನ್ನು ಹೇಳಲಿಲ್ಲ. ಈ ವಿಚಾರದಲ್ಲಿ ಅವರ ನೀತಿಯೇನೆಂಬುದನ್ನು ಮಾತ್ರ ಹೇಳಿದ್ದಾರೆ. ಆದರೆ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಮಾಡುವ

ಪದ್ಧತಿಯಲ್ಲಿ ಅನೇಕ ಲೋಪದೋಷಗಳಿವೆ. ಅಲ್ಲಿನ ವ್ಯಾಪಾರ, ವಹಿವಾಟುಗಳನ್ನು ಸರ್ಕಾರವೇ ವಹಿಸಿಕೊಂಡದ್ದೇ ಆದರೆ ಅದನ್ನು ಬಹಳ ಹುಷಾರಾಗಿ ನಡೆಸಬೇಕು. ಏಕೆಂದರೆ ಈಗಾಗಲೇ ದೆಹಲಿಯಲ್ಲಿ ಇಂತಹ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆಯೆಂದು ನೋಡಿದರೆ ಅಲ್ಲಿ ಅನೇಕ ಲಂಚ ರುಷುವತ್ತುಗಳ ಅಪಾದನೆಗೊಳಗಾಗಿದ್ದಾರೆ. ಆ ಒಂದು ಕಾರ್ಪೊರೇಷನ್ನಿನ ಧಾಟಿಯಲ್ಲಿ ಇಲ್ಲಿ ಕಾರ್ಪೊರೇಷನ್ನುಗಳನ್ನು ಸೃಷ್ಟಿಮಾಡಬೇಡಿ. ನಿಜವಾಗಿ ಈ ಸರ್ಕಾರದವರಿಗೆ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನುಗಳನ್ನು ರಚನೆಮಾಡಬೇಕೆಂಬ ಅಭಿಲಾಷೆ ಇದ್ದ ಪಕ್ಷದಲ್ಲಿ ಅದರಲ್ಲಿ ಸೇವಾಕಾಂಕ್ಷೆ ಇರತಕ್ಕ ಜನರನ್ನು ಯಾವ ಪಾರ್ಟಿಗೇ ಸೇರಿರಲಿ ಅಂತಹವರನ್ನು ಈ ಸಂಸ್ಥೆಗಳಿಗೆ ಸೇರಿಸಬೇಕು. ಇವರಲ್ಲಿ ಅಂತಹ ಒಂದು ಸಹಕಾರ ಮನೋಭಾವ ಬೆಳೆಯಬೇಕು. ಇಂತಹ ಸಹಕಾರ ಸಂಸ್ಥೆಗಳನ್ನು ರಚನೆಮಾಡುವ ಕಾಲದಲ್ಲಿ ಕೇವಲ ಆಡಳಿತ ಗುಂಪಿನವರನ್ನು ಸೇರಿಸುವ ಉದ್ದೇಶ ಇವರು ಇಟ್ಟುಕೊಂಡಿರುವ ಹಾಗೆ ನನಗೆ ತೋರುತ್ತದೆ. ಅದು ಸರಿಯಲ್ಲ. ಕೆಲವು ಸಹಕಾರ ಸಂಘಗಳಲ್ಲಿ ಸಕ್ಕರೆಯನ್ನು ಆ ಸಂಘಗಳ ಮುಖಂಡರೇ ಹಂಚಿಕೊಳ್ಳುತ್ತಿದ್ದಾರೆ. ಅನೇಕ ಸಹಕಾರ ಸಂಘಗಳಲ್ಲಿ ಇವರ ಪಾರ್ಟಿ ಮುಖಂಡರೇ ಸೇರಿಕೊಂಡು ದುರ್ವ್ಯಾಪಾರ ಮಾಡುತ್ತಿದ್ದಾರೆ. ಸೊಸೈಟಿಗೆ ಬಂದಂಥ ಸಕ್ಕರೆ ಜನಗಳ ಕೈಗೆ ಸೇರುತ್ತಿಲ್ಲ. ಬೇಕಾದಷ್ಟು ಲಂಚ ರುಷುವತ್ತುಗಳು ನಡೆಯುತ್ತಿವೆ. ಅದರಲ್ಲೂ ಕೂಡ ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಇಂತಹ ವಸ್ತುವನ್ನು ಮಾರಾಟಮಾಡುವ ಕ್ರಮದಲ್ಲಿ ಆಹಾರ ಮಂತ್ರಿಗಳು ಕಟ್ಟುನಿಟ್ಟಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ವರ್ತಿಸಬೇಕು. ದೇಶದಲ್ಲಿ ಆಹಾರ ದಾಸ್ತಾನು ಮಾಡುವ ಕಾಲದಲ್ಲಿ ಒಂದು ದಿಟ್ಟತನವನ್ನು ಅವರು ತೋರಿಸಬೇಕು. ಆ ಒಂದು ಧೈರ್ಯ ಇವರು ಮಾಡುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಇನ್ನು ಮೇಜರ್ ಮತ್ತು ಮೈನರ್ ಇರ್ರಿಗೇಷನ್ ವಿಚಾರವಾಗಿ ಹೇಳುವುದಾದರೆ ಈಗಾಗಲೇ ಪಾಂಚವಾರ್ಷಿಕ ಯೋಜನೆಯನ್ನು ಚರ್ಚೆಮಾಡುವ ಕಾಲದಲ್ಲಿ ಮೇಜರ್ ಇರ್ರಿಗೇಷನ್ ಪ್ರಾಜೆಕ್ಟುಗಳಿಂದ ಎಷ್ಟರಮಟ್ಟಿಗೆ ಉತ್ಪತ್ತಿ ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಉತ್ಪತ್ತಿಯನ್ನು ನಾವು ಕಾಣಲಿಲ್ಲವೆಂದು ಹೇಳಬಹುದು. ಈ ವಿಚಾರದಲ್ಲಿ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ ಅದರಲ್ಲೂ ಇಡೀ ಭಾರತದೇಶದಲ್ಲಿ ಕನಿಷ್ಟ ಪ್ರಮಾಣ ಶೇಕಡ 8 ರಷ್ಟು ಭಾಗ ಮಾತ್ರ ಖಾಯಂ ಆಗಿ ನೀರನ್ನು ಅವಲಂಬಿಸಿ ವ್ಯವಸಾಯ ಮಾಡುವುದಕ್ಕೆ ಯೋಗ್ಯವಾಗಿದೆ. ಇನ್ನುಳಿದ ಶೇಕಡ 92 ಭಾಗದಲ್ಲಿ ಖಾಯಂ ನೀರಿನ ವ್ಯವಸ್ಥೆ ಇಲ್ಲದೆ ಕೇವಲ ಮಳೆಯ ನಿರೀಕ್ಷಣೆಯಿಂದಲೇ ವ್ಯವಸಾಯಮಾಡಬೇಕಾಗಿದೆ. ಇಂತಹ ಒಂದು ಅನಿಶ್ಚಿತ ವಾತಾವರಣಕ್ಕೆ ನಮ್ಮ ದೇಶದ ರೈತರು ಒಳಗಾಗಿದ್ದಾರೆ. ಆದ್ದರಿಂದ ರೈತರ ಜೀವನ ಬಲು ಕಷ್ಟ. ಮಳೆಬಂದರೆ ಬೆಳೆ ಅವನ ಕೈಗೆ ಬರುತ್ತದೆ. ಇಲ್ಲದಿದ್ದರೆ ಕ್ಷಾಮಕ್ಕೆ ತುತ್ತಾಗಬೇಕಾಗುತ್ತದೆ. ವರ್ಷೇ ವರ್ಷೇ ನಮ್ಮ ದೇಶದಲ್ಲಿ ಶೇಕಡ 65 ಭಾಗದಷ್ಟು ಕ್ಷಾಮ ಪ್ರದೇಶಗಳುಂಟಾಗುತ್ತಿರುತ್ತವೆ. ⅔ ಪಾಲಿನಷ್ಟು ಪ್ರಾಂತಗಳಲ್ಲಿ ಮಳೆಯನೀರು ಇಲ್ಲದೆ ವ್ಯವಸಾಯ ಮಾಡುತ್ತಿದ್ದಾರೆ. ಇಂಥಾದ್ದರಲ್ಲಿ ದೇಶದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ರೈತನ ಹಿತಕ್ಕೆ ನೆರವಾಗಬೇಕು ಎನ್ನುವುದನ್ನು ಸರಿಯಾಗಿ ಗಮನಿಸಲಿಲ್ಲ. ಅವರಿಗೆ ಯಾವ್ಯಾವರೀತಿ ಸಹಾಯಮಾಡಬೇಕು ಎಂಬ ಬಗ್ಗೆ ಒಂದು ನೀತಿಯನ್ನು ಅನುಸರಿಸುತ್ತಿಲ್ಲ. ಆದರೆ ಇತ್ತೀಚೆಗೆ ಅವರಿಗೆ ತಕಾವಿ ಸಾಲ, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್, ಇರ್ರಿಗೇಷನ್ ಲೋನ್ ಎಂಬುದಾಗಿ ಕೊಡುತ್ತಿದ್ದಾರೆ. ಹೀಗೆ ಅನೇಕ ರೀತಿಗಳಲ್ಲಿ ಸರ್ಕಾರದವರು ರೈತರಿಗೆ ಸಾಲಗಳನ್ನು ಕೊಡುತ್ತಿದ್ದಾರೆ. ನಿಜ. ಆದರೆ ಇವರು ಈ ರೀತಿ ಕೊಡುತ್ತಿರುವ ಸಾಲ ಎಷ್ಟು ಜನ ರೈತರಿಗೆ ನೇರವಾಗಿ ತಲುಪುತ್ತಿದೆಯೆಂಬುದನ್ನು ಸರ್ಕಾರ ನೋಡಬೇಕು. ಇವತ್ತು ಲಕ್ಷಾಂತರ ಜನ ರೈತರು ಹಣದ ಅಭಾವದಿಂದ ನರಳುತ್ತಿರುವಾಗ ಸರ್ಕಾರದವರು ಅವರಿಗೆ ಕೊಡುತ್ತಿರುವ ಸಾಲಗಳ ಮೊಬಲಗು ಎಲ್ಲಾ ಪ್ರಭಾವಶಾಲಿಗಳಿಗೆ ಮಾತ್ರ ಸಿಗುತ್ತಿದೆ. ಭೂಮಿ ಅವಲಂಬನೆ ಮಾಡತಕ್ಕ ವ್ಯವಸಾಯಗಾರರಿಗೆ ಅದರಲ್ಲೂ ಬಹುಭಾಗದ ಜನಗಳಿಗೆ ಈ ಸೌಕರ್ಯ ಸಿಗುತ್ತಿಲ್ಲ. ತಾಲ್ಲೂಕು ಕಚೇರಿಗಳ ಮುಂದೆ ಯಾವರೀತಿ ಖದೀಮರು ಚೀಲ ತೆಗೆದುಕೊಂಡು ಬಂದು ರೈತರಿಗೆ ಕೊಡತಕ್ಕ ಅನೇಕ ರೀತಿಯ ಸಾಲಗಳನ್ನು ಸರ್ಕಾರದವರು ಯಾವಾಗ ಯಾವರೀತಿ ಕೊಡುತ್ತಾರೆಂದು ಕಾದು ನೋಡುತ್ತಿರುತ್ತಾರೆ ಎಂಬುದನ್ನು ಸರ್ಕಾರ ಮನಗಾಣಬೇಕು. ಈ ತರಹದ ಜನ ರೈತರಿಗೆ ಸರ್ಕಾರ ಕೊಡತಕ್ಕ ಸಾಲವನ್ನೆಲ್ಲಾ ಪಡೆದುಕೊಂಡು ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದಾರೆ. ಸರ್ಕಾರದವರು ಕೊಡತಕ್ಕ ಹಣ ನಿಜವಾಗಿ ರೈತನಿಗೆ ತಲುಪುತ್ತಾ ಇಲ್ಲ. ಆ ಸಾಲ ಬಾವಿಗೆ ಸಿಗುತ್ತಿಲ್ಲ. ಪ್ರಭಾವಶಾಲಿಗಳ ಬಾಯಿಗೆ ಸಿಗುತ್ತಿದೆ. ರೈತರಿಗೆ ಏನೇನು ಸಾಲಗಳು ಹಣದ ರೂಪವಾಗಿ ಸರ್ಕಾರದಿಂದ ದೊರಕಬೇಕೋ ಅದು ಸರಿಯಾಗಿ ನ್ಯಾಯವಾಗಿ ಮತ್ತು ನೇರವಾಗಿ ದೊರಕುವುದಕ್ಕೆ ಸಹಾಯವಾಗಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಕಟ್ಟುನಿಟ್ಟಾದ ವ್ಯವಸ್ಥೆಯನ್ನು ಮಾಡಬೇಕು. ಬಾವಿಗಳಿಗಾಗಿ ಕೊಟ್ಟಹಣ ಬಾವಿಗಳಿಗಾಗಿ ಹೋಗದೆ ಅನೇಕ

(ಶ್ರೀ ಎಸ್. ಶಿವಪ್ಪ)

ಜನರ ಬಾಯಿಗಳಿಗೆ ಹೋಗುತ್ತಿದೆ. ಅನೇಕ ಕಡೆಗಳಲ್ಲಿ ಈ ಹಣ ದುರ್ವಿನಿಯೋಗವಾಗುತ್ತಿದೆ. ಆದ್ದರಿಂದ ರೈತರು ತುಂಬಾ ಜಾಗರೂಕರಾಗಿರಬೇಕು. ಏಕೆಂದರೆ ತಾಲ್ಲೂಕು ಡೆವಲಪ್‌ಮೆಂಟ್ ಆಫೀಸುಗಳಲ್ಲಿ ಒಂದೇವರ್ಗದ ಜನ ರೈತರನ್ನು ಹೆದರಿಸಿ ಅವರಿಂದ ಹಣವನ್ನು ಮೋಸದಿಂದ ಪಡೆಯುತ್ತಿದ್ದಾರೆ. ಇದರಿಂದ ದೇಶಕ್ಕಾಗಲೀ, ಸರ್ಕಾರಕ್ಕಾಗಲೀ, ಅಥವಾ ರೈತರಿಗಾಗಲೀ ಏನೂ ಪ್ರಯೋಜನವಾಗಲಿಲ್ಲ. ಅದಕ್ಕೆ ಕಾರಣವೇನೆಂದರೆ ಏನು ಆಹಾರ ನಮ್ಮ ದೇಶದಲ್ಲಿ ಉತ್ಪತ್ತಿಯಾಗಬೇಕಾಗಿತ್ತೋ ಅಷ್ಟು ಉತ್ಪತ್ತಿ ಜಾಸ್ತಿಯಾಗಿಲ್ಲ. ದಿನೇ ದಿನೇ ಒಂದೇ ಮಟ್ಟದಲ್ಲಿರುತ್ತದೆ. ಇನ್ನೂ ಕಡಿಮೆ ಮಟ್ಟದಲ್ಲಿ ಉತ್ಪಾದನೆಯಾಗುತ್ತಿದೆ ಯೆಂಬುದನ್ನು ಸರ್ಕಾರದವರು ಒದಗಿಸಿರತಕ್ಕ ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಅಧಿಕಾರವರ್ಗದವರು ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದಾರೋ ಅಲ್ಲದೆ ದೇಶದಲ್ಲಿ ಆಹಾರೋತ್ಪತ್ತಿ ಸಂತೃಪ್ತಿಯಾಗಿ ಮಾಡಿ ಸುಖ ಜೀವನವನ್ನು ನಡೆಸುವ ಹಾಗೆ ಮಾಡುತ್ತೇವೆಂಬುದಾಗಿ ಕೊಟ್ಟ ಆಶ್ವಾಸನೆಗಳೆಲ್ಲಾ ಇದುವರೆಗೂ ಕಾರ್ಯಗತವಾಗಿಲ್ಲ. ಇದಕ್ಕೇನು ಕಾರಣವೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ನಮ್ಮ ಸರ್ಕಾರದಲ್ಲಿರತಕ್ಕ ಭ್ರಷ್ಟಾಚಾರ ಆಡಳಿತದಿಂದ ನಮ್ಮ ದೇಶದ ಆಹಾರೋತ್ಪತ್ತಿ ಕುಂಠಿತವಾಗಿದೆ. ರೈತನಿಗೆ ತನ್ನ ಜೀವನದಲ್ಲಿ ಜಿಗುಪ್ಸೆ ಉಂಟಾಗಿದೆ. ಅವರಲ್ಲಿ ಬಡತನವೇ ಬಹಳ ಹೆಚ್ಚಾಗಿದೆ. ಒಳ್ಳೆಯ ಜೀವನವನ್ನು ನಡೆಸುವ ದಾರಿಯನ್ನು ಅವರಿಗೆ ತೋರಿಸಿಕೊಟ್ಟಿಲ್ಲ. ರೈತನಾದವನನ್ನು ಚಡ್ಡಿ ಹಾಕಿರುವವನು ಎಂದು ಕಡೆಗಣ್ಣಿನಿಂದ ನೋಡುತ್ತಿದ್ದಾರೆ. ನಿಜವಾಗಿ ಉಳುವವನಿಗೆ ಸಮಾಜದಲ್ಲಿ ಖಂಡಿತವಾಗಿ ಇವರು ಗೌರವ ಕೊಟ್ಟಿಲ್ಲ. ಇವನು ಅನ್ನದಾತ. ಎಲ್ಲರಿಗೂ ಅನ್ನವನ್ನು ಕೊಡುವಂತಹ ರೈತನಿಗೆ ಈ ಸರ್ಕಾರದಲ್ಲಿ ಸಾಕಷ್ಟು ಮನ್ನಣೆ, ಗೌರವವಿಲ್ಲ. ಒಳ್ಳೆಯ ಜೀವನ ಮಾಡುವುದಕ್ಕೆ ಈಗ ಶಕ್ತಿ ಇಲ್ಲದ ಹಾಗೆ ಅವನನ್ನು ಮಾಡಿದ್ದಾರೆ. ಸಮಾಜದಲ್ಲಿ ಅವನನ್ನು ಕೊನೆಯವರ್ಗವೆಂದು ಪರಿಗಣಿಸಿದ್ದಾರೆ. ಇದರಿಂದ ಅವನು ಎಲ್ಲರಿಗಿಂತಲೂ ಕಡೆಯಲ್ಲಿ ನಿಂತು ನಿರ್ಗತಿಕನಾಗಿದ್ದಾನೆ. ಅವನಿಗೆ ನಿಜವಾಗಿ ಸಮಾಜದಲ್ಲಿ ಗೌರವ, ಮಾನ್ಯತೆ, ಒಳ್ಳೆಯಸ್ಥಾನ ಕೊಡದೇಹೋದರೆ ನಮಗೆ ಅವನಿಂದ ಏನು ಅನ್ನಬೇಕೋ ಅದು ಖಂಡಿತವಾಗಿ ಬರುವುದಿಲ್ಲ. ಮಾನ್ಯ ಮಂತ್ರಿಗಳೇ ಒಂದು ಸಾರಿ ಹೇಳುತ್ತಿದ್ದರು. ಅಮೇರಿಕಾ ದೇಶದಲ್ಲಿರತಕ್ಕ ಒಬ್ಬ ರೈತ 20 ಜನಗಳಿಗೆ ಜೀವನವನ್ನು ಮಾಡಿಸುತ್ತಿದ್ದಾನಂತೆ, ಅಲ್ಲಿನ ರೈತರಿಗೆ ಇರತಕ್ಕ ಸಂಪತ್ತಿನ ರಕ್ಷಣೆಗೂ ಇಲ್ಲಿನ ರೈತರಿಗೆ ಇರತಕ್ಕ ಸೌಲಭ್ಯಗಳನ್ನು ಹೋಲಿಸಿ ನೋಡಿದರೆ ನಮ್ಮ ರೈತರು ತುಂಬಾ ಬಡಜೀವಿಗಳಾಗಿ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆಂದು ಹೇಳಬಹುದು. ಅಲ್ಲಿನ ರೈತರು ಅಂದರೆ ಅವರಿಗೆ ಒಂದು ದೊಡ್ಡ ಗೌರವ] ಸ್ಥಾನವಿದೆ. ಅನೇಕ ದೊಡ್ಡ ದೊಡ್ಡ ನೌಕರರು ನಿವೃತ್ತಿಯಾದ ಮೇಲೆ ರೈತರಾಗುತ್ತಾರೆ. ರೈತನ ವ್ಯಕ್ತಿತ್ವಕ್ಕೆ ಎಷ್ಟು ಗೌರವವಿದೆ ಎನ್ನುವುದನ್ನು ನಾವು ಅಲ್ಲಿ ನೋಡಬಹುದು. ಕೈಗಾರಿಕೆ ಮತ್ತು ವಾಣಿಜ್ಯದಲ್ಲಿ ಅದು ಮುಂದುವರಿದ ದೇಶವಾಗಿದ್ದರೂ ಅಲ್ಲಿನ ನೌಕರರು ನಿವೃತ್ತರಾದಮೇಲೆ ವ್ಯವಸಾಯಕ್ಕೆ ಹೆಚ್ಚಿನ ಗೌರವವಿದೆಯೆಂದು ರೈತರಾಗುತ್ತಾರೆ. ನಮ್ಮ ದೇಶದಲ್ಲಿ ಹಾಗೆ ಇಲ್ಲ. ಮಂತ್ರಿಗಳಾಗಿರುವವರೇ ತಮ್ಮ ಮಂತ್ರಿಪದವಿಯನ್ನೇನಾದರೂ ಬಿಟ್ಟರೆ, ಅವರು ಬೆಂಗಳೂರಿನಲ್ಲಿಯೇ ಒಂದು ದೊಡ್ಡ ಬಂಗಲೆ ಮನೆಗಳಲ್ಲಿದ್ದುಕೊಂಡು ಸುಖ ಜೀವನವನ್ನು ಮಾಡಿಕೊಂಡಿರುತ್ತಾರೆ.

4-30 P.M.

ನಮ್ಮ ದೇಶದಲ್ಲಿ ಈಗಿರತಕ್ಕ ಮಂತ್ರಿಮಂಡಲ ಕಾರ್ಯಾಚರಣೆಮಾಡುವುದಕ್ಕೆ ಪ್ರಾರಂಭವಾಗಿ ಸುಮಾರು 30 ತಿಂಗಳಾದುವು. ಈ 30 ತಿಂಗಳ ಅವಧಿಯಲ್ಲಿ ಇವರು ಏನು ಉತ್ಪತ್ತಿ ಮಾಡಿರತಕ್ಕಂಥಾದ್ದು ಎಂದರೆ 30 ಜನ ಮಂತ್ರಿಗಳನ್ನು ಕೊಟ್ಟಿದ್ದಾರೆ. ಇದು ಒಂದು ಕೀರ್ತಿ ಪತಾಕೆ ಆಗಿರಬಹುದು. ಈ ರೀತಿ ಮಂತ್ರಿಮಂಡಲವನ್ನು ನಿರ್ಮಾಣಮಾಡತಕ್ಕ ಮತ್ತು ರಾಜಭವನವನ್ನು ಕಟ್ಟತಕ್ಕಂಥ ಸೊಗಸಿನ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುವುದಕ್ಕೆ ಬದಲಾಗಿ ಇವೊತ್ತಿನ ದಿವಸ ಕ್ಷಾಮದ ದವಡೆಗೆ ಜನತೆ ಸಿಕ್ಕಿರತಕ್ಕ ಸಮಯದಲ್ಲಿ ಏನೊಂದು ತ್ಯಾಗವನ್ನೂ ತೋರಿಸತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ ಎಂದು ನಾನು ಸರ್ಕಾರಕ್ಕೆ ನಿರ್ದಿಷ್ಟವಾಗಿ ಹೇಳಬೇಕಾಗಿದೆ. ಸರ್ಕಾರದ ಧೋರಣೆಯಲ್ಲಿ ಕೂಡ ಮಾರ್ಪಾಡಾಗಬೇಕಾಗಿದೆ. ಇಂಥಾ ಒಂದು ದುರ್ಭಿಕ್ಷ ಕಾಲದಲ್ಲಿ ಈಗಾಗಲೇ ಜನಗಳು ಅನೇಕ ರೋಗಗಳಿಗೆ ತುತ್ತಾಗಿ ದೊಡ್ಡ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಈ ದೇಶದಲ್ಲಿ ಇಂಥಾ ಒಂದು ದುರ್ಭಿಕ್ಷ ಸ್ಥಿತಿಯಲ್ಲಿ ಸರ್ಕಾರ ತನ್ನ ನೀತಿಯಿಂದ ಒಳ್ಳೆಯ ಪರಿಣಾಮವನ್ನುಂಟುಮಾಡತಕ್ಕ ಕಾರ್ಯವನ್ನು ಮಾಡಬೇಕಾಗಿದೆ. ಈಗ

ತಾನೆ ನಮ್ಮ ಆರೋಗ್ಯ ಶಾಖೆಯ ಮಂತ್ರಿಗಳು ಹೇಳಿದರು ಈ ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಕಾಲರಾ ವ್ಯಾಕ್ಸಿನೇಷನ್ ಹಾಕಿಸಿದೆ ಎಂದು ಹಿರಿಯೂರಿನಿಂದ

"Medicine not adequate. District Health Officer failed to take necessary precautions"

ಹಾಗೆಂದು ಈಗತಾನೆ ಟೆಲಿಗ್ರಾಂ ಬಂತು. ಇವೊತ್ತು ದೇಶದಲ್ಲಿ ಏನೊಂದು ನಿಜವಾದ ಪರಿಸ್ಥಿತಿ ಇದೆಯೋ ಅದನ್ನು ಶಾಸನ ಸಭೆಯಲ್ಲಿ ಕೂಡ ನಿಜವಾಗಿ ಹೇಳುತ್ತಿಲ್ಲ. ದೇಶದಲ್ಲಿ ಎಲ್ಲಾ ಕಡೆ ಯಲ್ಲಿಯೂ ಕೂಡ ಸಂತುಷ್ಟಿಯಾಗಿ ಔಷಧಿ ಇದೆ. ತುಂಬಿ ತುಳುಕಾಡುತ್ತಿದೆ ಎಂದು ಹೇಳಿದ್ದಾರೆ. ಔಷಧಿ ಇಲ್ಲ ಎಂದು ಅವರು ಹೇಳುತ್ತಿದ್ದರೆ ನಿಜದ ಸ್ಥಿತಿಯನ್ನು ಪರೀಕ್ಷೆಮಾಡಿ ಯಾವುದು ನಿಜ ಎಂಬು ದನ್ನು ಅಳತೆಮಾಡಬೇಕು. ಈ ಒಂದು ಸರ್ಕಾರದ ಆಡಳಿತವಲ್ಲಿರತಕ್ಕ ಜನ ಸತ್ಯವನ್ನು ಹೇಳಿದ್ದರೆ ಇಂಥಾ ಒಂದು ಪರಿಸ್ಥಿತಿ ಎಲ್ಲಿ ಬರುತ್ತಿತ್ತು ? ಶಾಸನ ಸಭೆ ನಡೆಯತಕ್ಕ ಕಾಲದಲ್ಲಿ ಮಾನ್ಯ ಮಂತ್ರಿ ಗಳು ಡಿಲ್ಲಿಯಿಂದ ಬಂದ ತಕ್ಷಣ ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಂಬು ದನ್ನು ಪತ್ರಿಕಾ ಕಾರ್ಯಕರ್ತರಿಗೆ ಹೇಳಿದ್ದಾರೆ. ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಸಹ ಡಿಲ್ಲಿಯಲ್ಲಿ ಮುಖ್ಯ ಮಂತ್ರಿಗಳ ಕಾನ್ಫರೆನ್ಸಿನಲ್ಲಿ ಭಾಗವಹಿಸಿ ಇಲ್ಲಿಗೆ ಬಂದ ಮೇಲೆ ಇಷ್ಟು ಲಕ್ಷ ಟನ್ ಅಕ್ಕಿಯನ್ನು ಇಷ್ಟು ಲಕ್ಷ ಟನ್ ಗೋಧಿಯನ್ನು ತರುತ್ತೇವೆಂದು ಹೇಳಿದರು. ಶಾಸನ ಸಭೆ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಯಾವ ಯಾವ ತಾಲ್ಲೂಕಿನಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿ ಇದೆ ಎಂಬುದನ್ನು ಈ ಸಭೆಯಲ್ಲಿ ಹೇಳಬೇಕಾಗಿತ್ತು.

Mr. SPEAKER.—The earlier it is done, the better. There is no technicality about it.

Sri S. SIVAPPA.—Unfortunately we have not been supplied with facts and figures about each taluk, showing the actual position. That would have enabled us to bestow some thoughts.

ಇವೊತ್ತು ಸರ್ಕಾರದಲ್ಲಿ ಆ ಬಗ್ಗೆ ಇರತಕ್ಕ ಅಂಕಿ ಅಂಶಗಳನ್ನು ಕೊಟ್ಟು ಇಂಥಾ ಒಂದು ದುಸ್ಥಿತಿಯನ್ನು ತಡೆಗಟ್ಟಲು ಸರ್ಕಾರದವರು ಮಾಡಿರತಕ್ಕ ಕಾರ್ಯಕ್ರಮಗಳೇನೆಂಬುದನ್ನು ಹೇಳಿ ದರೆ ಅದರಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ಹೇಳತಕ್ಕದ್ದು ನಮ್ಮ ಜವಾಬ್ದಾರಿ. ಸರ್ಕಾರ ಆ ಬಗ್ಗೆ ಏನೊಂದು ಹೇಳಿಕೆಯನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ದೇಶದಲ್ಲಿ ಇಂಥಾ ಒಂದು ದುರ್ಭಿಕ್ಷ ಸ್ಥಿತಿಯಲ್ಲಿ ಜನತೆ ಮರಣದ ದವಡೆಯಲ್ಲಿರತಕ್ಕ ಕಾಲದಲ್ಲಿ ನೀವು ಯಾವುದ ರಲ್ಲಿ ತೊಡಗಿದ್ದೀರಿ ಎಂದರೆ ಪ್ರಜಾಪ್ರಭುತ್ವದಲ್ಲಿ ತಾವು ಯಾವ ರೀತಿ ಜನತೆಯಲ್ಲಿ ನಂಬಿಕೆಯನ್ನು ಹುಟ್ಟಿಸಬೇಕೋ ಆ ರೀತಿ ನಂಬಿಕೆಯನ್ನು ಹುಟ್ಟಿಸತಕ್ಕ ರೀತಿಯಲ್ಲಿ ಕಾರ್ಯವನ್ನು ಮಾಡುತ್ತಿಲ್ಲ. ಇವೊತ್ತು ನೀವು ಮಾಡುತ್ತಾ ಇರತಕ್ಕ ಕಾರ್ಯಕ್ರಮವನ್ನು ನೋಡಿದರೆ ದೇಶದ ಜನ ಏನೆಂದಾರು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಿಜವಾಗಿಯೂ ನಿಮಗೆ ಈ ದೇಶದಲ್ಲಿ ಪ್ರೇಮವಿದ್ದ ಪಕ್ಷದಲ್ಲಿ ಈ ಒಂದು ದುರ್ಭಿಕ್ಷ ಸ್ಥಿತಿಯಲ್ಲಿ 30 ಜನ ಮಂತ್ರಿಗಳಿರುವುದನ್ನು ಅರ್ಧಕ್ಕೆ ಎಂದರೆ 15 ಜನಕ್ಕೆ ಇಳಿಸಿದ್ದೀರಾ ? ಮಂತ್ರಿ ಸಂಖ್ಯೆಯನ್ನು ಇನ್ನೂ ಜಾಸ್ತಿ ಮಾಡುತ್ತೀರಿ. ದೇಶದಲ್ಲಿರತಕ್ಕ ಜನತೆಯ ಹಕ್ಕು ಬಾಧ್ಯತೆಗಳನ್ನು ಎತ್ತಿ ಹಿಡಿಯತಕ್ಕ ವಿರೋಧ ಪಕ್ಷದವರನ್ನ ನೀವು ಹತ್ತಿಕ್ಕುವುದಕ್ಕೆ ಹೋಗಬೇಡಿ. ಇಂಥಾ ಒಂದು ಕಾರ್ಯಕ್ರಮದಲ್ಲಿ ನೀವು ಇವೊತ್ತು ತೊಡಗಿದ್ದೀರಿ. ಆಹಾರದ ಅಭಾವದಿಂದ ಮರಣದ ಡವಡೆಯಲ್ಲಿ ಸಿಕ್ಕಿ ತೊಂದರೆ ಪಡುತ್ತಿರುವಾಗ ಕಾಂಗ್ರೆಸ್ ಪಕ್ಷದವರಾದ ನೀವು ನಮ್ಮ ವಿರೋಧಪಕ್ಷದವರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡಿದ್ದೀರಿ. ಈ ಒಂದು ಸಂಭ್ರಮ ಪ್ರಜಾಪ್ರಭುತ್ವವನ್ನು ಹತ್ತಿಕ್ಕತಕ್ಕ ಸಂಭ್ರಮ. ದೇಶದಲ್ಲಿ ಜನತೆಯ ಬಾಯನ್ನು ಮುಚ್ಚಿಸತಕ್ಕ ಕಾರ್ಯವನ್ನು ಮಾಡುವುದು ಸೂಕ್ತವಲ್ಲ. ಇವೊತ್ತು ದೇಶದಲ್ಲಿರತಕ್ಕ ಪ್ರಜಾಪ್ರಭುತ್ವವನ್ನು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಬೇಡಿ. ದೇಶದಲ್ಲಿ ಆಹಾರವನ್ನು ಎಷ್ಟರಮಟ್ಟಿಗೆ ಉತ್ಪತ್ತಿಮಾಡ ಬೇಕು, ದೇಶದ ಜನತೆಯನ್ನು ಈ ಕ್ಷಾಮದ ದವಡೆಯಿಂದ ಹೇಗೆ ಪಾರುಮಾಡಬೇಕು ಎಂಬುದರಲ್ಲಿ ಮಗ್ನರಾಗಿ. ಹಾಗೆ ಮಾಡುವುದಾದರೆ ಜನತೆ ತಮ್ಮನ್ನು ನಂಬಿ ತಮಗೆ ಮರ್ಯಾದೆ ಕೊಡುತ್ತಾರೆ. ತಾವು ಜನತೆಯ ಮೇಲೆ ವಿರೋಧವನ್ನು ಕಟ್ಟಿಕೊಂಡರೆ ತಾವು ತಮ್ಮ ಕಾರ್ಯಕ್ರಮಗಳಲ್ಲಿ ಜಯ ಶೀಲರಾಗುವುದಿಲ್ಲ. ದೇಶದಲ್ಲಿ ದುರ್ಭಿಕ್ಷ ಸ್ಥಿತಿಯನ್ನು ಹೆಚ್ಚು ಉತ್ಪ್ರೇಕ್ಷೆಮಾಡಿ ಗೊಂದಲಮಾಡತಕ್ಕ ಅಭಿಪ್ರಾಯ ನನಗಿಲ್ಲ. ಇವೊತ್ತು ನಮ್ಮ ದೇಶದಲ್ಲಿ ಜನತೆ ದುಸ್ಥಿತಿಯಿಂದ ಬಹಳ ಕಷ್ಟಕ್ಕೆ ಈಡಾ ಗಿದ್ದಾರೆ. ಆದ್ದರಿಂದ ಸರ್ಕಾರದವರು ಜನತೆಯನ್ನು ಕಷ್ಟದಿಂದ ಪಾರುಮಾಡುವುದಕ್ಕೆ ಪ್ರಯತ್ನ

(ಶ್ರೀ ಎಸ್. ಶಿವಪ್ಪ)

ಮಾಡಬೇಕು. ಸರ್ಕಾರದವರು ಮಾಡತಕ್ಕ ಇಂಥಾ ಒಂದು ಕಾರ್ಯಕ್ಕೆ ನಮ್ಮ ಸಹಕಾರ ಇದೆ ಎನ್ನತಕ್ಕ ಒಂದು ಭರವಸೆಯನ್ನು ನಾನು ಸರ್ಕಾರಕ್ಕೆ ಮೊದಲು ಕೊಡುತ್ತೇನೆ. ಸರ್ಕಾರದವರು ನಮ್ಮಲ್ಲಿ ನಂಬಿಕೆಯನ್ನು ಇಡಿ. ನಾವು ಮಾಡಿರತಕ್ಕ ಸಲಹೆಗಳಿಗೆ ಮನ್ನಣೆಯನ್ನು ಕೊಡಿ. ಆ ರೀತಿ ಮಾಡುವುದಾದರೆ ನಿಮ್ಮ ಏನೊಂದು ಕಾರ್ಯಕ್ರಮ ಇದೆಯೋ ಅದಕ್ಕೆ ಇವು ತುಂಬಾ ನೆರವಾಗಿರುತ್ತವೆ. ನಾನು ಮಾನ್ಯ ಆಹಾರ ಖಾತೆಯ ಸಚಿವರಿಗೆ ಹೇಳುತ್ತೇನೆ. ಇವೊತ್ತು ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳಬೇಕಾದರೆ ಯುದ್ಧ ಪರಿಸ್ಥಿತಿಯಲ್ಲಿ ಯಾವ ರೀತಿ ವರ್ತಿಸಿ ಯಾವ ರೀತಿ ಒಂದು ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆಯೋ ಆ ರೀತಿ ಮಾಡಬೇಕು. ನಾನು ಮಲೆನಾಡಿನಿಂದ ಬರುತ್ತಿದ್ದೇನೆ. ಹಾಸನ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೊದಲು ಮಳೆ ಪ್ರಾರಂಭವಾಗಿ ನಂತರ ಇಲ್ಲಿ ಮಳೆ ಬರಬೇಕು. ಹೀಗಿದ್ದರೂ ಕೂಡ ನಮ್ಮ ಹಾಸನ ಜಿಲ್ಲೆಯಲ್ಲಿಯೂ ಸಹ ಮಳೆ ಬಿದ್ದಿಲ್ಲ. ಅಲ್ಲಿಯೂ ಇಂಥಾ ಒಂದು ದಾರುಣ ಪರಿಸ್ಥಿತಿ ಇದೆಯೆಂದು ಗೊತ್ತಾಗುತ್ತದೆ. ಬಿಜಾಪುರ, ರಾಯಚೂರು, ಚಿತ್ರದುರ್ಗ ಈ ಪ್ರದೇಶಗಳಲ್ಲಿಯೂ ಕ್ಷಾಮ ಪರಿಸ್ಥಿತಿ ಇದೆ. ಇಂಥಾ ಒಂದು ದುರ್ಭಿಕ್ಷಕಾಲದಲ್ಲಿ ದನಕರುಗಳನ್ನು ಸಾಕತಕ್ಕ ಪರಿಸ್ಥಿತಿ ಹೇಗೆ ಎನ್ನತಕ್ಕ ವಿಷಯ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಗೊತ್ತಿದೆ. ದನಕರುಗಳಿಗೆ ಹುಲ್ಲು ಇಲ್ಲದೆ ಬೀದಿ ಬೀದಿಗಳಲ್ಲಿ ಅಲೆಯುವಂಥಾ ಒಂದು ಪರಿಸ್ಥಿತಿ ಬಂದಿದೆ.

ಮುಂಗಾರು ಮಳೆ ಬಂದಿಲ್ಲ. ಪೈರು ಬರಲಿಲ್ಲ. ಆದ್ದರಿಂದ ಜನತೆ ಚಿಂತಾಕ್ರಾಂತರಾಗಿದ್ದಾರೆ. ಜನತೆಗೆ ಆಹಾರಧಾನ್ಯವನ್ನು ಒದಗಿಸಬೇಕು. ಮತ್ತು ದನಕರುಗಳಿಗೆ ಮೇವನ್ನು ಒದಗಿಸತಕ್ಕ ಏರ್ಪಾಡನ್ನು ಮಾಡಬೇಕೆಂದು ಹೇಳಿ ಮಾನ್ಯ ಸಭಾಪತಿಯವರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Before I call upon anybody else, I wish to inform the House that we are meeting to-morrow at 12 NOON and there will be a tea break between 3 P.M. and 3.30 P.M. I suppose several members are desirous of participating in the debate. Therefore, I propose that the whole of to-day and to-morrow will be open for discussion and the reply will be given by the Minister the day-after.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ:—ಶ್ರೀಮತಿ ನಾಗರತ್ನಮ್ಮ ನವರು ಬೇಕಾದರೆ ಪಾರ್ಟಿ ಮೀಟಿಂಗಿನಲ್ಲಿ ಮಾತನಾಡಬಹುದು. ಆದ್ದರಿಂದ ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಒಳ್ಳೆಯದು. ಇನ್ನೊಂದು ವಿಷಯವೇನೆಂದರೆ ನಾಳೆ ದಿವಸ ಡೆಪ್ಯುಟಿ ಕಮೀಷನರ ಮೀಟಿಂಗ್ ಇಲ್ಲಿ ನಡೆಯುತ್ತದೆ. ಆ ಮೀಟಿಂಗಿನಲ್ಲಿ ನಾವು ಭಾಗವಹಿಸಿದರೆ ಒಳ್ಳೆಯದು.

Sri M. V. KRISHNAPPA:— I would like to inform the House that I am going to ask the Deputy Commissioners to come and sit here for an hour or two to-morrow.

Sri V. S. PATIL:— It would facilitate discussion if figures pertaining to cach taluk regarding scarcity conditions are furnished to us. Pictures of labourers who had no food had appeared in the newspapers.

Sri M. V. KRISHNAPPA:— Scarcity conditions have been started only recently. Normally, monsoon breaks on 15th of June. Monsoon has been delayed.

ಸ್ವಲ್ಪ 13-14 ದಿವಸ ಡಿಲೇ ಆಗಿದೆ. ಒಂದು ತಿಂಗಳಾಗಿಲ್ಲ, ಅಥವಾ ಎರಡು ತಿಂಗಳಾಗಿಲ್ಲ ಈಗ 10-12 ದಿವಸಗಳಿಂದ ಇಷ್ಟು ಅಭಾವ ಪ್ರಾರಂಭವಾಗಿದೆ. ಈಗ ಸದ್ಯಕ್ಕೆ ಎಷ್ಟು ವರ್ತಮಾನ ಬರಬಹುದೋ ಅಷ್ಟು ವರ್ತಮಾನ ಬಂದಿದೆ. ಈಗ ಬಂದಿರತಕ್ಕ ವರ್ತಮಾನವನ್ನ ಈ ಸಭೆಯಲ್ಲಿ ಹೇಳುವುದಾದರೆ ಬೇರೆಯವರಿಗೆ ಅಸಮಾಧಾನವಾಗುತ್ತದೆ. ಮಾನ್ಯ ಸದಸ್ಯರುಗಳೆಲ್ಲಾ ಏನೇನು ಸಲಹೆಗಳನ್ನು ಕೊಡುತ್ತಾರೆಯೋ ಅವುಗಳನ್ನೆಲ್ಲಾ ತೆಗೆದುಕೊಂಡು ನಂತರ ಉತ್ತರವನ್ನ ಕೊಡುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯಸಭಾಪತಿಗಳೇ, ಈ ದಿವಸ ಅಭಾವ ಪರಿಸ್ಥಿತಿಯ ಬಗ್ಗೆ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ.

ಪ್ರಕೃತಿಯ ಶಾಪವೆನ್ನಿ, ಇಲ್ಲವೇ ಅನಾವೃಷ್ಟಿಯ ಪರಿಣಾಮವೆನ್ನಿ, ನಮ್ಮ ರಾಜ್ಯದ ಹಲವು ಕಡೆಗಳಲ್ಲಿ ತುಂಬ ಅಭಾವ ಪರಿಸ್ಥಿತಿಯುಂಟಾಗಿದೆ. ಕೆಲವು ಕಡೆಗಳಲ್ಲಂತೂ ಈ ಅಭಾವ ಪರಿಸ್ಥಿತಿ ಇದೆ, ಪರಿಸ್ಥಿತಿ ಕರುಣಾಜನಕವಾಗಿದೆ ಎಂಬ ವರದಿಗಳು ಬರುತ್ತಿವೆ. ಚಿತ್ರದುರ್ಗ ಮತ್ತು ಇತರ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಜನರು ಗೆಡ್ಡೆ, ಗೆಣಸು, ಸೊಪ್ಪು ತಿಂದು ಜೀವಿಸುತ್ತಿದ್ದಾರೆಂಬ ವರದಿಗಳು ಬಂದಿವೆ. ಜನ, ಜಾನುವಾರುಗಳಿಗೆ ನೀರಿನ ಅಭಾವವೂ ಉಂಟೆಂದು ತಿಳಿದು ಬಂದಿದೆ. ಮೇವಿಲ್ಲದೆ ಮೂಳೆ ತೊಗಲುಗಳಿಂದ ಕೆಲವು ಕಡೆ ಜಾನುವಾರುಗಳು ಪ್ರಾಣ ಹಿಡಿದುಕೊಂಡಿವೆಯೆಂಬ ನೈಜ ಚಿತ್ರಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈ ಬಗ್ಗೆ ಆಡಳಿತ ನಡೆಸತಕ್ಕವರು ಈ ಪರಿಸ್ಥಿತಿ ಬರುವ ಮುಂಚೆಯೇ ಸೂಕ್ತ ಕಾರ್ಯಕ್ರಮಗಳನ್ನು ಏಕೆ ಕೈಗೊಳ್ಳಲಿಲ್ಲ ಎಂದು ಪ್ರಶ್ನಿಸುವುದು ಸಹಜವಾಗಿದೆ. ಕೋಲಾರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ರಾಯಚೂರು, ಮತ್ತು ಧಾರವಾಡ ಈ ಜಿಲ್ಲೆಗಳ ಕೆಲವು ಪ್ರದೇಶಗಳು ಅನಾವೃಷ್ಟಿಯ ದೆಸೆಯಿಂದ ಪದೇಪದೇ ಅಭಾವ ಪರಿಸ್ಥಿತಿಗೆ ಒಳಗಾಗುತ್ತಿವೆ ಎಂಬ ವಿಚಾರ ದೇಶಾದ್ಯಂತ ಗೊತ್ತಿದೆ. ಹೀಗಿದ್ದರೂ ಇದರ ನಿವಾರಣೆಗಾಗಿ ಏನೊಂದೂ ನಿರ್ದಿಷ್ಟ ಕಾರ್ಯಕ್ರಮಗಳನ್ನು ಸರಕಾರ ಕೈಗೊಳ್ಳದಿರುವುದಕ್ಕಾಗಿ ತುಂಬ ಆಶ್ಚರ್ಯಪಡಬೇಕಾಗಿದೆ. ''ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡುವ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದ್ದಾರೆಂದರೆ'' ಅತಿಶಯೋಕ್ತಿಯಾಗಲಾರದು. ''ನೋಡೋಣ, ಪ್ರಸಂಗ ಬಂದಾಗ ಮಾಡೋಣ'' ಎಂಬ ಅಲಕ್ಷ್ಯ ಮತ್ತು ಅಜಾಗರೂಕತೆಯ ಧೋರಣೆ ಆಡಳಿತದವರಿಗೆ ಇದೆಯೇನೋ ಎಂಬ ಭಾವನೆ ಸಹಜವಾಗಿಯೇ ಜನರಿಗೆ ಬರುತ್ತಿದೆ. ನಮ್ಮ ಸರ್ಕಾರ ಈ ಬಗ್ಗೆ ಜಾಗರೂಕತೆಯಿಂದಲೇ ಇದೆ ಎಂದು ಹೇಳೋಣ. ಆದರೆ ಜನತೆ ಇದನ್ನು ನಂಬಬೇಕಲ್ಲ! ಜಾಗರೂಕತೆ ಇದ್ದರೆ, ಈ ಅಭಾವ ಪರಿಸ್ಥಿತಿ ಪದೇ ಪದೇ ಏಕೆ ಬರುತ್ತಿದೆ, ಎಂದು ಪ್ರಜೆಗಳು ಪ್ರಶ್ನಿಸಿದರೆ ನಮಗೆ ಉತ್ತರವೇ ಇಲ್ಲದಂತಾಗುತ್ತದೆ. ಇದಕ್ಕೆ ಉತ್ತರ ಆಡಳಿತದವರಲ್ಲಿದ್ದರೆ ದಯೆಯಿಟ್ಟು ತಿಳಿಸಿದರೆ ನಾವೂ ಸಮಾಧಾನ ಪಟ್ಟು ಕೊಳ್ಳುತ್ತೇವೆ.

ಪ್ರಕೃತಿಯ ವಿಕೋಪಕ್ಕೆ ಗುರಿಯಾಗಿರುವ ಕೆಲವು ಪ್ರದೇಶಗಳ ಅಭಾವ ಪರಿಸ್ಥಿತಿಯನ್ನು ತೊಲಗಿಸಲು ಈ ಒಳಗೇ ಸರ್ಕಾರ ಖಾಯಂ ಕಾರ್ಯಕ್ರಮಗಳನ್ನು ಕೈಕೊಳ್ಳಬಹುದಾಗಿತ್ತು. ಆ ಪ್ರದೇಶಗಳಿಗಾಗಿಯೇ ಪ್ರತ್ಯೇಕ ಕಾಮಗಾರಿ ಪ್ರಯತ್ನಗಳು, ಪ್ರತ್ಯೇಕ ಪರಿಹಾರ ಕಾರ್ಯಕ್ರಮಗಳು, ಆ ಪ್ರದೇಶಗಳಿಗಾಗಿಯೇ ಅಭಾವ ಪರಿಸ್ಥಿತಿಯ ನಿವಾರಣೆಯ ಮೀಸಲು ನಿಧಿ ಇತ್ಯಾದಿಗಳನ್ನು ಏರ್ಪಡಿಸಬಹುದಾಗಿತ್ತು. ಅನಾವೃಷ್ಟಿಗೆ ಹೆಸರಾಂತ ರಾಜಸ್ಥಾನದಲ್ಲಿ, ಅದೂ ಮರಳುಗಾಡು ಪ್ರದೇಶಗಳಲ್ಲಿ ಖಾಯಂ ಪರಿಹಾರ ಕ್ರಮಗಳಿಂದ ಫಲವತ್ತಾದ ಪ್ರದೇಶಗಳನ್ನಾಗಿ ಮಾಡಿದ್ದಾರೆಂದು ತಿಳಿದು ಬಂದಿದೆ. ಅಲ್ಲಿಯ ಸರ್ಕಾರದ ಇಂತಹ ಪ್ರಯತ್ನಕ್ಕೆ, ಸಾಹಸಕ್ಕೆ, ನಿಜವಾಗಿಯೂ ಎಲ್ಲರ ಮೆಚ್ಚುಗೆಯು ಉಂಟು. ನಮ್ಮ ಅಭಾವ ಪ್ರದೇಶಗಳಲ್ಲಿ ಭೂಮಿ ತುಂಬ ಉತ್ತಮವಲ್ಲದೇ ಇದ್ದರೂ ಉತ್ತಮವಾದ ಭೂಮಿಯೇ ಇದೆ. ಇರುವ ಕೊರತೆ ಎಂದರೆ ನೀರಿನದೇ. ವರ್ಷಾಂತರಗಳಿಂದ ಉಂಟಾಗುತ್ತಿರುವ ಈ ಪ್ರದೇಶಗಳ ಅಭಾವ ನಿವಾರಣೆಗೆ ಕಾರ್ಯಕ್ರಮ ಕೈಗೊಳ್ಳಲು ಹಿಂದಿನ ಮತ್ತು ಇಂದಿನ ನಮ್ಮ ಸರ್ಕಾರಕ್ಕೆ ಇದ್ದ ಅಡ್ಡಿ ಆತಂಕಗಳು, ಕಂಟಕಗಳು ಏನೆಂಬುದು ನಮಗಂತೂ ಗೊತ್ತಿಲ್ಲ, ಸರ್ಕಾರಕ್ಕೂ ಗೊತ್ತಿಲ್ಲವೆಂದೇ ಹೇಳಬೇಕಾಗುತ್ತದೆ. ಸರ್ಕಾರದವರಲ್ಲಿ ನನ್ನ ಕೋರಿಕೆ ಇಷ್ಟೇ. ಪದೇಪದೇ ಬರುತ್ತಿರುವ ಈ ಅಭಾವ ಪರಿಸ್ಥಿತಿಯನ್ನು ತೊಲಗಿಸುವ ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆಯೇ ಆಗಲಿ–ಭಗೀರಥ ಗಂಗೆಯನ್ನು ತಂದಂತೆ ಭಗೀರಥ ಪ್ರಯತ್ನವೆ ಆಗಲಿ–ಅಂದರೆ ಮೊಗಲಾಯಿ ರಾಜ್ಯದ ಕಾರ್ಯಕ್ರಮಗಳಲ್ಲ, ರಾಮರಾಜ್ಯದ ಕಾರ್ಯಕ್ರಮಗಳನ್ನು ಕೈಗೊಳ್ಳಿರೆಂದು ವಿನಂತಿಸುತ್ತೇನೆ ಅಂದರೆ ಅಭಾವ ಪ್ರದೇಶದಲ್ಲಿರುವ ಹಳ್ಳಿಗಳಿಗೆ ಅಥವಾ ನದಿಗಳಿಗೆ ಅಣೆಕಟ್ಟು ಹಾಕುವುದು, ಇಲ್ಲವೇ ಕೆರೆಗಳನ್ನು ಕಟ್ಟಿಸುವುದು, ರೈತರಿಗೆ ಬಾವಿ ತೋಡಿಸಲು ಸರ್ಕಾರ ಸಹಾಯ ಮಾಡುತ್ತಿರುವ ಸಹಾಯ ಧನದಿಂದ ರೈತರಿಗೆ ಬಾವಿಯು ಆಗುವಂತೆ ಸರ್ಕಾರದ ನೇತೃತ್ವದಲ್ಲಿಯೇ ನೋಡಿಕೊಳ್ಳುವುದು, ಅಭಾವ ತಲೆದೋರಿದ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸುವುದು, ಆಹಾರ ಧಾನ್ಯಗಳನ್ನು ಅಗ್ಗದ ದರದಲ್ಲಿ ಅಂತಹ ಪ್ರದೇಶಗಳಿಗೆ ಒದಗಿಸುವಂತೆ ಮಾಡುವುದು, ಜನ, ಜಾನುವಾರುಗಳಿಗೆ ಬೋರ್‌ವೆಲ್ ಮೂಲಕ ನೀರು ಒದಗಿಸುವುದು, ಜಾನುವಾರುಗಳಿಗೆ ಮೇವು ಒದಗಿಸುವುದು ಇಂತಹ ಯಾವ ಕಾರ್ಯಕ್ರಮಗಳನ್ನು ಕೈಗೊಂಡರೊ ಸರ್ಕಾರಕ್ಕೆ ಜನತೆಯ ಸಂಪೂರ್ಣ ಬೆಂಬಲವುಂಟೆಂದು ಹೇಳಬಯಸುತ್ತೇನೆ.

ಕೆಲವು ಮಲೆನಾಡಿನ ಅಂಚಿನ ಪ್ರದೇಶಗಳಲ್ಲಿ ಅಭಾವ ಇತ್ತೀಚೆಗೆ ತಲೆದೋರುತ್ತಿದೆ. ಮಳೆಯ ಅನಿಶ್ಚಿತ ಪರಿಸ್ಥಿತಿಯಿಂದ ಮಳೆ ಬರುತ್ತದೆಂದು ಬತ್ತ ಹಾಕಿದರೆ ಮಳೆ ಇಲ್ಲದೆ ಬತ್ತದ ಬೆಳೆ ಒಣಗಿ ಹೋಗುತ್ತದೆ. ಮಳೆ ಇಲ್ಲವೆಂದು ಜೋಳ ವಗೈರೆ ಖುಷ್ಕಿ ಬೆಳೆಯನ್ನು ಹಾಕಿದರೆ ಮಳೆ ಹೆಚ್ಚಾಗಿ ಬಂದು ಇದೂ ಕೆಟ್ಟು ಹೋಗುತ್ತದೆ. ಹಿರೇಕೆರೂರು, ಬ್ಯಾಡಗಿ, ಹಾನಗಲ್, ಶಿಗ್ಗಾವಿ, ಹುಬ್ಬಳ್ಳಿ, ಕಲಘಟಗಿ-ಮುಂತಾದ ಭಾಗಗಳಲ್ಲಿ ತುಂಬ ತೊಂದರೆಯುಂಟಾಗುತ್ತಿದೆ. ಇಂಥ ಸ್ಥಳಗಳಿಗೆ ವಿದ್ಯು

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಚ್ಛಕ್ತಿ ಮತ್ತು ಪಂಪ್‌ಸೆಟ್ಟುಗಳನ್ನು ಒದಗಿಸಬೇಕು. ಅಲ್ಲದೆ ಮಲೆನಾಡಿನ ಅಂಚಿನಲ್ಲಿರುವ ಹಳೆಯ ಕೆರೆಗಳ ದುರಸ್ತಿಗೆ ಹೆಚ್ಚು ಹಣವನ್ನು ಸರ್ಕಾರದವರು ಒದಗಿಸಬೇಕು. ಹೀಗಾದರೆ ಈ ಭಾಗ ದಲ್ಲಿರುವ ಅಭಾವವನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಲು ಅವಕಾಶವಾಗುತ್ತದೆ.

ಅತಿವೃಷ್ಟಿಯ ಅನಾಹುತಗಳಿಗೆ ನಾವು ವಿಸ್ಮಯ ಪಡುವುದು ಸಹಜ. ಆದರೆ ಅನಾವೃಷ್ಟಿಯ ಅನಾಹುತಗಳಿಗೆ 'ಹೋದೆಯಾ ಪಿಶಾಚಿ ಅಂದರೆ ಗವಾಕ್ಷಿಯಲ್ಲಿ ಬಂದೆ' ಎಂಬಂತೆ ಪದೇ ಪದೇ ಬರುತ್ತಿರುವ ಈ ಅಭಾವದ ಪಿಡುಗನ್ನು ಖಾಯಂ ಆಗಿ ನಿವಾರಿಸುವುದು ಅಸಾಧ್ಯವಾದದ್ದೇನೂ ಅಲ್ಲ. ಇಂತಹ ಸಾಹಸ ಕಾರ್ಯ ಮಾಡಿದರೆ, ಸರ್ಕಾರಕ್ಕೆ ಕೀರ್ತಿ ಬರುತ್ತದೆ. ಅಭಾವ ಪರಿಸ್ಥಿತಿ ಯಿಂದ ಅನೇಕರು ಅನ್ನವಿಲ್ಲದೆ ಸತ್ತರೆಂಬ ಕಳಂಕ, ಕರಾಳ ಕಳಂಕವು ಬರಲಾರದೆಂದೇ ಇಟ್ಟು ಕೊಳ್ಳೋಣ. ಒಂದು ವೇಳೆ ಬಂದರೆ ಅದು ಆಡಳಿತವಾಗುವುದಿಲ್ಲ, ಅನಾಡಳಿತವಾಗುತ್ತದೆ. ಆಡಳಿತದ ಸತ್ವ ಪರೀಕ್ಷೆಗಾಗಿಯೋ ಏನೋ ಈ ಅಭಾವ ಪರಿಸ್ಥಿತಿ ಪದೇ ಪದೇ ಬರುತ್ತಿದೆ. ಈ ಸತ್ವ ಪರೀಕ್ಷೆಯಲ್ಲಿ ಜಯಶಾಲಿಗಳಾಗಿರಿ, ದಿಟ್ಟತೆಯಿಂದ ಗೆಲ್ಲಿರಿ ಎಂಬ ನಮ್ಮ ಹರಕೆ ಸರಕಾರಕ್ಕೆ ಉಂಟೆಂದು ಸಂತೋಷದಿಂದ ಹೇಳಬಯಸುತ್ತೇನೆ.

ಇನ್ನು ಧಾರಣೆವಾಸಿಗಳು ಆಕಾಶ ವಿಮಾನದಲ್ಲೇ ಓಡಾಡುತ್ತಿವೆ. ನಾವು ವಿಮಾನ ಏರು ವಂತಿಲ್ಲ, ಅವು ನಮಗೆ ನಿಲುಕುವಂತಿಲ್ಲ ಎಂಬಂತಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಒಳ್ಳೆಯ ಸುದ್ದಿಯನ್ನು ದಿಲ್ಲಿಯಿಂದ ತಂದಿದ್ದಾರೆ. ಒಂದು ಲಕ್ಷ ಪಲ್ಲ ಅಕ್ಕಿ, ಎರಡು ಲಕ್ಷ ಪಲ್ಲ ಗೋಧಿ ಕೂಡಲೇ ನಮ್ಮ ರಾಜ್ಯಕ್ಕೆ ಬರುತ್ತದೆ ಎಂದು ಹೇಳಿದ್ದಾರೆ. ಧಾನ್ಯ ಸಾಗಾಣಿಕೆಗೆ ಒಳ ರಾಜ್ಯಗಳ ಅಡ್ಡಿ ಆತಂಕಗಳನ್ನು ತೆಗೆಯಲಾಗುವುದು. ಆಂಧ್ರದಿಂದ ಹೆಚ್ಚು ಅಕ್ಕಿ ಸರಬರಾಜಿಗೆ ವ್ಯಾಗನ್ ಇತ್ಯಾದಿ ರೈಲ್ವೆ ಸೌಕರ್ಯವನ್ನೂ ಸಹ ಒದಗಿಸಲು ವ್ಯವಸ್ಥೆಯಾಗಿದೆ ವಗೈರೆ ಹೇಳಿದ್ದಾರೆ. ಮಹಾರಾಷ್ಟ್ರದಿಂದ ಬಹು ಪ್ರಮಾಣದಲ್ಲಿ ಬೇಳೆಯೂ ಬರುತ್ತದೆಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ರಾಜ್ಯಕ್ಕೆ 50 ಸಾವಿರ ಟನ್ ಅಕ್ಕಿ, 50 ಸಾವಿರ ಟನ್ ಗೋಧಿ ಒದಗಿಸಬೇಕೆಂದು ಕೇಂದ್ರ ಸರ್ಕಾರ ದವರನ್ನು ಕೇಳಿಕೊಂಡಿದ್ದೇವೆಂದು ಹೇಳಿದ್ದಾರೆ. ಇದು ಸಂತೋಷದ ವಿಚಾರ. ಮುಖ್ಯಮಂತ್ರಿಗಳ ಈ ಪ್ರಯತ್ನಕ್ಕೆ ನಮ್ಮ ಅನಂತ ಧನ್ಯವಾದಗಳುಂಟೆಂದು ತಿಳಿಸಿ ಈ ಆಹಾರ ಪದಾರ್ಥಗಳು ಬಂದ ನಂತರ ಎಲ್ಲೆಲ್ಲಿ ಹೇಗೆ ಹೇಗೆ ವಿನಿಯೋಗವಾಗುತ್ತದೆಂಬುದನ್ನು ಸಹ ಕುತೂಹಲದಿಂದ ನಾವು ನಿರೀಕ್ಷಿ ಸುತ್ತೇವೆಂದು ಹೇಳಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ, ನಮ್ಮೆಲ್ಲರಿಗೂ ಬೇಕಾಗಿರತಕ್ಕ ವಿಚಾರವನ್ನು ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ವರ್ತಕರು ದೇಶ ಪ್ರೇಮದಿಂದ ಬಳಕೆದಾರರ ಹಿತದೃಷ್ಟಿಯಿಂದ ವರ್ತಿಸಬೇಕು, ಸರಿಯಾಗಿ ವರ್ತಿಸದೆ ಇದ್ದಲ್ಲಿ ಏನು ಮಾಡಬೇಕೆಂಬುದು ನಮಗೆ ಗೊತ್ತು. ಆ ಬಗ್ಗೆ ನಮ್ಮ ಪ್ರಧಾನ ಮಂತ್ರಿಗಳು ಉಗ್ರ ಎಚ್ಚರಿಕೆಯನ್ನು ನೀಡಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿ ಗಳು ಹೇಳಿದ್ದಾರೆ. ಇದಂತೂ ನಮಗೆ ಅಮೃತ ಸಮಾನವಾದ ವಿಚಾರ. ಆಹಾರ ಧಾನ್ಯವೇನೊ ಈ ಪ್ರಯತ್ನಗಳಿಂದ ದೊರೆಯುವುದು ನಿಸ್ಸಂದೇಹವಾದ ವಿಚಾರ. ದೊರೆತ ಆಹಾರ ಧಾನ್ಯ ಸರಿಯಾಗಿ ವಿನಿಯೋಗವಾಗುವ ವಿಚಾರದಲ್ಲಿ ಮಾತ್ರ ಸಂದೇಹ ಉಂಟು. ನಮ್ಮ ಮುಖ್ಯ ಮಂತ್ರಿಗಳು ವರ್ತಕರಿಗೆ ಮಾತ್ರ ಎಚ್ಚರಿಕೆ ಕೊಟ್ಟಿದ್ದಾರೆ. ಈ ಆಹಾರ ಪದಾರ್ಥಗಳನ್ನು ಮಾರಾಟಕ್ಕೆ ವರ್ತಕರಿಗೆ ಬಿಡುಗಡೆ ಮಾಡುವ ಬಗ್ಗೆ ನೇಮಿಸಲ್ಪಡುವ ಅಧಿಕಾರಿಗಳಿಗೆ ಸರಕಾರಿ ದಾಸ್ತಾನು ಕೋಠಿಗಳಲ್ಲಿ ಆಹಾರ ಧಾನ್ಯದ ರಕ್ಷಣೆಯ ಬಗ್ಗೆ ನೇಮಕವಾಗುವ ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಈಗಲೇ ಸರಿಯಾದ ಎಚ್ಚರಿಕೆ ಕೊಟ್ಟಿದ್ದರೆ ಚೆನ್ನಾಗಿತ್ತು. ಬಡಜನರ ಹೊಟ್ಟೆ ಹೊಡೆದು ತಮ್ಮ ಹೊಟ್ಟೆ ಬೆಳಸಿಕೊಳ್ಳುವ ಕಾಳಸಂತೆ ಕದೀಮರಿಗೆ, ಇವರಿಗೆ ನೆರವಾಗುವ ಅಧಿಕಾರಿಗಳಿಗೆ ಕಾನೂನು ಶಿಕ್ಷೆ ಕೊಡುವುದಕ್ಕೆ ಮುಂಚೆ ಪೋಲೀಸ್ ಇಲಾಖೆಯಲ್ಲಿ ವ್ಯವಹಾರದಲ್ಲಿರುವ ಮೂಗುಂ ಶಿಕ್ಷೆಗಳನ್ನು ಕೊಟ್ಟು ಆಮೇಲೆ ಕಟ್ಟಳೆ ವಿಚಾರಣೆ ವಗೈರೆ ಕಾನೂನು ಪ್ರಕಾರ ನಡೆದರೆ ಒಳ್ಳೆಯದೇನೋ ಎಂದು ನನಗನ್ನಿಸುತ್ತದೆ. ಈ ಹಿಂದೆ ಸರಕಾರದ ಆಹಾರ ಧಾನ್ಯ ಹಂಚಿಕೆಯಲ್ಲಿ ಅನಂತ ಅಕ್ರಮ ನಡೆದಿರು ವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅಂತೆಯೇ ಒಬ್ಬ ರಾಜಕೀಯ ಟೀಕಾಕಾರರು "ಸರಕಾರಿ ಕೋಠಿ ಖಾನೆಯಲ್ಲಿದ್ದ ಧಾನ್ಯ ಮಧ್ಯರಾತ್ರಿಗೆ ತಿಂದುಹಾಕಿದುವು ಹೆಗ್ಗಣ," ಹೀಗೆಂದು ವರದಿ ಮಾಡಿದನ್ನು ನಿಜವೆಂದೇ ನಂಬಿತು ಆಗಿನ ಸರಕಾರ ಎಂದು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಸರಕಾರ ತುಂಬಾ ನಿಗಾ ಇಡಬೇಕು. ಪ್ರಾಮಾಣಿಕತೆಗೆ ಬೆಲೆ ಕೊಡಬೇಕು. ರಾಜಕೀಯದಲ್ಲಿ ನಂಬಿಗೆ ಬಂದು ಅಪರಾಧ. ಯಾರನ್ನಾದರೂ ಅಧಿಕಾರಿಗಳನ್ನೇ ಆಗಲಿ ವರ್ತಕರನ್ನೇ ಆಗಲಿ ನಂಬಿದರೆ ಅವರು ಕೈ ಕೊಟ್ಟುಬಿಡುತ್ತಾರೆ. ಕಾರಣ ನಂಬಿದಂತಿರಬೇಕು ನಂಬದಲೇ ಇರಬೇಕು. ನಂಬಿದರೆ ಕೆಡಕು ತಪ್ಪದು. ಇದಕ್ಕಿಂಬು ಗೊಡಬೇಡಿ, ಎಂದು ಸರಕಾರದವರಿಗೆ ಹೇಳಬಯಸುತ್ತೇನೆ.

ಆಹಾರ ಧಾನ್ಯಗಳ ವ್ಯಾಪಾರ ಯಾರು ನಡಸಬೇಕು ? ವ್ಯಾಪಾರಸ್ಥರೇ ಅಥವ ಸರ್ಕಾರವೇ ಎಂಬುದನ್ನು ಖಡಾ ಖಂಡಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ವ್ಯಾಪಾರಸ್ಥರು ಮಾಡಲೆಂದರೆ ಅವರು ಸರ್ಪವಿದ್ದಂತೆ. ಸರ್ಕಾರ ಮಾಡಲೆಂದರೆ ಹುಲಿ ಇದ್ದಂತೆ. ಇವೆರಡು ಮರಣಾಂತರ ಪ್ರಾಣಿಗಳ ಮಧ್ಯೆ ಜನತೆ ಪಾರಾಗಬೇಕಾಗಿದೆ. ಇನ್ನು ಧಾರಣೆ ವಾಸಿಗಳ ನಿಗದಿ ಆದರೂ ಅಷ್ಟೇ. ಇಲ್ಲಿ ಬೆಳೆದ ರೈತರಿಗೆ ಏಟು ಬೀಳುತ್ತದೆ. ತನ್ನ ಬೆಳೆಗೆ ತಕ್ಕ ಪ್ರತಿಫಲ ದೊರೆಯದಿದ್ದರೆ ರೈತರು ವ್ಯವಸಾಯದಲ್ಲಿ ನಿರುತ್ಸಾಹ ತೋರಿಸುವುದು ಸ್ವಾಭಾವಿಕ. ಹೀಗೆ ಆಹಾರ ಧಾನ್ಯದ ಬೆಲೆ ಹಂಚಿಕೆಗಳು ಅಖಿಲ ಭಾರತದ ತೊಡಕಿನ ಪ್ರಶ್ನೆಗಳಾಗಿವೆ. ತಜ್ಞರ ತಲೆ ತಿನ್ನುತ್ತಿವೆ. ಈ ಪ್ರಸಂಗದಲ್ಲಿ ನಮಗೆ ಉಳಿದಿರುವ ದಾರಿ ಒಂದೇ. ನೆಪೋಲಿಯನ್ನನ ಸೈನಿಕನೊಬ್ಬನು ತನಗಿದ್ದ ಸಾಲವನ್ನೆಲ್ಲಾ ಬರೆದು ಕೊನೆಯಲ್ಲಿ, ಓ ದೇವರೇ ಈ ಸಾಲವನ್ನು ತೀರಿಸುವವರು ಯಾರು ? ಎಂದು ಬರೆದು ಹಾಗೆ ನಿದ್ರೆ ಹೋದನಂತೆ. ತನಿಖೆಗೆಂದು ರಾತ್ರಿ ಗಸ್ತು ಹೊರಟಿದ್ದ ನೆಪೋಲಿಯನ್ ಚಕ್ರವರ್ತಿ ಆ ಸೈನಿಕನ ಶಿಬಿರದಲ್ಲಿ ದೀಪ ವಿದ್ದುದರಿಂದ ಒಳಗೆ ಹೋಗಿ ನಾನು ನೆಪೋಲಿಯನ್ ತೀರಿಸುತ್ತೇನೆ ಎಂದು ಬರೆದು ಹೋಗಿ ಆ ರೀತಿ ಸಾಲ ತೀರಿಸಿದನಂತೆ. ಅದರಂತೆ ಜನತೆಯೂ ಸಹ ಓ ಪರಮಾತ್ಮ ನಮ್ಮ ಕಷ್ಟಗಳನ್ನು ಪರಿಹರಿಸುವರಾರು ಎಂದು ಬರೆದಿಡಬೇಕಾಗಿದೆ. ನಾವು ಬಗೆಹರಿಸಬಲ್ಲೆವು ಎಂದು ಹೇಳುವವರು ಬೇಕಾಗಿದೆ. ನಮ್ಮ ಸರಕಾರ ಈ ಕಾರ್ಯ ಮಾಡಿದರೆ ಅಭಿನವ ನೇಪೋಲಿಯನ್ ಆಗುತ್ತದೆ, ಯೋಚಿಸಿ ನೋಡಿ ಎಂದು ವಿನಂತಿಸುತ್ತೇನೆ.

ಸಹಕಾರ ಸಂಸ್ಥೆಗಳಾಗಲೀ ಸರಕಾರಿ ಸಂಸ್ಥೆಗಳಾಗಲೀ ಆಹಾರ ಧಾನ್ಯ ವಿತರಣೆಯ ಬಗ್ಗೆ ಪ್ರಾಮಾಣಿಕತೆಗೆ ಬೆಲೆ ಕೊಟ್ಟರೆ ಮಾತ್ರ ಸರಿಯಾದ ವಿತರಣೆಯಾಗುತ್ತದೆ. ಇಲ್ಲವಾದಲ್ಲಿ ಒಂದುವರೆ ರೂಪಾಯಿಗೆ ಒಂದು ಸೇರು ಅಕ್ಕಿ ಮಾರುವ ಕಳ್ಳ ವ್ಯಾಪಾರಿಗಳು ಸಕ್ಕರೆ ಇದ್ದರೂ ಇಲ್ಲವೆಂದು ಹೇಳುವ ಸುಳ್ಳು ವ್ಯಾಪಾರಿಗಳು ಇವರ ಮೇಲೆ ದೂರು ಹೇಳಿದರೆ ಪಾಪ ಅವರು ಅಂತಹವರಲ್ಲ ಎಂದು ಹೇಳುವ ಲಂಚಕೋರ ಅಧಿಕಾರಿಗಳ ಆಡಳಿತದಲ್ಲಿ ಸರಕಾರದ ಪ್ರಯತ್ನವೆಲ್ಲಾ ಯದ್ವಾ ತದ್ವ ಆಗಿ ಬಿಡುತ್ತದೆ. ಕಾರಣ ಆಹಾರ ಒದಗಿಸಲು ಎಷ್ಟು ಪ್ರಯತ್ನ ನಡೆಯುವುದೋ ಅದಕ್ಕಿಂತಲೂ ಹೆಚ್ಚು ಪ್ರಯತ್ನ ವಿತರಣೆಗೆ ಇರಬೇಕೆಂದು ಸರಕಾರದವರು ಬಾಬು ತಪ್ಪದೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ. Assembly Members are only the interpreters of the people ಎಂದು ಒಬ್ಬ ರಾಜಕಾರಣಿ ಹೇಳಿದ್ದಾರೆ. ಪ್ರಯುಕ್ತ ಅಭಾವ ಪ್ರದೇಶಗಳ ನಿವಾರಣೆ ಬಗ್ಗೆ ಮತ್ತು ಆಹಾರ ಧಾನ್ಯಗಳ ಬೆಲೆ ಹತೋಟಿ ಹಂಚಿಕೆಗಳ ಬಗ್ಗೆ ಜನತೆಯ ಆಶೋತ್ತರಗಳನ್ನು ಹೃತ್ಪೂರ್ವಕ ಪ್ರಾಮಾಣಿಕತೆಯಿಂದ ಈಡೇರಿಸಿರೆಂದು ಸರಕಾರಕ್ಕೆ ವಿನಂತಿಸುತ್ತೇನೆ. ನ್ಯಾಯವಾದ ಬೆಲೆಗೆ ಧಾನ್ಯ ಪೂರೈಕೆ ಆಗಲೆನ್ನುವುದೀಗ ಜನತೆಯ ಬಯಕೆ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳು.

†ಶ್ರೀ ಗಂಗಾಧರ ನಾಮೋಷಿ.—ಸ್ವಾಮಿ, ಈ ಸರಕಾರದ ನೀತಿಯಿಂದಲೇ ಈ ಹೊತ್ತು ನಮ್ಮ ದೇಶದಲ್ಲಿ ಆಹಾರಧಾನ್ಯ ಮತ್ತು ಮನುಷ್ಯನಿಗೆ ಅವಶ್ಯಕವಾಗಿರುವ ಎಲ್ಲ ಪದಾರ್ಥಗಳ ಬೆಲೆಗಳು ಏರಿರುತ್ತವೆ. ಈ ವಿಚಾರ ಬಂದಾಗೆಲ್ಲ ಕೇಂದ್ರ ಸರಕಾರ ರಾಜ್ಯ ಸರಕಾರದ ಮೇಲೆ ಹೇಳುವುದು, ರಾಜ್ಯಸರಕಾರ ಕೇಂದ್ರ ಸರಕಾರದ ಮೇಲೆ ಜವಾಬ್ದಾರಿ ಹೊರಿಸುವುದು, ಹೀಗೆ ಮಾಡಿಕೊಂಡು ಕೊಡುತ್ತಿದ್ದಾರೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಇಂತಹ ಸಂದರ್ಭಗಳಲ್ಲಿ ಬೇರೆಯವರ ಮೇಲೆ ಹಾಕಿ ಪಾರಾಗಬೇಕೆಂದಿದ್ದರು. ಅದೇ ನೀತಿಯನ್ನು ಈಗ ನಮ್ಮ ಸರಕಾರದವರು ಅನುಸರಿಸುತ್ತಿದ್ದಾರೆ. ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಪ್ರಶ್ನೆ ಹಾಕಿದರೆ, ನಾವೇನು ಮಾಡೋಣ ಆಹಾರಧಾನ್ಯಗಳನ್ನು ರೈತರು ಒಳ್ಳೆಯ ರೀತಿಯಲ್ಲಿ ಬೆಳೆಯಬೇಕು, ನಾವೇನೂ ನೇರವಾಗಿ ಮಾಡುವಹಾಗಿಲ್ಲ, ರಾಜ್ಯಸರಕಾರ ಹೆಚ್ಚು ಬೆಳೆದು ತಂದರೆ ನಾವು ಸಹಾಯ ಮಾಡುತ್ತೇವೆ ಎಂದು ಹೇಳುತ್ತಾರೆ. ಹೆಚ್ಚು ಬೆಳೆಯುವುದಕ್ಕೆ ಬೇಕಾದಷ್ಟು ಸೌಲಭ್ಯ ಬೇಕು, ನೀರಾವರಿ ಹೆಚ್ಚು ಮಾಡಬೇಕು ಎಂದು ಕೇಳಿದರೆ ನಮ್ಮಲ್ಲಿ ಹಣವಿಲ್ಲ, ಕೇಂದ್ರ ಸರಕಾರದವರು ಕೊಟ್ಟರೆ ನಾವು ಏರ್ಪಾಡು ಮಾಡುತ್ತೇವೆ ಎಂದು ಹೇಳುತ್ತಾರೆ. ಏಕೆ ಹೀಗಾಗುತ್ತಿದೆ ಎಂದರೆ ಸರಕಾರಕ್ಕೆ ಒಂದು ಕಟ್ಟುನಿಟ್ಟಾದ ಧೋರಣೆಯಿಲ್ಲ. ಪರದೇಶಗಳಿಂದ ಬೇಕಾದಷ್ಟು ಹಣವನ್ನು ತಂದದ್ದರಿಂದ ಇನ್‌ಫ್ಲೇಷನ್ ಎಂದರೆ ಹಣದುಬ್ಬರ ಬಂದು ಈ ಪರಿಸ್ಥಿತಿ ಬಂದಿದೆ. ಇನ್‌ಫ್ಲೇಷನ್ ಬಂದು ಆಹಾರಧಾನ್ಯಗಳ ಬೆಲೆ ಸ್ಥಿಮಿತದಲ್ಲಿಲ್ಲ. ಇಷ್ಟೇ ಅಲ್ಲದೆ ಸರಕಾರದ ತೆರಿಗೆಯ ನೀತಿಯಿಂದಲೂ ಹೀಗಾಗುತ್ತಿದೆ. ಇದೊಂದು ವಿಷಚಕ್ರವಾಗಿದೆ. ಅನ್ನಧಾನ್ಯಗಳಮೇಲೆ ತೆರಿಗೆ ಹಾಕಿದರು, ಇದರಿಂದ ಬೆಲೆಗಳು ಹೆಚ್ಚಿ ಕಾರ್ಮಿಕರು ಹೆಚ್ಚು ತುಟ್ಟಿಭತ್ಯ ಕೇಳಿದರು. ಅನ್ನಧಾನ್ಯಗಳ ಬೆಲೆ ಹೆಚ್ಚಿದೆ, ನಮಗೆ ಹೆಚ್ಚು ತುಟ್ಟಿಭತ್ಯ ಕೊಡಬೇಕೆಂದು ಕೇಳಿದರು. ಅದನ್ನು ಕೊಟ್ಟಮೇಲೆ ಮಿಲ್ ಮಾಲೀಕರು ತಾವು ತಯಾರು ಮಾಡುವ ಪದಾರ್ಥಗಳ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದೆ ಎಂದು ಬಟ್ಟೆಬರೆಗಳ ಧಾರಣೆ ಹೆಚ್ಚಿಸಿದರು. ಆಮೇಲೆ ಬೇರೆ ಸರಕಾರಿ ನೌಕರರು ನಮಗೆ ತುಟ್ಟಿಭತ್ಯ ಬೇಕೆಂದು ಕೇಳಿದರ

(ಶ್ರೀ ಗಂಗಾಧರ ನಾಮೋಶಿ)

ಇದನ್ನು ಸರಿದೂಗಿಸುವುದಕ್ಕೆ ಸರಕಾರದ ಬಜೆಟ್‌ನಲ್ಲಿ ಮೂರು ಕೋಟಿ ರೂಪಾಯಿ ಕಡಮೆ ಬಿದ್ದಿದೆ ಎಂದು ಮತ್ತೆ ಒಂದು ಒಂದೂವರೆ ಕೋಟಿ ರೂಪಾಯಿ ತೆರಿಗೆ ಹಾಕುವುದು. ಹೀಗೆ ಕುಳ್ಳ ಎಣ್ಣೆ ಗಾಣದ ಮೇಲೆ ಕುಳಿತು ಒಂದೇ ಕಡೆ ಸುತ್ತುತ್ತಿರುವಂತಾಗಿದೆ. ಮಾರಾಟ ತೆರಿಗೆಯನ್ನು ಹಾಕುವುದರಲ್ಲಿ ಸೇಕಡ ಒಂದಿದ್ದುದನ್ನು ಎರಡರಷ್ಟು ಮಾಡುವುದು, ಸಿಂಗಲ್ ಪಾಯಿಂಟ್ ಇದ್ದುದನ್ನು ಮಲ್ಟಿ ಪಾಯಿಂಟ್ ಮಾಡುವುದು ಹೀಗಾಗಿ ಒಂದೊಂದು ಸಾರಿಯೂ ಬೆಲೆಗಳು ದಿನೆದಿನೇ ಏರುತ್ತಿವೆ. ತೆರಿಗೆ ಹಾಕಿದರೆ ಕೈಗಾರಿಕೆಗಳ ಮಾಲೀಕರು ತೆರಿಗೆ ಮತ್ತು ಅದರ ಮೇಲೆ ಲಾಭ ಎರಡರನ್ನೂ ಸೇರಿಸಿ ಬೆಲೆಗಳನ್ನು ಏರಿಸುತ್ತಾರೆ. ಉದಾಹರಣೆಗೆ ಸಿನೆಮಾಗಳ ಮೇಲೆ ತೆರಿಗೆ ಹಾಕಿದರು. ಇವರು ಎರಡಾಣೆ ಹಾಕಿದರೆ ಅವರು ಎರಡಾಣೆ ಮಾತ್ರ ಏರಿಸಲಿಲ್ಲ, ಇನ್ನೂ ಹೆಚ್ಚು ಮಾಡಿದರು. ಹೀಗಾಗಿ ಸರಕಾರದ ಧೋರಣೆಯಿಂದ ನಮಗೆ ತೊಂದರೆ ಬಂದಿದೆ. ದೇಶದಲ್ಲಿ ಬೇಕಾದಷ್ಟು ಹಣವಿದೆ, ದೇಶದಲ್ಲಿ ಬೇರೆ ಬೇರೆ ಕೆಲಸಗಳು ನಡೆಯುತ್ತಿವೆ, ಇದರಿಂದ ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಾಗಿದೆ ಎಂದು ಹೇಳಿದರು.

5-00 P.M.

ಸ್ವಾಮಿ, ಯಾರ ಹತ್ತಿರ ಇದೆ ಪರ್ಚೇಜಿಂಗ್ ಪವರ್? ಅಧಿಕಾರಿಗಳ ಹಾಗು ಮಂತ್ರಿಗಳ ಮನೆಯಲ್ಲಿರತಕ್ಕಂಥ ಪ್ಯೂನ್ಸ್ ಒಳ್ಳೇ ಬಟ್ಟೆ ಹಾಕಿಕೊಂಡು ಸಿನೀಮಾ ನೋಡಿಕೊಂಡು ಇರುವುದನ್ನು ನೋಡಿದರೆ ಅವರು ಚನ್ನಾಗಿ ಇದ್ದಾರೆಂದು ಅನಿಸಬಹುದು. ಡ್ರೈಕ್ಲೀನಿಂಗ್ ಮಾಡಿದ ಬಟ್ಟೆ ಹಾಕಬಹುದು ಆದರೆ ಊಟಕ್ಕೆ ಏನಿದೆ? ಭಾರತ ದೇಶದ ಹವಾಗುಣಕ್ಕೆ ಅನುಗುಣವಾಗಿ ಮನುಷ್ಯ ಜೀವನ ಮಾಡಬೇಕಾದರೆ ಹಾಲು ಬೆಣ್ಣೆ, ತುಪ್ಪ, ಅಕ್ಕಿ, ಬೇಳೆ, ತರಕಾರಿ, ಮುಂತಾದ ವಿಟ್ಯಾಮಿನ್ಸ್ ಎ, ಬಿ, ಸಿ, ಡಿ, ಉಳ್ಳ ಆಹಾರ ಯಾರಿಗೂ ಸಿಕ್ಕುವುದಿಲ್ಲ. ಸರಕಾರದ ಇಲಾಖಾ ಸೆಕ್ರೆಟರಿಗಳು ಕೂಡ ಸರಿಯಾಗಿ ಸತ್ವವುಳ್ಳ ಪದಾರ್ಥ ಆಹಾರ ಸೇವನೆ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಮಂತ್ರಿಗಳು ಮಾತ್ರ ಹೆಚ್ಚು ಆಹಾರ ತಿನ್ನುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಯಾಕೆಂದರೆ ಅವರು ಸಂಚಾರಕ್ಕೆ ಹೋದಾಗ್ಗೆ ಅವರಿಗೆ ಒಳ್ಳೇ ಪದಾರ್ಥಗಳನ್ನು ಕೊಟ್ಟು ಇನ್ನಿಷ್ಟು ತಿನ್ನಿರಿ ಇನ್ನಿಷ್ಟು ತಿನ್ನಿರಿ ಎಂದು ಬಲವಂತ ಮಾಡುವುದರಿಂದ ಅವರು ಆಹಾರ ಹೆಚ್ಚು ತಿಂದು ಅವರ ಹೊಟ್ಟೆ ಮಾತ್ರ ಮುಂದೆ ಬರುತ್ತಿದೆ. ಆದರೂ ಕೂಡ ಅವರು ಸೈಂಟಿಫಿಕ್ ಆಗಿ ಆಹಾರ ತಿನ್ನುವುದಿಲ್ಲ. ಶಾಸ್ತ್ರೀಯವಾಗಿ ತೆಗೆದುಕೊಳ್ಳಬೇಕಾದ ಆಹಾರ ಅನ್ನ ಎಷ್ಟು ಜನಕ್ಕೆ ನಮ್ಮ ದೇಶದಲ್ಲಿ ಸಿಕ್ಕುತ್ತದೆ? ಚಹಾ ಕುಡಿದು ಸಿಗರೇಟು ಸೇದಿಕೊಂಡು ಎಷ್ಟೋ ಜನ ಬದುಕಿರುತ್ತಾರೆ. ಎಷ್ಟೋ ಜನ ಹೋಟೆಲ್ ಊಟ ಮಾಡಿಕೊಂಡು ಇರುತ್ತಾರೆ. ದೇಶದಲ್ಲಿ ಜನರ ಕೈಯಲ್ಲಿ ಜಾಸ್ತಿ ದುಡ್ಡು ಇದೆ, ಇದಕ್ಕೆ ಉದಾಹರಣೆ ಎಂದರೆ ಸಿನೇಮಾ ಹೌಸಿನಲ್ಲಿ ಜನರು ಸಾಲು ಸಾಲಾಗಿ ಕ್ಯೂ ನಿಂತು ಟಿಕೆಟ್ ಕೊಂಡು ಕೊಳ್ಳುತ್ತಾರೆ. ಆದುದರಿಂದ ಜನರ ಪರ್ಚೇಜಿಂಗ್ ಪಾವರ್ ಹೆಚ್ಚು ಆಗಿದೆ ಎಂದು ಕೆಲವರು ಹೇಳಬಹುದು. ಈ ಬಗ್ಗೆ ಒಂದು ಮಾತು ಕೇಳುತ್ತೇನೆ. ಹಳ್ಳಿಗಾಡಿನ ಜನರ ಸಲುವಾಗಿ ಬಡ ಜನರ ಸಲುವಾಗಿ ನಿಮಗೆ ಬಹಳ ಪ್ರೇಮ ಇದೆ ಎಂದು ಹೇಳುತ್ತೀರಿ. ಇಲ್ಲಿಯ ಕೆಳದರ್ಜೆಯ ನೌಕರರ ಡೀ. ಎ. ಐದು ರೂಪಾಯಿ ಹೆಚ್ಚು ಮಾಡಿದಿರಿ. ಆದರೆ ಹಳ್ಳಿಗಾಡಿನಲ್ಲಿ ಬಡವರು ಹೇಗೆ ಇದ್ದಾರೆ ನೋಡಿದ್ದೀರಾ? ಹಳ್ಳಿಗಾಡಿನ ಕಡೆ ಮಳೆಯಾಗಿಲ್ಲ. ಹೋದ ಸಲ ಕೂಡ ಮಳೆಯಾಗ ಲಿಲ್ಲ. ಈ ವರ್ಷ ಸಹ ಮಳೆಯಾಗಿಲ್ಲ ಲ್ಯಾಂಡ್‌ಲೆಸ್ಸ್ ಲೇಬರರ್ಸ್-ಅನ್ ಎಂಪ್ಲಾಯ್‌ಮೆಂಟ್ ಭೂತಾಕಾರವಾಗಿ ಬೆಳೆದಿದೆ. ಅವರಿಗೆ ಕೆಲಸವಿಲ್ಲ, ತಿನ್ನುವುದಕ್ಕೆ ಆಹಾರವಿಲ್ಲ. ಅವರ ಸಲುವಾಗಿ ಸರಕಾರ ಏನು ಮಾಡಿದೆ? ಸಿಟಿಯಲ್ಲಿ ಅಷ್ಟೇ ಜನರಿಗೆ ಪರ್ಚೇಜಿಂಗ್ ಪಾವರ್ ಇರಬಹುದು. ದೊಡ್ಡ ದೊಡ್ಡ ಯೋಜನೆಗಳಲ್ಲಿ ಕೆಲಸ ಮಾಡುವವರಿಗೆ, ಮಿಲಿಟರಿ ಸೆಂಟರ್ಸ್‌ಗಳಲ್ಲಿ ಕೆಲಸ ಮಾಡುವವರಿಗೆ ಕೆಲಸ ಸಿಕ್ಕಬಹುದು. ಆದರೆ ಹಳ್ಳಿಗಳಲ್ಲಿ ಜನರಿಗೆ ಏನು ಕೆಲಸ ಇದೆ? ಹಳ್ಳಿಗಳಲ್ಲಿ ಇರತಕ್ಕ ಜನರಿಗೆ ಕೆಲಸ ಕೊಡಿಸುವುದರ ಸಲುವಾಗಿ ಏನು ಮಾಡುತ್ತೀರಿ? ದಿನ ದಿನಕ್ಕೆ ಹೆಚ್ಚೆಚ್ಚು ಆಹಾರ ಧಾನ್ಯಗಳ ಬೆಲೆ ಮೇಲೆ ಏರುತ್ತಿದೆ. ಈ ಧಾರಣೆ ಕೊಟ್ಟು ಜನ ಹೇಗೆ ಜೀವಂತ ಇರುತ್ತಾರೆ ಎಂಬುದನ್ನು ನೀವು ವಿಚಾರ ಮಾಡಿದ್ದೀರಾ? ರಾಜ್ಯದ ಮಂತ್ರಿಗಳು ಮುಖ್ಯ ಮಂತ್ರಿಗಳು ಕೇಂದ್ರ ಸರಕಾರದ ಮಂತ್ರಿಗಳು ಸೇರಿ ಕಾನ್‌ಫರನ್ಸ್ ಮಾಡಿ ರಾಜ್ಯದಲ್ಲಿಯ ಆಹಾರ ಧಾನ್ಯಗಳ ವ್ಯಾಪಾರವನ್ನು ಸರಕಾರವೇ ತೆಗೆದುಕೊಂಡು ಅದಕ್ಕೆ ನಿಯಂತ್ರಣ ಹಾಕಿ ಒಳ್ಳೇ ರೀತಿಯಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ ಎಂದು ಹೇಳಿರುವುದು ಪೇಪರಿನಲ್ಲಿ ನಡೆದಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಒಳ್ಳೆಯ ಹೃದಯವುಳ್ಳವರು. ಯಾರಾದರೂ ಮುಂದೆ ಬಂದು ಹೇಳಿದರೆ ಆಗಲಿ ಎಂದು ಹೇಳುತ್ತಾರೆ ಅವರು ಬಹಳ ಒಳ್ಳೆಯವರು. ಆದರೆ ದೇಶದಲ್ಲಿ ಆಹಾರ ಧಾನ್ಯಗಳ ವ್ಯಾಪಾರ

ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಇದುವರೆಗೆ ನಮ್ಮ ದೇಶದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಜಾರಿಗೆ ಬಂತು. ಪ್ರಿವೆಂಟಿವ್ ಡಿಟೆನ್‌ಶನ್ ಆಕ್ಟ್ ಬಂತು ಅನೇಕ ಕಾನೂನುಗಳು ಬಂದಿವೆ. ಆದರೆ ಕಾಳಾ ಬಾಜಾರ ಮಾಡುವವರನ್ನು ಜೇಲಿಗೆ ಕಳಿಸಲಿಲ್ಲ. ದೊಡ್ಡ ದೊಡ್ಡ ಕ್ಯಾಪಿಟ್ಯಾಲಿಸ್ಟರನ್ನು ಕಳ್ಳಸಂತೆ ವ್ಯಾಪಾರ ಮಾಡಿದರೂ ಕೂಡ ಅಂಥವರನ್ನು ಜೇಲಿಗೆ ಕಳಿಸಲಿಲ್ಲ. ಇವರು ಅವರಿಗೆ ಬರೀ ವಿನಂತಿ ಮಾಡುತ್ತಾರೆ. ವಿನಂತಿ ಮಾಡಿಕೊಂಡರೆ ಏನು ಉಪಯೋಗವಾಗುತ್ತದೆ ? ಇಲೆಕ್ಷನ್ ಬಂದರೆ ಅಂಥವರು ಇವರಿಗೆ ಐವತ್ತು ಸಾವಿರ ರೂಪಾಯಿ ಇಪ್ಪತ್ತು ಸಾವಿರ ರೂಪಾಯಿ ಚೆಕ್ ಕೊಡುತ್ತಾರೆ. ಇವರಿಗೆ ಅವರಿಂದಲೇ ಧನ ಸಹಾಯ ದೊರೆಯುತ್ತಿದೆ. ಕಳ್ಳಸಂತೆ ಮಾಡುವವರೇ ಇವರ ಸುತ್ತುಮುತ್ತಲೂ ಇರುತ್ತಾರೆ. ಅನ್ನಧಾನ್ಯದ ವಿಚಾರದಲ್ಲಿ ಸರಕಾರ ಸ್ಟೇಟ್ ಟ್ರೇಡಿಂಗ್ ಸರಿಯಾಗಿ ನಡಿಸುವುದಿಲ್ಲ. ದರಗಳನ್ನು ಹತೋಟಿಗೆ ತರುವುದು ಸಾಧ್ಯವಿಲ್ಲ. ಗೋಧಿ ಕೊಡುವ ಕಡೆ ಅಕ್ಕಿ ಕೊಡುತ್ತಾರೆ. ಅಕ್ಕಿ ಕೊಡಬೇಕಾದ ಕಡೆ ಗೋಧಿ ಕೊಡುತ್ತಾರೆ. ಈ ಆಹಾರ ಧಾನ್ಯ ಹಂಚುವುದನ್ನು ಕೋ ಅಪರೇಟಿವ್ ಸೊಸೈಟಿಗಳಿಗೆ ವಹಿಸಿಕೊಡುತ್ತಾರೆಂದು ಹೇಳುತ್ತಾರೆ. ಈಗಾಗಲೇ ಕೋ ಅಪರೇಟಿವ್ ಸೊಸೈಟಿಗಳಲ್ಲಿ ಎಷ್ಟೋ ಗದ್ದಲ ಇದೆ. ಮಹಾತ್ಮಾ ಗಾಂಧಿಯವರ ಹೆಸರನ್ನೇ ಹೇಳಿಕೊಂಡು ಇರುವ ಖಾದಿ ಬೋರ್ಡಿನಲ್ಲಿ ಗದ್ದಲ ಎದ್ದಿವೆ. ಅಲ್ಲಿಯೇ ಈ ರೀತಿಯಾದರೆ ಇನ್ನು ಬೇರೆ ಸೊಸೈಟಿಗಳಲ್ಲಿ ಏನು ನಡೆದಿರಬಹುದು ಎಂಬುದನ್ನು ಯೋಚನೆ ಮಾಡಬೇಕು. ಕೊಟ್ಟಣದ ಅಕ್ಕಿ ಎಂದು ಹೇಳಿ ಮಿಶಿನ್‌ನಲ್ಲಿ ತಯಾರ್ಮಾಡಿದ ಅಕ್ಕಿ ಕೊಟ್ಟು ಅನ್ಯಾಯ ಮಾಡುವ ಅನೇಕ ಕೋ ಅಪರೇಟಿವ್ ಸೊಸೈಟಿಗಳಿವೆ. ಸಕ್ಕರೆ ಹಂಚಿಕೆಯಲ್ಲಿ ಸಹ ಅನ್ಯಾಯವಾಗುತ್ತಿದೆ. ಅವರ ಗುಂಪಿನಲ್ಲಿರುವ ಕಾಂಗ್ರೆಸ್ಸಿನವರೇ ಇಂಥ ಅನೇಕ ಪ್ರಶ್ನೆಗಳನ್ನು ಸರಕಾರದ ವಿರುದ್ಧ ಕೇಳುತ್ತಾರೆ. ಆದುದರಿಂದ 100ಕ್ಕೆ 99 ಸೊಸೈಟಿಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಎಲ್ಲಿಯೋ ಒಂದು ಸೊಸೈಟಿ ಸರಿಯಾಗಿ ನಡೆದಿರಬಹುದು. ಕಣ್ಣಲ್ಲಿ ಮಣ್ಣು ಹಾಕುವ ಕೆಲಸ ಮಾತ್ರ ನಡೆದಿದೆ. ಆದುದರಿಂದ ಆಹಾರ ಧಾನ್ಯಗಳ ಪರಿಸ್ಥಿತಿ ಹತೋಟಿಗೆ ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ದೇಶದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ. ಇಂಡಸ್ಟ್ರಿಯಲ್ ವರ್ಕರ್ಸ್ ಸಂಪು ಮಾಡಬಹುದು. ಎನ್ ಜಿ ಒಜ್ ಮೂರನೇ ನಾಲ್ಕನೇ ದರ್ಜೆಯ ಕೆಳ ದರ್ಜೆಯ ಸರಕಾರೀ ನವಕರರಲ್ಲಿ ಸಹ ಅನ್ ರೆಸ್ಟ್ ಉಂಟಾಗಿ ಸಂಪು ಮಾಡಬಹುದು. ಸರಕಾರದ ವ್ಯವಸ್ಥೆ ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಬೇಕಾಗುತ್ತದೆ. ದೇಶದಲ್ಲಿ ಪರಿಸ್ಥಿತಿ ಭೀಕರವಾಗುತ್ತದೆ. ಇಲ್ಲಿಯ ಮಾನ್ಯ ಸದಸ್ಯರಿಗೆ ಮೂರು ಗಂಟೆ ಅಸೆಂಬ್ಲಿಗೆ ಬಂದರೆ ಒಂದು ದಿನಕ್ಕೆ 16 ರೂಪಾಯಿ ಭತ್ಯ ದೊರೆಯುತ್ತದೆ. ಮುಂಜಾನೆಯಿಂದ ಸಂಜೆಯವರೆಗೆ ಕೆಲಸ ಮಾಡುವ ಕೂಲಿಕಾರನಿಗೆ ಏನೂ ಇಲ್ಲಾ ಅದು ಏಕೆ ಎಂದು ಕೇಳುತ್ತಾರೆ. ಪಾರ್ಲಿಮೆಂಟ್ ಸದಸ್ಯರು ಸಂಬಳ ಜಾಸ್ತಿ ಮಾಡಿಕೊಂಡರು, ಡಿ ಎ ಜಾಸ್ತಿ ಮಾಡಿಕೊಂಡರು, ನಮಗೆ 5—10 ರೂಪಾಯಿ ಆದರೂ ಕೊಡಿ ಎಂದು ಕೆಳದರ್ಜೆಯ ಸರಕಾರಿ ನೌಕರರು ಕೇಳುತ್ತಾರೆ. ನಮಗೂ ಏನಾದರೂ ಅನುಕೂಲ ಮಾಡಿಕೊಡಿ ತುಟ್ಟಿ ಭತ್ಯ ಕೊಡಿ ಎಂದು ಅವರು ಕೇಳುತ್ತಾರೆ. ತುಟ್ಟಿ ಭತ್ಯ ಹೆಚ್ಚು ಕೊಡುವುದಕ್ಕೆ ಜನತೆಯ ಮೇಲೆ ಟ್ಯಾಕ್ಸ್ ಹಾಕಬೇಕಾಗುತ್ತದೆ. ಇಂಥ ಒಂದು ವೀಶಸ್ ಸರ್ಕಲ್ ಅಂದರೆ ಒಂದು ವಿಷಚಕ್ರ ಉಂಟಾಗುತ್ತದೆ. ಇಂಥಾದ್ದಕ್ಕೆ ಅವಕಾಶ ಕೊಡದೆ ಸ್ಟೇಟ್ ಟ್ರೇಡಿಂಕ್ ಕಾರ್ಪೋರೇಶನ್ ನಡೆಸಿ ಒಳ್ಳೇ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಮನುಷ್ಯನಿಗೆ ಅವಶ್ಯಕವಾಗಿರತಕ್ಕಂಥ ಇಸೆನ್ಸಿಯಲ್ ಫುಡ್‌ಗ್ರೇನ್ಸ್ ಮೇಲೆ ಟ್ಯಾಕ್ಸ್ ಹಾಕಬಾರದು. ಎಷ್ಟು ಹೇಳಿದರೂ ಕೇಳಲಿಲ್ಲ. ಜತ್ತಿಯವರು ಹಾಗೆ ಮಾಡಿದರು, ಮುಖ್ಯ ಮಂತ್ರಿಗಳು ಹೀಗೆ ಮಾಡಿದರು ಶ್ರೀ ಆರ್ ಎಂ ಪಾಟೀಲರವರು ಮೋಟಾರ್ ವೇಹಿಕಲ್ಸ್ ಆಕ್ಟ್ ತಂದರು. ಇದರ ಪರಿಣಾಮ ಏನಾಗಿದೆ ಎಂದರೆ ರೈಲ್ವೆಯಿಂದ ಹೋಗತಕ್ಕ ಸಾಮಾನಿನ ನಾಲ್ಕರಷ್ಟು ಸಾಮಾನು ಮೋಟಾರಿನಿಂದ ಹೋಗುತ್ತಿದೆ. ಇದು ನನಗೆ ಚನ್ನಾಗಿ ಗೊತ್ತಿದೆ. ದೊಡ್ಡ ದೊಡ್ಡ ಟ್ರಾನ್ಸ್‌ಪೋರ್ಟ್ ಕಂಪನಿಗಳಿವೆ. ಟ್ರೇನಿನಿಂದ ಮಾಲು ಕಳಿಸುವುದಿಲ್ಲ ಯಾಕೆಂದರೆ ತಡವಾಗುತ್ತದೆ. ತಡವಾಗಬಾರದೆಂದು ಮೋಟಾರಿನಿಂದ ಮಾಲು ಕಳಿಸುತ್ತಾರೆ. ಈಗ ಟ್ರಾನ್ಸ್‌ಪೋರ್ಟೇಶನ್ ಮೇಲೆ ಹೇವಿ ಟ್ಯಾಕ್ಸೇಶನ್ ಹಾಕಿದ್ದೀರಿ. ಆದುದರಿಂದಲೇ ಬೆಂಗಳೂರು ನಗರಕ್ಕೆ ನಮ್ಮ ಪ್ರದೇಶದಿಂದ ತೊಗರಿಬೇಳೆ ಬರುವುದಿಲ್ಲ. ಯಾಕೆಂದರೆ ತೊಗರಿಬೇಳೆ ಗುಲ್‌ಬರ್ಗಾದಿಂದ ಸುಮಾರು 450 ಮೈಲಿ ಮೋಟಾರಿನಲ್ಲಿ ಬರಬೇಕಾಗುತ್ತದೆ. ಒಂದು ಚೀಲಕ್ಕೆ ನಾಲ್ಕೈದು ರೂಪಾಯಿ ಚಾರ್ಜ್ ಆಗುತ್ತದೆ. ಇದಲ್ಲದೆ ಹೆಚ್ಚು ಟ್ಯಾಕ್ಸ್ ಕೊಡಬೇಕು. ಟ್ಯಾಕ್ಸೇಶನ್ ಪಾಲಿಸಿ ಸೆಂಟರಿನಲ್ಲಿಯೂ ಸ್ಟೇಟಿನಲ್ಲಿಯೂ ಈ ತರಹ ನಡೆಯುತ್ತಿದೆ. ಇದಲ್ಲದೆ ಬ್ಯಾಂಕುಗಳು ಅನ್ನ ಧಾನ್ಯದ ಮೇಲೆ ಅಡ್ವಾನ್ಸ್ ಹಣ ಕೊಡಬಾರದು ಎಂದಿದೆ. ಆದರೆ ಕೆಲವು ಷೆಡ್ಯೂಲ್ ಬ್ಯಾಂಕುಗಳು ಎಳ್ಳು ಇದೆಯೆಂದು ಹೇಳಿ ಒಳಗೆ ಜೋಳವಿದ್ದರೂ ಕೂಡ ಹಣ ಕೊಡುತ್ತಿದ್ದಾರೆ. ಇದನ್ನು ಯಾರು ಹೇಗೆ ಚೆಕ್ ಮಾಡುತ್ತಾರೆ ? ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಶನ್ ಸರಕಾರ ಮಾಡುವುದಕ್ಕೆ ತಯಾರ

(ಶ್ರೀ ಗಂಗಾಧರ ನಮೋಶಿ)

ಇದ್ದರೆ ನಾನು ಕೆಲವು ಕಡೆ ಇದನ್ನು ತೋರಿಸುತ್ತೇನೆ. ಎಲ್ಲಿಯವರೆಗೆ ಷೆಡ್ಯೂಲ್ ಬ್ಯಾಂಕ್ಸ್ ನ್ಯಾಷನಲೈಜ್ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ವ್ಯಾಪಾರ ಈ ತರಹ ನಡೆಯುತ್ತದೆ. ಪರಿಸ್ಥಿತಿ ಸರಿಯಾಗಿ ಇಲ್ಲವಿದ್ದರೆ ತೊಂದರೆಯಾಗುತ್ತದೆ.

ಇನ್ನು ಜೋಳದ ಬಗ್ಗೆ ಹೇಳುವುದಾದರೆ ಜೋಳ ನಮ್ಮ ಭಾಗದಲ್ಲಿ ಬೆಳೆಯುತ್ತದೆ. ಮಹಾರಾಷ್ಟ್ರ ಹಾಗೂ ಆಂಧ್ರ ರಾಜ್ಯಗಳ ಸ್ವಲ್ಪ ಭಾಗ ಮತ್ತು ಕರ್ನಾಟಕದಲ್ಲಿ ಜೋಳ ಬೆಳೆಯುತ್ತದೆ. ಆದರೆ ಇಂದು ನಮ್ಮ ಜನರಿಗೆ ತಿನ್ನುವುದಕ್ಕೆ ಜೋಳ ಇಲ್ಲಾ. ಏನು ಮಾಡುವುದು? ನಮ್ಮ ದುರ್ದೈವದ ಸಂಗತಿ ಎಂದರೆ 35 ರೂಪಾಯಿಗೆ ಒಂದು ಚೀಲ ಜೋಳ ಮಾರುತ್ತಿದ್ದರು. ಈಗ ಅದರ ಬೆಲೆ 60 ರೂಪಾಯಿ ಆಗಿದೆ. ಈಗ ಬೆಲೆ ಕಡಿಮೆ ಹೇಗೆ ಆಗುವುದು? ಕಟ್ಟು ನಿಟ್ಟಾದ ಒಂದು ಪಾಲಿಸಿ ಇಲ್ಲಾ. ಮಹಾರಾಷ್ಟ್ರ ಸರಕಾರ ತನ್ನ ರಾಜ್ಯದಿಂದ ಧಾನ್ಯ ಹೊರಗೆ ಹೋಗುವುದಕ್ಕೆ ಕೊಡುವುದಿಲ್ಲ. ಕಾನೂನು ರೀತ್ಯಾ ಪರ್ಮಿಶನ್ ಕೊಡದೇ ಇದ್ದರೂ ಕೂಡ ಕೇಂದ್ರ ಸರಕಾರಕ್ಕೆ ರಿಕ್ವೆಸ್ಟ್ ಮಾಡಿಕೊಂಡು ತಡೆಗಟ್ಟಿದ್ದಾರೆ. ನಮ್ಮಲ್ಲಿ ಜೋಳದ ಬೆಲೆ ಒಂದು ಚೀಲಕ್ಕೆ 65 ರೂಪಾಯಿ ಇದ್ದುದು ನಾಲ್ಕು ಲಾರಿ ಲೋಡ್ ಜೋಳ ತೆಗೆದುಕೊಂಡು ಬಂದರೆ ಮರುದಿನವೇ ಬೆಲೆ 54 ರೂಪಾಯಿಗೆ ಇಳಿಯುತ್ತದೆ. 64 ರೂಪಾಯಿಗಳು ಆದ ಘಳಿಗ್ಗೆ, ಅವರು ಕೆಲವು ಲೀಡರುಗಳು ಹತ್ತಿರ ಹೋದರು. ಅವರು ಅದಕ್ಕೆ ಕಾನೂನಿಲ್ಲ, ಡೆಪ್ಯುಟಿ ಕಮಿಷನರಿಗೆ ನೋಟೀಸು ಕೊಡುತ್ತೇವೆಂದು ಬೆದರಿಸಿ ಅಂತ ಹೇಳಿದರು. ಡೆಪ್ಯುಟಿ ಕಮಿಷನರು ಎಲ್ಲಿ ನೋಟೀಸು ಕೊಡುತ್ತಾರೋ ಎಂದು ಕ್ರಮ ತೆಗೆದುಕೊಳ್ಳಲಿಲ್ಲ. ಇದರಿಂದ ಪೋಲೀಸಿನವರೂ ಡಿಮೊರಾಲೈಸ್ ಆದರು. ಅವರು ಒಳಗಿಂದೊಳಗೆ ನಾಲ್ಕು ರೂಪಾಯಿ ಕಿಸೆಯೊಳಗೆ ಹಾಕಿಕೊಂಡರು. ಒಕ್ಕಲಿಗೂ ಇದರಿಂದ ಲಾಭವಿಲ್ಲ. ಇದು ಸೆಂಟ್ರಲ್ ಸಬ್ಜೆಕ್ಟ್ ಅಲ್ಲ, ಇದು ಸ್ಟೇಟ್ ಸಬ್‌ಜೆಕ್ಟು. ಜೋಳ ಪರದೇಶದಿಂದ ತರುವುದಕ್ಕೆ ಸಾಧ್ಯವಿಲ್ಲ. ಬೇರೆ ಪ್ರಾಂತ್ಯದಿಂದ ತರುವುದಕ್ಕೆ ಸಾಧ್ಯ. ಈ ಕಾರಣದಿಂದ ಜೋಳದ ವ್ಯವಹಾರದಲ್ಲಿ ಮಾತ್ರ ಮಾನ್ಯ ನಮ್ಮ ಅನ್ನದಾತ ಮಂತ್ರಿಗಳು ದೆಹಲಿಯಲ್ಲಿ ಹೆಚ್ಚಿಗೆ ಪ್ರಭಾವ ಬೀರಿ, ಜೋಳವನ್ನು ಹಾರ್ವೆಸ್ಟ್ ಸೀಸನ್‌ನಲ್ಲಿ ಪರ್ಚೇಸ್ ಮಾಡಿ ಸ್ಟಾಕ್ ಮಾಡಿ. ಸೀಸನ್ನಿನಲ್ಲಿ 10-12 ರೂಪಾಯಿ ಡಿಫರೆನ್ಸ್ ಆಗುತ್ತದೆ. ಈವಾಗಂತೂ 20-25 ರೂಪಾಯಿ ಡಿಫರೆನ್ಸ್ ಆಗುತ್ತದೆ. ಸರಕಾರ ವ್ಯವಹಾರ ಮಾಡಿ, no loss, no profit basis ಮೇಲೆ ಜೋಳ ಸ್ಟಾಕ್ ಮಾಡಬೇಕು. ಗುಲ್ಬರ್ಗದಲ್ಲಿ ಜೋಳದ ಧಾರಣೆ ಜಾಸ್ತಿಯಾಗಿರುವುದಲ್ಲದೆ, ಅಲ್ಲಿ ಯಾವ ಇಂಡಸ್ಟ್ರಿಯೂ ಇಲ್ಲ. ಮೊದಲು ಇದ್ದವು ಮಾತ್ರ ಇದೆ. ಜನಗಳಿಗೆ ಬೇರೆ ಎಂಪ್ಲಾಯಿಮೆಂಟಿಗೆ ಅವಕಾಶವಿಲ್ಲ. ಅಲ್ಲಿ ಯಾವ ತರಹ ಇರಿಗೇಷನ್ ಫೆಸಿಲಿಟಿಯೂ ಇಲ್ಲ ಅಲ್ಲಿ ಪಾಪ್ಯುಲೇಷನ್ ಬೆಳೆಯುತ್ತಾ ಇದೆ; ಅಲ್ಲಿ ಏನು ಕಡಿಮೆ ಇಲ್ಲವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಆ ಜಿಲ್ಲೆಗೆ ಅಕ್ಕಿ ಕೊಟ್ಟಿಲ್ಲ, ಗೋಧಿ ಕೊಡುತ್ತೇವೆಂದು ಹೇಳುತ್ತಾರೆ. ನಮ್ಮಲ್ಲಿ ಹೈದರಾಬಾದಿನ ಗಾದೆ ಮಾತು ಉಂಟು. 1901ರಲ್ಲಿ ದುಷ್ಕಾಲ ಬಿತ್ತಂತೆ. ನಮ್ಮ ನೈಸಾಮ್ ಪಾಶಾ ಹತ್ತಿರ ಹೋದರೆ, ಅವರು ಹೇಳಿದರು: ನಮ್ಮಲ್ಲಿ ಜೋಳ ಇಲ್ಲ, ಘೀ, ಖಿಚಡಿ ಖಾವ್ ಅಂತ. ಅಂದರೆ ಅನ್ನ, ತುಪ್ಪ ತಿನ್ನಿ ಅಂತ ಹೇಳಿದರು.

ಶ್ರೀ ಎಂ. ವಿ. ಕೃಷ್ಣಪ್ಪ.—ಜೋಳ ರೂಪಾಯಿಗೆ 1¼ ಸೇರು ಕೂಡ ಮಾರುತ್ತಾ ಇಲ್ಲ. ಗೋಧಿ ರೂಪಾಯಿಗೆ 2¼ ಸೇರು ಮಾರುತ್ತಾರೆ. ತಾವು ಹೇಳುವ ಗಾದೆ it is quite the opposite; ಅದಕ್ಕೂ ಇದಕ್ಕೂ ತದ್ವಿರುದ್ಧ.

ಶ್ರೀ ಗಂಗಾಧರ ನಮೋಶಿ.—ಗೋಧಿ ತಿನ್ನಿ ಅಂತ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನಮಗೆ ಅಕ್ಕಿ, ರಾಗಿ ಕೊಡಿ ಜೋಳದಲ್ಲಿ ಚಪಾತಿ ಮಾಡಬೇಕಾದರೆ ಎಣ್ಣೆ, ತುಪ್ಪ ಬೇಕು. ಎಣ್ಣೆ ಧಾರಣೆ ಎಷ್ಟು ತುಟ್ಟಿಯಾಗಿವೆ ಎಂದು ಎಲ್ಲರಿಗೂ ಗೊತ್ತಿದೆ. ಹಿಟ್ಟು ಹಚ್ಚಿ ಅದನ್ನು ಮಂತ್ರಿಗಳು ಹೇಳುವಂತೆ ಮಾಡಲಿಕ್ಕಾಗುವುದಿಲ್ಲ. ತುಪ್ಪ ಅಥವ ಎಣ್ಣೆ ಇಲ್ಲದೆ ಮಾಡುವುದಕ್ಕೆ ಬರುವುದಿಲ್ಲ. ಅಕ್ಕಿ ಬೆಳಗಾಂ, ಬಿಜಾಪುರದವರಿಗೆ ಕೊಡುತ್ತೀರ. ಅಕ್ಕಿ ನಮಗೂ ಏಕೆ ಕೊಡಬಾರದು? ನಮಗೂ ಕೊಡಿ. ಬೇಗನೆ ಅಕ್ಕಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇಲ್ಲಿ ಈಗ ಅಗ್ರಿಕಲ್‌ಚರಲ್ ಮಿನಿಸ್ಟರ್ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಅಗ್ರಿಕಲ್‌ಚರಲ್ ಮಿನಿಸ್ಟರು ಈ ಕಾಲದಲ್ಲಿ ಅಗ್ರಿಕಲ್‌ಚರ್ ಬಗ್ಗೆ ಮುತುವರ್ಜಿ ವಹಿಸಬೇಕು. ಅಮೇರಿಕದಲ್ಲಿ ಶೇಕಡ 20ರಷ್ಟು ಜನ ವ್ಯವಸಾಯದಲ್ಲಿ ತೊಡಗಿ ಅಲ್ಲಿ ಹೇರಳವಾಗಿ ಬೆಳೆದು ಹೊರಗೂ ಕಳುಹಿಸುತ್ತಾರೆ. ನಮ್ಮಲ್ಲಿ 85 ಪರ್ಸೆಂಟ್ ಜನರು ಅಗ್ರಿಕಲ್‌ಚರಿಸ್ಟರಿದ್ದು ಇಲ್ಲಿ ಜನರಿಗೆ ಆಹಾರದ ಕೊರತೆ ಇದೆ. ಅಲ್ಲಿ ಮೆಶಿನರಿಯನ್ನು ಉಪಯೋಗಿಸಿ ಅಧಿಕವಾಗಿ ಬೆಳೆಯುತ್ತಾರೆಂದು ನೀವು ಹೇಳಬಹುದು. ಇಲ್ಲಿ ಜನ ಮೆಶಿನರಿ ಉಪಯೋಗಿಸುವುದಿಲ್ಲವೆನ್ನಬಹುದು. ಆದರೆ ಮೊಟ್ಟಮೊದಲು ನಿಮ್ಮ ಕಡೆ ತಪ್ಪು ಆಗಿದೆ ಎಂದು ಒಪ್ಪಿಕೊಳ್ಳಿ. ಒಂದು ಉದಾಹರಣೆ ಹೇಳಬೇಕಾದರೆ ಒಂದು ಸರ್ತಿ ನಮ್ಮಲ್ಲಿ ತೊಗರಿ

ಬೆಳೆಗೆ ಹುಳುಬಿತ್ತು, ತೊಗರಿಕಾಯಿಗೆ, ಮತ್ತು ಬೀಜಕ್ಕೆ ಬಿದ್ದ ಹುಳಕ್ಕೆ ಹೊಡೆಯುವ ಸಲುವಾಗಿ ಡಿ.ಡಿ.ಟಿ. ಇಲಾಖೆಯಿಂದ ತೆಗೆದುಕೊಂಡರೆ, ಆ ಡಿ.ಡಿ.ಟಿ.ಯಲ್ಲಿ ಸುಣ್ಣ ಮಿಕ್ಸ್ ಮಾಡಿ ಬಿಟ್ಟಿದ್ದರು. ಅದನ್ನು ಒಯ್ದು ಹೊಡೆದರೆ ಬೆಳೆ ಸುಟ್ಟುಹೋಯಿತು. ಬಾಕಿಯವರು ಬಜಾರಿನಿಂದ ಡಿ.ಡಿ.ಟಿ. ತಂದು ಹೊಡೆದರು. ನಾರ್ಮಲ್ ಬೆಳೆ ಬಂದಾಗ 6-7 ಚೀಲ ಬರುತ್ತಿತ್ತು, ಅಂಥ ಕಡೆ 32 ಚೀಲ ಬೆಳೆ ಬೆಳೆದಿದ್ದಾರೆ. ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನವರು, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು, ಬಿ.ಡಿ. ಓಗಳು, ಡೆಪ್ಯುಟಿ ಬಿ.ಡಿ.ಓ.ಗಳು, ಅಗ್ರಿಕಲ್‌ಚರ್ ಆಸಿಸ್ಟೆಂಟುಗಳು ಬೆಳೆ ನಾಶವಾಗದ ಹಾಗೆ ತಮ್ಮ ಲಕ್ಷ್ಯವನ್ನು ಕೊಡಬೇಕು. ಇಲ್ಲದಿದ್ದರೆ 85 ಪರ್ಸೆಂಟ್ ಅಗ್ರಿಕಲ್ಚರಿಸ್ಟ್‌ಗಳು ಇರುವ ಈ ದೇಶದಲ್ಲಿ ದೇಶದ ಜನರಿಗೆ ಆಗುವಷ್ಟು ಅನ್ನ ಉತ್ಪತ್ತಿಯಾಗುವುದಿಲ್ಲವೆಂದರೆ ನಾಚಿಕೆಗೇಡು ಸ್ವಾತಂತ್ರ್ಯ ಬಂದ 17 ವರ್ಷಗಳ ನಂತರವೂ ಸ್ವಯಂಪೂರ್ಣತೆ ಆಹಾರದಲ್ಲಿ ಬಂದಿಲ್ಲವೆಂದರೆ, ಸರಕಾರದವರು ಸರಿಯಾಗಿ, ದಕ್ಷತೆಯಿಂದ ಕೆಲಸ ನಡೆಸುತ್ತಿಲ್ಲವೆಂದು ನಿಮ್ಮ ಮೇಲೆ ಆಪಾದನೆ ಕೊಡುತ್ತೇನೆ. ಈ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ನೌಕರುಗಳು ಎಂ. ಎಲ್. ಎ.ಗಳಲ್ಲಿ ಹಿಡಿದುಕೊಂಡು, ತಮ್ಮ ಪ್ರಮೋಷನ್ನೂ, ಇತ್ಯಾದಿ, ಸ್ವಂತ ಕೆಲಸಕ್ಕಾಗಿ ಲೆಜಿಸ್ಲೇಚರ್ ಹಾಸ್ಟಲಿನಲ್ಲಿ, ಮತ್ತು ಮಿನಿಸ್ಟರ ಆಫೀಸಿನಲ್ಲಿ ಇಲ್ಲಿ ಸುತ್ತಾಡುತ್ತಿರುತ್ತಾರೆ, ಅವರು ಇಲಾಖೆಯ ಕೆಲಸಕ್ಕೆ ಸ್ವಲ್ಪವೂ ಗಮನ ಕೊಡುತ್ತಿಲ್ಲವೆಂದು ಅಗ್ರಿಕಲ್ಚರ್ ಮಂತ್ರಿಗಳ ಸ್ಪೆಷಲ್ ಗಮನವನ್ನು ಸೆಳೆಯುತ್ತಿದ್ದೇನೆ. ಈ ಅಗ್ರಿಕಲ್ಚರ್ ಇಲಾಖೆಯ ನೌಕರುಗಳ ಕೆಲಸವನ್ನೂ, ಚಲನವಲನವನ್ನು ವೀಕ್ಷಿಸುವುದಕ್ಕಾಗಿ, ಆಂಟಿ ಕರಪ್‌ಷನ್ ಡಿಪಾರ್ಟ್‌ಮೆಂಟಿನ ಹಾಗೆ, ಒಬ್ಬ ಸ್ಪೆಷಲ್ ಆಫೀಸರನ್ನು ಚೆಕಿಂಗಿಗಾಗಿ ಹಾಕಬೇಕು. ಒಂದೊಂದು ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಅಂಥ ಸ್ಪೆಷಲ್ ಆಫೀಸರನ್ನು ನೇಮಕ ಮಾಡಬೇಕು. ಆ ಆಫೀಸರಿಗೆ ಮಿನಿಸ್ಟರ ಜೊತೆಯಲ್ಲಿ ನೇರವಾದ ಸಂಬಂಧವಿರಲಿ. ಆವಾಗ ಪ್ರೊಡಕ್ಷನ್ ಎಷ್ಟು ಹೆಚ್ಚಾಗುತ್ತದೆಂಬುದನ್ನು ತಿಳಿದುಕೊಳ್ಳಬೇಕು.

ಈ ಡೆವಲಪ್‌ಮೆಂಟ್ ಕೌನ್ಸಿಲ್ಲುಗಳಲ್ಲಿ ಪ್ಲಾನುಗಳ, ಪ್ರೋಗ್ರಾಂಗಳ ತಯಾರಿಕೆಗೆ ಎಷ್ಟೋ ದುಡ್ಡನ್ನು ಖರ್ಚು ಮಾಡುತ್ತೇವೆ. ಆದರೆ ಅಗ್ರಿಕಲ್‌ಚರ್ ಆಫೀಸಿನಲ್ಲಿರತಕ್ಕಂಥವರು ಅವೆಲ್ಲಾ ಬೋಗಸ್ ಅಂತ ಹೇಳುತ್ತಾರೆ. ಅವನ್ನೆಲ್ಲಾ ಇಂಪ್ಲಿಮೆಂಟ್ ಮಾಡುವುದಕ್ಕೆ ಎಕ್ವಿಪ್‌ಮೆಂಟಿಲ್ಲ, ಡಿ.ಡಿ.ಟಿ. ಇಲ್ಲ, ಬೇಕಾದ ಫೆಸಿಲಿಟಿಗಳನ್ನು ಸರಿಯಾಗಿ ಕೊಡುವುದಿಲ್ಲ, ಅವೆಲ್ಲ ಯಶಸ್ವಿಯಾಗುವುದಿಲ್ಲ ಎಂದು ನಿರಾಶೆ ವ್ಯಕ್ತಪಡಿಸುತ್ತಾರೆ. ನಮ್ಮ ರಾಜ್ಯದ ಅಧಿಕಾರಿಗಳಿಗೆ ಅವುಗಳಲ್ಲಿ ನಂಬಿಕೆಯಿಲ್ಲ. ಆದರೆ ಆಂಧ್ರದಲ್ಲಿ ಪ್ರೋಗ್ರೆಸ್ ತೋರಿಸಲಿಕ್ಕೆ ಹತ್ತಿದ್ದಾರೆ. ನಮ್ಮಲ್ಲಿ ಭಾರಿ ಭಾರಿ ಇರ್ರಿಗೇಶನ್ ಪ್ರಾಜೆಕ್ಟುಗಳನ್ನು ಕಟ್ಟುತ್ತಾ ಇದ್ದೇವೆ. ತುಂಗಭದ್ರ ಪ್ರಾಜೆಕ್ಟಿನಲ್ಲಿ ಎಷ್ಟರಮಟ್ಟಿಗೆ ನೀರು ಯುಟಿಲೈಸ್ ಮಾಡಲಿಕ್ಕೆ ಹತ್ತಿದ್ದಾರೆ ಅಂದರೆ ನಮ್ಮ ಜನರು ಅಗ್ರಿಕಲ್‌ಚರ್-ಮೈಂಡೆಡ್ ಅಲ್ಲ, ಅವರಿಗೆ ಇರ್ರಿಗೇಟ್ ಮಾಡುವ ಮನೋವೃತ್ತಿ ಇಲ್ಲವೆಂದು ಹೇಳುತ್ತೀರಾ. ನಾನು ಕಾರಣ ಹೇಳುತ್ತೇನೆ ನೀವು ಯಾವವರೆಗೆ ಲ್ಯಾಂಡ್ ರಿಫಾರ್ಮ್ಸ್ ಮಾಡುವುದಿಲ್ಲ, ಟೆನ್ಸರಿಗೆ ಲ್ಯಾಂಡ್ ಕೊಡುವುದಿಲ್ಲ ಅವರಿಗೂ ಹೆಚ್ಚು ಆಹಾರ ಬೆಳೆಯಲು ಸಾಧ್ಯವಿಲ್ಲ. ಗುಲ್ಬರ್ಗದಲ್ಲಿ ಜಮೀನಿರುವ ಎಷ್ಟೋ ಜನ ಬೆಂಗಳೂರಿನಲ್ಲಿದ್ದಾರೆ; ಅವರು ಇಲ್ಲಿ ಆಫೀಸರುಗಳಾಗಿದ್ದಾರೆ. ಜಮೀನಿಗೆ ನೀರು ತೆಗೆದುಕೊಂಡು ಇರ್ರಿಗೇಟ್ ಮಾಡಬೇಕಾದರೆ 4-5 ಸಾವಿರ ರೂಪಾಯಿಗಳು ಬೇಕು. ಆ 5 ಸಾವಿರ ರೂಪಾಯಿಯನ್ನು ಇಲ್ಲಿರುವವರು ಅಲ್ಲಿ ಇನ್‌ವೆಸ್ಟ್ ಮಾಡಲಿಕ್ಕೆ ತಯಾರಿಲ್ಲ. ಟೆನೆಂಟಿಗೆ ಸಾಮರ್ಥ್ಯವಿಲ್ಲ.

ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಬೇಕಾದಷ್ಟು ಅಂತಹ ನಿದರ್ಶನಗಳನ್ನು ತೋರಿಸುತ್ತೇನೆ. 60-70 ಮಂದಿ ಇರಬಹುದು ಅವರು ಜಮೀನನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡಿಲ್ಲ. ಇನ್ನು ಎರಡನೆಯದು ಜಮೀನು ಇದ್ದವರೂ ಕೂಡ ಅಷ್ಟು ಫಲವತ್ತಾದ ಜಮೀನು ಅದು ಎಂಬುದು ಅವರಿಗೆ ಗೊತ್ತಿಲ್ಲ. ಆದ್ದರಿಂದ ಸರ್ಕಾರದವರು ಪ್ರಾಪಗೇಟ್ ಮಾಡಬೇಕು. ಯಾರು ಬಡ ಜನರು ಇರುತ್ತಾರೆ ಸರಿಯಾದ ಅನುಕೂಲತೆಗಳನ್ನು ಒದಗಿಸಿಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಯಾರೋ ಆಫೀಸರುಗಳು ಇರುತ್ತಾರೆ, ಎಂ. ಎಲ್. ಎ. ಗಳು ಮುಂಚೆ ಎಲೆಕ್ಷನ್‌ನಲ್ಲಿ ಉಪಯೋಗಕ್ಕೆ ಬರುತ್ತಾರೆ ಎಂದು ಹೇಳಿ ಅವರಿಗೆ ಭೂಮಿ ಕೊಡುವುದು ಇದೆ. ಲಕ್ಷಾವಧಿ ರೂಪಾಯಿ ವ್ಯಾಪಾರ ಮಾಡುವುದು, ಇಂತಹವರು ನಮ್ಮ ತಾಲ್ಲೂಕಿನಲ್ಲಿ ಸಾಲ ತೆಗೆದುಕೊಂಡಿದ್ದಾರೆ, ಸಾಲ ಕೊಡುವುದು ಇದರಿಂದ ಏನೂ ಪ್ರಯೋಜನವಿಲ್ಲ. ಅಂತಹವರು ನಿಜವಾಗಿಯೂ ಜಮೀನನ್ನು ಅಭಿವೃದ್ಧಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ. ಸರ್ಕಾರದವರು ಅಂಕಿ ಅಂಶಗಳನ್ನು ತರಿಸಿ ಜಮೀನನ್ನು ಪಡೆದವರು ಏಕೆ ಅದನ್ನು ಅಭಿವೃದ್ಧಿ ಮಾಡುತ್ತಿಲ್ಲ ಅವರಿಗೆ ತೊಂದರೆ ಏನಿದೆ ಎಂಬುದನ್ನು ನೋಡಬೇಕು. ಕೆನಾಲ್ ಏರಿಯಾದಲ್ಲಿ ಪ್ಲಾನ್ ಪ್ರೋಗ್ರಾಂ ಏನಿದೆ ಅದರ ಪ್ರಕಾರ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರದಿದ್ದರೆ ಅಲ್ಲಿರತಕ್ಕವರು ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ ಅನ್ನದ ಸಲುವಾಗಿ ಒಂದು ಹತೋಟಿಯನ್ನು ಹಾಕಬೇಕು, ನಮ್ಮ ದೇಶಕ್ಕೆ ಎಷ್ಟು ಅನ್ನಬೇಕು ಅಷ್ಟು ಅನ್ನವನ್ನು ಈ ಲ್ಯಾಂಡ್ ಡೆವಲಪ್ ಮಾಡತಕ್ಕ ಜನ ಬೆಳೆಯುತ್ತಾ ಇಲ್ಲ ಕ್ಯಾಷ್ ಕ್ರಾಪ್ಸನ್ನು

(ಶ್ರೀ ಗಂಗಾಧರ ನಾಮೋಶಿ)

ಬೆಳೆಯುತ್ತಾ ಇದ್ದಾರೆ ತಂಬಾಕು ಅರಳೆ ಬೆಳೆಯುತ್ತಾರೆ. ಆದ್ದರಿಂದ ಈ ಪದಾರ್ಥಗಳನ್ನು ಬೆಳೆಯುವುದನ್ನು ಲಿಮಿಟ್ ಮಾಡಿ ಗೋಧಿ, ಅಕ್ಕಿ, ಜೋಳ ಬೆಳೆಯುವುದಕ್ಕೆ ಹೆಚ್ಚು ಒತ್ತಾಯ ಮಾಡಬೇಕು. ಶೇಕಡ 85 ಜನ ನಮ್ಮ ಹಳ್ಳಿಗಳಲ್ಲಿ ವಾಸಮಾಡತಕ್ಕವರು ಇದ್ದಾರೆ, ಅವರಿಗೆ ಸರಿಯಾದ ಒಂದು ಯೋಜನೆಯನ್ನು ಮಾಡಿಕೊಟ್ಟು ಅವರು ಅಕ್ಕಿ, ಜೋಳ, ಗೋಧಿ, ರಾಗಿ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುವಂತೆ ಮಾಡಬೇಕು. ಈಗ ಕಬ್ಬು ವಿಶೇಷವಾಗಿ ಬೆಳೆದು ಸಕ್ಕರೆ ಉತ್ಪಾದನೆ ಮಾಡಿ ಅದನ್ನು ಹೊರದೇಶಗಳಿಗೆ ಕಳುಹಿಸುತ್ತಾ ಇದ್ದೇವೆ, ಶೇಂಗಾ ಬೆಳೆದು ಅದನ್ನೂ ಕೂಡಾ ಹೊರದೇಶಗಳಿಗೆ ಕಳುಹಿಸುತ್ತಾ ಇದ್ದೇವೆ. ಇದನ್ನೆಲ್ಲಾ ಸದ್ಯಕ್ಕೆ ನಿಲ್ಲಿಸಿ ಈಗ ಒದಗಿರತಕ್ಕ ಕ್ಷಾಮನಿವಾರಣೆ ಮಾಡಬೇಕೆಂದು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಈ ವರ್ಷ ನಮ್ಮ ತಾಲ್ಲೂಕಿನಲ್ಲಿ ಈ ಪ್ರಕೃತಿಯ ವಿಕೋಪಕ್ಕೆ ಒಳಗಾಗಿರತಕ್ಕ ಜನರ ಸ್ಥಿತಿಗತಿಗಳನ್ನು ವಿವರಿಸುವುದಕ್ಕಿಂತ ಮುಂದೆ ಕಳೆದ ಸಾಲಿನ ವಿಚಾರವಾಗಿ ಒಂದೆರಡು ಅಂಶಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಕಳೆದ ವರ್ಷದಲ್ಲೂ ಕೂಡ ಕಾಲಕ್ಕೆ ಸರಿಯಾಗಿ ಮಳೆ ಆಗಲಿಲ್ಲ. ಫಸಲು ರೈತರ ಕೈಸೇರಲಿಲ್ಲ ಅದಕ್ಕೆ ಸರ್ಕಾರದವರು ಡಿಸ್ಟ್ರೆಸ್ ರಿಲೀಫ್ ವರ್ಕ್ಸ್‌ಗಳನ್ನು ಪ್ರಾರಂಭಿಸಿ ಕೂಲಿಗಾರರಿಗೆ ಕೂಲಿ ಸಿಕ್ಕುವ ರೀತಿಯಲ್ಲಿ ಮಾಡಬೇಕು ಮತ್ತು ದವಸವನ್ನು ಒದಗಿಸಬೇಕೆಂದು ಹೇಳಿ ನಾವು ಕೇಳಿದ್ದರೆ ಮೇಲೆ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಧ್ಯವಾದಮಟ್ಟಿಗೂ ಕ್ಷಾಮ ಪರಿಸ್ಥಿತಿಯನ್ನು ತಡೆಗಟ್ಟಿದರು ಈ ಒಂದು ಹಿನ್ನೆಲೆಯಲ್ಲಿ ಈ ವರ್ಷದ ಪರಿಸ್ಥಿತಿಯನ್ನು ಆಲೋಚನೆ ಮಾಡಿದ ಪಕ್ಷದಲ್ಲಿ ನಮ್ಮ ಪ್ರಾಂತದಲ್ಲಿ ಮುಂಗಾರು ಮಳೆ ಎಂದು ನಾವು ಏನು ಹೇಳುತ್ತೇವೆ ಅದು ಮಾರ್ಚಿ ತಿಂಗಳ ಕೊನೆಯ ವಾರದಲ್ಲಿ ಎಂದರೆ 27–28ರ ಹೊತ್ತಿಗೆ ಬರಬೇಕಾಗಿತ್ತು. ಈ ವರ್ಷ ಆ ಒಂದು ಮಳೆ ಆಗಿರತಕ್ಕ ಕಾಲವನ್ನು ನಾವು ನೋಡಿದ ಪಕ್ಷದಲ್ಲಿ ಮಾರ್ಚಿಯಲ್ಲಿ ಬೀಳಬೇಕಾದ ಮಳೆ ಮೇ ಮೊದಲನೆಯ ವಾರದಲ್ಲಿ ಬಿತ್ತು. ಇವತ್ತು ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಿದ ಪಕ್ಷದಲ್ಲಿ ಮೇ ತಿಂಗಳ ಮೊದಲನೆವಾರದಲ್ಲಿ ಮಳೆ ಆದ ಅನೇಕ ಪ್ರದೇಶಗಳಲ್ಲಿ ಈ ತಹಲ್‌ವರಗೂ ಮಳೆ ಇಲ್ಲದೆ ರೈತನು ಅಲ್ಲಿ ಬಿತ್ತನೆ ಮಾಡಿದ್ದ ಬೆಳೆ ಏನಿದೆ ಅದು ಆ ರೈತನ ಕೈಸೇರುವುದಿಲ್ಲ ಎಂಬ ಶಂಕೆ ಇವತ್ತು ಅವರಲ್ಲಿ ಮೂಡಿದೆ. ನಮ್ಮ ತಾಲ್ಲೂಕಿನ ಎರಡು ಹೋಬಳಿಗಳನ್ನು ತೆಗೆದುಕೊಳ್ಳುವುದಾದ ಪಕ್ಷದಲ್ಲಿ ಗುಂಡಲುಪೇಟೆ, ಹರದನ ಹೋಬಳಿ ಮತ್ತು ಕಸಬಾ ಹೋಬಳಿಯ ಎಲ್ಲಾ ಭಾಗಗಳಲ್ಲೂ ಮೇ ಮೊದಲನೆ ವಾರದಲ್ಲಿ ಬಿತ್ತನೆ ಹಾಕಿದ್ದಕ್ಕೆ ಇಲ್ಲಿಯತನಕ ಮಳೆ ಬಂದಿಲ್ಲ ಎಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ. ಬಡ್ಜೆಟ್ ಅಧಿವೇಶನದಲ್ಲಿ ನಾವು ಇಲ್ಲಿ ಕೂಡಿದ್ದಾಗ ಆ ಮಳೆಯು ನಿಧಾನವಾಗಿ ಬಂದದ್ದರ ಪರಿಣಾಮವಾಗಿ ಅಭಾವ ಪರಿಸ್ಥಿತಿಯುಂಟಾಗಿದೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ ನಿಜವಾಗಿಯೂ ಕೂಡ ರವಿನ್ಯೂ ಮಂತ್ರಿಗಳು ಏನು ಒಂದು ಆಶ್ವಾಸನವನ್ನು ಕೊಟ್ಟರು ಅದರಂತೆ ನಮ್ಮ ಜಿಲ್ಲೆಯಲ್ಲಿ ಅವರು ಪ್ರವಾಸಮಾಡಿದರು, ಪ್ರವಾಸ ಮಾಡಿದ್ದು ಅಷ್ಟೇ ಅಲ್ಲದೆ ಅವರು ಜಿಲ್ಲಾಧಿಕಾರಿಗಳಿಗೆ ಆದೇಶವನ್ನೂ ಕೂಡ ಕೊಟ್ಟರು. ಆದಷ್ಟು ಬೇಗ ರಿಲೀಫ್ ಕಾಂಗಾರಿಗಳಿಗೆ ವ್ಯವಸ್ಥೆಯನ್ನು ಮಾಡಿ ತಕಾವಿ ಹಾಗೂ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನು ಕೊಡುವಂತೆ ಹೇಳಿದರು. ನಮ್ಮ ತಾಲ್ಲೂಕಿನ ಅಂಕಿ ಅಂಶಗಳನ್ನು ನೋಡುವುದಾದರೆ 40 ಸಾವಿರ ರೂಪಾಯಿಗಳ ತಕಾವಿ ಲೋನು ಮತ್ತು 40 ಸಾವಿರ ರೂಪಾಯಿಗಳ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಮತ್ತು ಬಾವಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ 40 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರು. ಇದು ಮಂಜೂರಾಗಿ ಎಷ್ಟು ದಿವಸದಲ್ಲಿ ಬರಬಹುದು ಎಂದು ನಾವು ಆಲೋಚನೆ ಮಾಡಿದ ಪಕ್ಷದಲ್ಲಿ ಸುಮಾರು ಎರಡು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಒಂದು ತಾಲ್ಲೂಕಿಗೆ ಒಂದು ಲಕ್ಷದ 29 ಸಾವಿರ ರೂಪಾಯಿಗಳನ್ನು ಕೊಟ್ಟ ಹಾಗೆ ಮಾಡಿದ್ದಾರೆ ಆ ಹಣವನ್ನೂ ಕೂಡ ಮೇ ಮೊದಲನೆ ವಾರದಲ್ಲಿ ಮಳೆ ಬರುವುದರಲ್ಲಿ ಡಿಸ್ಟ್ರೆಸ್ ರಿಲೀಫ್‌ಗಾಗಿ ಕೊಟ್ಟ ಹಣವನ್ನು ಎಲ್ಲಾ ಖರ್ಚು ಮಾಡಲಾಗಿದೆ, ತಕಾವಿ ಲೋನು ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್‌ಗೆ ಕೊಟ್ಟ ಹಣವನ್ನು ತಾಲ್ಲೂಕಿನ ಅಧಿಕಾರಿಗಳು ಅನೇಕ ಕಾರಣಗಳಿಗಾಗಿ ಸ್ವಲ್ಪ ಬಿಗಿ ಹಿಡಿದಿದ್ದರಿಂದ ಅಲ್ಪಸ್ವಲ್ಪ ಹಣ ಅದರಲ್ಲಿ ಉಳಿದಿದೆ. ಆದರೂ ಕೂಡ ಇವತ್ತು ಅಲ್ಲಿ ಯಾವ ಒಂದು ಪರಿಸ್ಥಿತಿ ಉಂಟಾಗಿದೆ ಅದಕ್ಕೆ ರೀಲಿಫ್ ಕಾಮಗಾರಿಗಳನ್ನು ಕೈಕೊಳ್ಳಲು ಅವರಿಗೆ ಹಣವನ್ನು ಒದಗಿಸಬೇಕಾದ್ದು ಬಹಳ ಮುಖ್ಯ. ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ರೆವಿನ್ಯೂ ಮಂತ್ರಿಗಳಲ್ಲಿ ಬಿನ್ನೈಸುತ್ತೇನೆ.

ಎರಡನೆಯದಾಗಿ ಆಹಾರದ ಪರಿಸ್ಥಿತಿಯನ್ನು ನೋಡುವುದಾದ ಪಕ್ಷದಲ್ಲಿ ನಮ್ಮ ಪ್ರಾಂತದಲ್ಲಿ ಹೆಚ್ಚಾಗಿ ಜೋಳವನ್ನು ಬೆಳೆಯುವುದು ಮತ್ತು ಉಪಯೋಗಿಸುವುದು. ಎಲ್ಲರಿಗೂ ಗೊತ್ತಿರುವ ಹಾಗೆ ಜೋಳದ ಅಭಾವ ಅಲ್ಲಿಯೂ ಕೂಡ ಇದೆ. ಇವತ್ತು ಮಾರ್ಕೆಟ್‌ನಲ್ಲಿ ಈ ಜೋಳದ ರೇಟ್ ಏನಿವೆ ಅದು ಗೋಧಿಗಿಂತ ಇಮ್ಮಡಿಯಾಗಿದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಚಾಮರಾಜ ನಗರದ ಪೇಟೆಯಲ್ಲಿ ವಿಚಾರಿಸಿದ ಪಕ್ಷದಲ್ಲಿ ಗೋಧಿ ಸ್ವಲ್ಪಸಲ್ಪ ಸಿಕ್ಕಿದರೂ ಸಿಕ್ಕಬಹುದು ಜೋಳಕ್ಕೆ ಅಬ್‌ನಾರ್ಮಲ್ ಪ್ರೈಸ್ ಕೊಡಬೇಕಾಗಿದೆ. ಅಷ್ಟು ವಿಪರೀತವಾದ ಬೆಲೆಯನ್ನು ಕೊಟ್ಟು ಬಡವನಾದ ರೈತ, ಕೂಲಿಗಾರರು ಅದನ್ನು ಕೊಂಡುಕೊಳ್ಳಲು ಶಕ್ತಿ ಇಲ್ಲದವರಾಗಿದ್ದಾರೆ. ಆದ್ದರಿಂದ ಸರ್ಕಾರದವರು ಇವತ್ತು ಇದರ ಬಗ್ಗೆ ತುರ್ತು ಕ್ರಮವನ್ನು ಕೈಕೊಳ್ಳಬೇಕು. ಅದಕ್ಕೆ ಫೇರ್ ಪ್ರೈಸ್ ಡಿಪೋಗಳನ್ನಾದರೂ ತೆಗೆಯಬೇಕು ಅಥವಾ ಕೋ ಅಪರೇಟೀವ್ ಸೊಸೈಟಿಗಳ ಮೂಲಕವಾದರೂ ಅಕ್ಕಿಯ ಮಾರಾಟದ ವ್ಯವಸ್ಥೆಯನ್ನು ಮಾಡಿಸತಕ್ಕದ್ದು ಬಹಳ ಮುಖ್ಯವಾದದ್ದು. ಈ ಸಂದರ್ಭದಲ್ಲಿ ನಾನು ಏಪ್ರಿಲ್ ತಿಂಗಳಿನಲ್ಲಿ ನಡೆದ ಒಂದು ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೈಸೂರಿನಲ್ಲಿ ಒಂದು ಕನ್‌ಸ್ಯೂಮರ್ಸ್ ಕೋ ಆಪರೇಟೀವ್ ಸೊಸೈಟಿ ಎಂದು ಇದೆ. ಬೆಂಗಳೂರಿನಲ್ಲಿರುವ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಅವರು 100 ಟನ್ ಅಕ್ಕಿಯನ್ನು ಮೈಸೂರು ಡಿಸ್ಟ್ರಿಕ್ಟ್‌ಗೆ ಅಲಾಟ್ ಮಾಡಿದ್ದೇವೆ ಅದನ್ನು ಲಿಫ್ಟ್ ಮಾಡಿ ಎಂದು ಹೇಳಿದರು. ಸುಮಾರು 53 ಸಾವಿರ ರೂಪಾಯಿಗಳನ್ನು ಸೊಸೈಟಿಯಿಂದ ಕೊಟ್ಟು ಅವರು ಆ ಅಕ್ಕಿಯನ್ನು ಲಿಫ್ಟ್ ಮಾಡಬೇಕಾಗಿತ್ತು. ಡಿಸೆಂಬರ್ ಅಂತ್ಯದೊಳಗೆ 53 ಸಾವಿರ ರೂಪಾಯಿಗಳನ್ನು ಕಟ್ಟಲಿಕ್ಕೆ ಅವರಿಂದ ಸಾಧ್ಯವಾಗಲಿಲ್ಲ. ಆದ್ದರಿಂದ 100 ಟನ್ ಅಕ್ಕಿ ಮೈಸೂರಿಗೆ ಅಲಾಟ್ ಆದದ್ದನ್ನು ಒದಗಿಸಿಕೊಳ್ಳಲಿಕ್ಕೆ ಆ ಸೊಸೈಟಿಯವರಿಂದ ಆಗಲಿಲ್ಲ.

5-30 P.M.

ಅದನ್ನು ರೆವೆನ್ಯೂ ಮಂತ್ರಿಗಳ ಗಮನಕ್ಕೆ ತಂದೆ. ಮೈಸೂರು ಜಿಲ್ಲೆಯ ಅಭಾವ ಪ್ರದೇಶಗಳಿಗೆ ಒಂದು ಸಾವಿರ ಪಲ್ಲ ಕೊಡಬೇಕೆಂದು ಡೈರೆಕ್ಟರು ಹೇಳಿದಮೇಲೆ ಕೋ-ಅಪರೇಟಿವ್ ಸೊಸೈಟಿಯವರು ಹಣ ಕಟ್ಟಿ ತೆಗೆದುಕೊಂಡಿಲ್ಲ. ಈ ದಿವಸ ಇಂಡಿಯಾ ಸರ್ಕಾರದ ಅಧಿಕಾರಿಗಳು ಹೇಳುವುದು ಮೈಸೂರಿಗೆ ಜನವರಿಯಿಂದ ಡಿಸೆಂಬರ್‌ವರೆಗೆ ಮಾತ್ರ, ಒಂದು ಸಾವಿರ ಪಲ್ಲ, ಡಿಸೆಂಬರ್ 31 ರೊಳಗಾಗಿ ಸಾಗಿಸದಿದ್ದರೆ ಅದು ತೆಗೆದುಕೊಳ್ಳಬೇಕಾಗಿರುವವರ ತಪ್ಪು, ಈ ದಿವಸ ನಾವೇನೂ ಮಾಡುವುದಕ್ಕಾಗುವುದಿಲ್ಲ, ಈ ವರ್ಷದ ಅಲಾಟ್‌ಮೆಂಟ್ ಬೇಕಾದರೆ ಬೇಗ ತರಿಸಲು ಪ್ರಯತ್ನ ಮಾಡಬಹುದು, ಕಳೆದ ವರ್ಷದ ವಿಚಾರ ಮತ್ತೆ ಪ್ರಸ್ತಾಪಮಾಡುವುದಕ್ಕಾಗುವುದಿಲ್ಲ ಎಂದು. ರೆವೆನ್ಯೂ ಮಂತ್ರಿಗಳಿಗೆ ಈ ವಿಚಾರ ಹೇಳಿದಾಗ ಅವರೂ ಪ್ರಯತ್ನಮಾಡುವುದಾಗಿ ಹೇಳಿದರು. ಆದರೆ ಮೊನ್ನೆತಾನೆ ಆಹಾರ ಮಂತ್ರಿಗಳ ಸಮ್ಮೇಳನಕ್ಕೆ ಹೋಗಿ ಬಂದಮೇಲೆ ಕೊಟ್ಟಿರುವ ಹೇಳಿಕೆ ನೋಡಿದರೆ ಮೈಸೂರಿಗೆ ಅಲಾಟ್ ಆಗಿದ್ದುದು ಹಿಂದೆಯೇ ಲ್ಯಾಪ್ಸ್ ಆಗಿದೆ ಎಂದು ಅರ್ಥವಾಯಿತು. ತಪ್ಪು ಯಾರದು ಎಂದು ನಾನು ವಿಮರ್ಶೆಮಾಡುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರದ ಧೋರಣೆ ಯೇನಿದೆ ರೈತರಿಗೆ ಅಗ್ಗದ ಬೆಲೆಯಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಬೇಕೆಂಬ ಉದ್ದೇಶವೇನಿದೆ ಅದು ಕಾರ್ಯಗತವಾಗಬೇಕು. ಈ ರೀತಿ ಮುಂದಾದರೂ ತೊಂದರೆಯಾಗದಹಾಗೆ ಏರ್ಪಾಡು ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಸರ್ಕಾರ ಪರಿಹಾರವೇನು ಮಾಡಬಹುದೆಂಬುದನ್ನು ಮಂತ್ರಿಗಳು ಪ್ರವಾಸ ಬಂದಾಗ ಹೇಳಿದ್ದೇನೆ. ಅಭಾವ ಪರಿಸ್ಥಿತಿ ಇರುವ ಕಡೆ ಆಹಾರ ಪದಾರ್ಥಗಳನ್ನು ಕೊಳ್ಳಲು ರೈತರಲ್ಲಿ ಹಣವಿಲ್ಲ, ಕೂಲಿ ಮಾಡಲು ಕೂಲಿ ಕೆಲಸ ಸಿಗುತ್ತಿಲ್ಲ. ಆದುದರಿಂದ ಸರ್ಕಾರದವರು ತಮಗೆ ಬರಬೇಕಾದ ಕಂದಾಯ, ಸಾಲ ಮುಂತಾದುವನ್ನು ಹೆಚ್ಚಿನ ಒತ್ತಾಯದಿಂದ ವಸೂಲುಮಾಡದೆ ನಿಧಾನವಾಗಿ ವಸೂಲುಮಾಡುವುದು ಒಳ್ಳೆಯದು, ಮುಂಗಾರು ಮಳೆ ಬಂದರೆ, ಫಸಲಾದರೆ ಕಂದಾಯ ವಗೈರೆ ಕೊಡಲು ಅನುಕೂಲ ಎಂದು ನಾವು ಮನವಿ ಸಲ್ಲಿಸಿದ್ದೇವೆ. ಹಾಗೆ ಸಲ್ಲಿಸಿದಾಗ ಮಂತ್ರಿಗಳು ಅಧಿಕಾರಿಗಳಿಗೆ ಆ ವಿಚಾರವನ್ನು ಬಾಯಿಮಾತಿನಲ್ಲಿ ಹೇಳಿದರು. ಈ ದಿವಸ ಸರ್‌ಛಾರ್ಜ್ ಕೂಡ ಒತ್ತಾಯವಾಗಿ ವಸೂಲುಮಾಡುತ್ತಿದ್ದಾರೆ. ಅದರ ಬಗ್ಗೆ ಕೂಡ ರಿಲೀಫ್ ಕೊಟ್ಟರೆ ಅನುಕೂಲ. ರೈತನ ಕೈಗೆ ಬೆಳೆ ಬರುವವರೆಗೆ ರಿಲೀಫ್ ಕೊಡುವುದು ಅವಶ್ಯಕ. ಈ ಪರಿಸ್ಥಿತಿಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳನ್ನೂ ಕರೆಸಿರುವಾಗ ಅವರವರ ಜಿಲ್ಲೆಯ ಪರಿಸ್ಥಿತಿಯನ್ನು ಕೇಳಿ ತಿಳಿದುಕೊಂಡು ಎಲ್ಲಿ ಅವಶ್ಯಕ ಅಲ್ಲಿ ಎಲ್ಲಾ ರಿಲೀಫ್ ಕೊಡಬೇಕು. ಕಂದಾಯ ವಸೂಲಿ ಕೂಡದು, ಒತ್ತಾಯಮಾಡುವುದನ್ನು ಕಡಮೆಮಾಡಬೇಕು ಎಂದು ತಿಳಿವಳಿಕೆ ಅವರಿಗೆ ಕೊಡಬೇಕು. ಎಂದು ಪ್ರಾರ್ಥನೆಮಾಡುತ್ತೇನೆ.

(ಶ್ರೀ ಗಂಗಾಧರ ನಾಮೋಶಿ)

ಮೂರನೆಯದಾಗಿ ಅನೇಕ ಪ್ರಾಜೆಕ್ಟುಗಳನ್ನು ನಮ್ಮ ತಾಲ್ಲೂಕಿನಲ್ಲಿ ಪ್ರಾರಂಭಿಸಿದ್ದಾರೆ, ಭಾರಿ ಯೋಜನೆಗಳನ್ನು ಕೈಕೊಂಡಿದ್ದಾರೆ. ಆದರೆ ತೊಂದರೆಯೇನಾಗಿದೆಯೆಂದರೆ ಉದಾಹರಣೆಗೆ ಒಂದು ಪ್ರಾಜೆಕ್ಟಿಗೆ ಸುಮಾರು 10 ಲಕ್ಷ ರೂಪಾಯಿಗಳ ಅಂದಾಜು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ. ಆದರೆ ಈ ದಿವಸ ನಮ್ಮ ತಾಲ್ಲೂಕಿನ ಕೂಲಿಗಾರರಿಗೆ ಆದರಿಂದ ಉಪಯೋಗವಾಗಿಲ್ಲ. ಅದಕ್ಕೆ ಸರ್ಕಾರವೇ ಕಾರಣ. ಟೆಂಡರ್ ಕರೆದು ಕೆಲಸ ಕೊಟ್ಟಿರುವುದರಿಂದ ಕಂಟ್ರಾಕ್ಟರು ಕೇರಳದಿಂದ ಅಥವ ತಮಿಳು ನಾಡಿನಿಂದ ಕೂಲಿಗಾರರ 200–300 ಸಂಸಾರಗಳನ್ನು ಕರೆದುಕೊಂಡು ಬಂದು ಅವರಿಂದ ಕೆಲಸ ಮಾಡಿಸುತ್ತಿದ್ದಾರೆ. ಇದರಿಂದಾಗಿ ಆ ತಾಲ್ಲೂಕಿನಲ್ಲಿರುವವರಿಗೆ ಕೂಲಿ ಸಿಕ್ಕುತ್ತಿಲ್ಲ. ಅಪರು ವ್ಯವಸಾಯದ ಕೂಲಿಯಾದರೂ ಮಾಡಲು ಅಭಾವ ಪರಿಸ್ಥಿತಿಯಿಂದ ಅದಕ್ಕೂ ತೊಂದರೆಯಾಗಿದೆ. ಇದಕ್ಕೆ ಲೋಕೋಪಯೋಗಿ ಇಲಾಖೆ ಏನು ಕಾರ್ಯಕ್ರಮ ಹಾಕಬೇಕೆಂದರೆ ಸ್ಥಳೀಯವಾಗಿ ಕೂಲಿಗಾರರಿಗೆ ಕೂಲಿ ಸಿಕ್ಕುವಂತೆ ಮಾಡುವ ವಿಧಾನವಿದೆ, ಅನೇಕ ಸಂದರ್ಭಗಳಲ್ಲಿ ಟೆಂಡರ್ ಕರೆಯದೆ ಕೆಲಸ ಮಾಡಿಸಬಹುದು ಅಥವ ಸ್ಥಳೀಯವಾಗಿ ಕಂಟ್ರಾಕ್ಟರುಗಳಿಗೆ ಕೊಟ್ಟರೆ ಅವರು ಸ್ಥಳೀಯ ಕೂಲಿಗಾರರನ್ನಿಟ್ಟುಕೊಂಡು ಕೆಲಸ ಮಾಡಬಹುದು. ಆದರಿಂದ ಅಲ್ಲಿ ಕೂಲಿಯನ್ನೇ ನಂಬಿಕೊಂಡಿರುವವರಿಗೆ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳೊಡನೆ ಮತ್ತು ಮಂತ್ರಿಗಳೊಡನೆ ವಿಚಾರ ಮಾಡಿ ರೆವೆನ್ಯೂ ಮಂತ್ರಿಗಳು ಸೂಕ್ತ ಕ್ರಮ ಕೈಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ನೀರಾವರಿ ವಿಚಾರ. ಈ ದಿವಸ 40 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದಾಗಿ ಹೇಳಿದರು. ಆದರೆ ಅದನ್ನು ಹೇಳಿರುವುದು ಇದೇ ಮೊಟ್ಟಮೊದಲನೆಯ ಬಾರಿ ಅಲ್ಲ, ಸುಮಾರು ಎರಡು ವರ್ಷಗಳ ಹಿಂದೆ ಈ ಸಭೆಯಲ್ಲಿ ಅಭಾವ ಪರಿಸ್ಥಿತಿ ಚರ್ಚೆಗೆ ಉತ್ತರ ಕೊಡುವಾಗ ಕೂಡ ಅದನ್ನು ಹೇಳಿದ್ದರು. ಆ ಯೋಜನೆಯಲ್ಲಿ ಬಹುಶಃ ತಾತ್ಕಾಲಿಕವಾಗಿ ಅಲ್ಲದಿದ್ದರೂ ಸ್ವಲ್ಪ ಕಾಲಾನಂತರ ಅಭಾವ ಪರಿಸ್ಥಿತಿ ಸಂಪೂರ್ಣವಾಗಿ ನಿರ್ಮೂಲವಾಗಬಹುದಾದ ಅಂಶಗಳು ಅದರಲ್ಲಿ ಅಡಕವಾಗಿವೆ. ಕೇಂದ್ರದ ನೆರವು ಪಡೆದು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುತ್ತೇವೆಂದು ಹೇಳಿದ್ದರು. ಈ ದಿವಸವೂ ಅದನ್ನೇ ಹೇಳುತ್ತಿದ್ದಾರೆ. ಆದಷ್ಟು ಬೇಗ ಅದನ್ನು ಕಾರ್ಯರೂಪಕ್ಕೆ ತರಬೇಕು. ಈ ದಿವಸ ಸಹಾಯವೇನು ಬಂದಿದೆ ಅದನ್ನು ಹೆಚ್ಚಾಗಿ ನೀರಾವರಿ ಬಾವಿಗಳಿಗೆ ಕೊಟ್ಟಿದ್ದಾರೆ. ಪಂಪುಸೆಟ್ಟುಗಳನ್ನೊದಗಿಸುವ ಕಾರ್ಯಕ್ರಮದಲ್ಲಿ ಅನೇಕ ಎಡರುತೊಡರುಗಳಿವೆ, ಕೆಲಸವನ್ನು ಸಾಧ್ಯವಾದಮಟ್ಟಿಗೆ ನಿವಾರಣೆ ಮಾಡಲು ಪ್ರಯತ್ನಮಾಡಿದ್ದಾರೆ. ಆದರೆ ಅನೇಕವೇಳೆ ಸರ್ಕಾರದ ಹಾಗೂ ಅಧಿಕಾರಿಗಳ ಹತೋಟಿ ಮೀರಿ ತೊಂದರೆಯಾಗಿರುವ ಪ್ರಸಂಗಗಳೂ ಇವೆ. ಬಾವಿಗಳಿಗೆ ಮೋಟಾರ್ ಅಥವ ಪಂಪನ್ನು ಕೊಡುವಾಗ ವಿದ್ಯುಚ್ಛಕ್ತಿ ಬೋರ್ಡಿಗೆ ನಾವು ಎರಡು ಸಾವಿರ ರೂಪಾಯಿಗಳನ್ನು ಕಟ್ಟಿದ್ದರೂ ಬೇಕಾದ ವಸ್ತುಗಳ ಅಂದರೆ ವೈರು, ಪಂಪುಸೆಟ್ಟುಗಳ ಸರಬರಾಯಿ ಸಾಲದೆ ಕಾರ್ಯಕ್ರಮ ಕುಂಠಿತವಾಗುತ್ತಿದೆ. ಸರ್ಕಾರದ ಅಶ್ರದ್ಧೆಯಿಂದ ತೊಂದರೆಯಾಗುತ್ತಿದೆಯೆಂದು ಹೇಳುವುದು ವಾಡಿಕೆಯಾದರೂ ನಿಜ ಸ್ಥಿತಿ ನೋಡಿದರೆ ಸರ್ಕಾರದವರು ತೊಂದರೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಮಾಡಿರುವುದು ಕಂಡುಬರುತ್ತದೆ. ನೀರಾವರಿ ಬಾವಿಗಳಿಗೆ ಮೈಸೂರು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿಗೆ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಅಪೂರ್ಣವಾಗಿರುವ ಹಳೆಯ ಬಾವಿಗಳಿಗೆ ಮಾತ್ರ ಅದನ್ನು ಖರ್ಚುಮಾಡಬೇಕೆಂದು ಹೊಸ ಬಾವಿಗಳಿಗೆ ಉಪಯೋಗಿಸಬಾರದೆಂದು ಕಂಡೀಷನ್ ಹಾಕಿ ಸ್ಥಳೀಯ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆ. ಹೀಗೆ ಮಾಡಿದರೆ ಈ ಯೋಜನೆಯ ಗತಿಯೇನಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಅದೇ ಹಣವನ್ನು ಹೊಸದಾಗಿ ಈ ವರ್ಷದ ಬಜೆಟ್ಟಿನಲ್ಲಿ ಕೊಡುತ್ತಾರೆ. ಈ ಹಣವನ್ನು ತೆಗೆದುಕೊಂಡು ಬಿಟ್ಟರೆ ರೈತನ ಸ್ಥಿತಿ ಏನಾಗುತ್ತದೆ ಎನ್ನುವುದನ್ನು ಬಹುಶಃ ಆಲೋಚನೆ ಮಾಡತಕ್ಕದ್ದು ಬಹಳ ಮುಖ್ಯ. ಕೊಟ್ಟಿರತಕ್ಕ ಗ್ರಾಂಟುಗಳನ್ನು ಏನು ಮಾಡುತ್ತಾರೆಂದರೆ ಪ್ರತಿ ತಾಲ್ಲೂಕಿಗೂ 3000 ದಷ್ಟನ್ನು ಕೊಟ್ಟರೂ ಹಳೆಯ ಬಾವಿಗಳನ್ನು ಪೂರ್ತಿ ಮಾಡುವುದಕ್ಕಾಗಿ ಉಪಯೋಗಿಸುತ್ತಾರೆ. ಹೊಸದಾಗಿ ಬಾವಿಗಳನ್ನು ತೋಡಲು ಸಾಕಷ್ಟು ಗ್ರ್ಯಾಂಟನ್ನು ಕೊಟ್ಟಿರುವುದಿಲ್ಲ. ಇದನ್ನು ಆದಷ್ಟೂ ಜಾಸ್ತಿ ಮಾಡಬೇಕು.

ಕೊನೆಯದಾಗಿ ಒಂದೇ ಒಂದು ಮಾತನ್ನು ಸಲಹೆಯ ರೂಪದಲ್ಲಿ ಸರ್ಕಾರಕ್ಕೆ ಹೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ನೀರಾವರಿ ಕಾಮಗಾರಿಗಳಾಗಿಲ್ಲ. ನೀರಾವರಿಗಾಗಿ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ಹೇಳುತ್ತಿದ್ದಂತೆ ನಮ್ಮ ಸರ್ಕಾರದವರು ಈ ವರ್ಷ 1.20 ಲಕ್ಷ ರೂಪಾಯಿಗಳ ಒಂದು ಯೋಜನೆ ಎಂದು ಮಾಡಿ ಕೊಟ್ಟರು. ಈ ಯೋಜನೆ

ಕಾವೇರಿ ಪ್ರದೇಶದಲ್ಲಿ ಬರುತ್ತದೆ. ಇದಕ್ಕಾಗಿ ಪ್ರತಿ ವರ್ಷವೂ ಸುಮಾರು ಐದು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಮಾಡಿದ್ದಾರೆ. ಇದರ ಜೊತೆಗೆ ಇನ್ನೂ ಐದು ಲಕ್ಷ ರೂಪಾಯಿಗಳಲ್ಲಿ ಇರುವ ಕೆಲವು ಕೆರೆಗಳನ್ನೂ ಮತ್ತು ನೀರಾವರಿ ಬಾವಿಗಳನ್ನು ತೆಗೆಸಬೇಕು ಎಂದು ಮಾಡಿದ್ದಾರೆ. ಇದಕ್ಕೇನೂ ಟೆಕ್ನಿಕಲ್ ಲೇಬರು ಬೇಕಾಗಿಲ್ಲ. ಇವೆಲ್ಲ ನಾನ್ ಟೆಕ್ನಿಕಲ್ ಲೇಬರು. ಇದಕ್ಕೆ ಅಲ್ಲಿರುವ ಜನರನ್ನೇ ಉಪಯೋಗಿಸಿಕೊಂಡು ಆದಷ್ಟು ಬೇಗ ಈ ಐದು ಲಕ್ಷ ರೂಪಾಯಿಗಳನ್ನೂ ನಮ್ಮ ಪಿ. ಡಬ್ಲ್ಯೂ. ಡಿ. ಇಲಾಖೆಯವರು ಖರ್ಚು ಮಾಡುವುದು ಸೂಕ್ತವಾಗಿದೆ ಮತ್ತು ಆ ಪ್ರದೇಶದಲ್ಲಿ ಜನಕ್ಕೆ ಕೂಲಿಯೂ ಸಿಕ್ಕಿದಂತಾಗುತ್ತದೆ, ಇದರ ಬಗ್ಗೆ ಸರ್ಕಾರ ಸೂಕ್ತವಾದ ಆದೇಶವನ್ನು ಬೇಗನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ನಮ್ಮ ಸರ್ಕಾರದವರು ಸಾಕಾದಷ್ಟು ಬರಗಾಲಕ್ಕಾಗಿ ನೆರವು ಕೊಡುತ್ತಿದ್ದಾರೆ. ಆದರೆ ಒಂದೇ ಸಾರಿ ಎಲ್ಲವನ್ನೂ ಮಾಡುವುದು ಎಂದರೆ ಬಹಳ ಅಸಾಧ್ಯವಾದ ಕೆಲಸ. ಇದರ ಬಗ್ಗೆ ಕೇಂದ್ರದವರಿಂದಲಾದರೂ ಸಾಕಷ್ಟು ನೆರವನ್ನು ಪಡೆದು ಸಾಧ್ಯವಾದಷ್ಟು ನೆರವನ್ನು ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡು ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಅಭಾವ ಪರಿಸ್ಥಿತಿ ಎನ್ನುವುದು ನಮ್ಮ ದೇಶದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಇದರಲ್ಲಿ ಎರಡು ವಿಧಿಗಳಿವೆ, ಒಂದು ಫ್ಯಾಮಿನ್ ಕಂಡಿಷನ್ಸ್ ಇನ್ನೊಂದು ಸ್ಕೇರ್ಸಿಟಿ ಕಂಡಿಷನ್ಸು. ನಮ್ಮ ದೇಶದಲ್ಲಿ ಆಗಿಂದಾಗ್ಗೆ ಸ್ಕೇರ್ಸಿಟಿ ಕಂಡಿಷನ್ನುಗಳು ಬರುತ್ತಿರುತ್ತವೆ. ಅದನ್ನು ನಿವಾರಣೆ ಮಾಡಬೇಕು ಮತ್ತು ಗ್ರಾಮಾಂತರದಲ್ಲಿರುವ ಜನಗಳು ಸುಧಾರಿಸಿಕೊಳ್ಳುವ ಶಕ್ತಿಯನ್ನೂ ಸರ್ಕಾರದವರೂ ಕೊಡಬೇಕು ಎಂದು ಹೇಳಿಬಿಟ್ಟು, ಇಲ್ಲಿ ಪದೇ ಪದೇ ಹೊರಗಿನಿಂದಲೂ ಕೂಡ ಜನರು ನೂರುಗಟ್ಟಲೆ ಸಾವಿರಗಟ್ಟಲೆ ಮನವಿಗಳನ್ನು ಸರ್ಕಾರದಲ್ಲಿ ಮಾಡಿಕೊಳ್ಳುತ್ತಾರೆ. ಈ ಮನೆಯೊಳಗೂ ಕೂಡ ಇದೇ ರೀತಿ ಅನೇಕರು ಇಲ್ಲಿ ಸರ್ಕಾರಕ್ಕೆ ಅನೇಕ ರೀತಿಯಿಂದ ತಿಳಿಸುತ್ತಿದ್ದಾರೆ. ನಮ್ಮ ಮಾನ್ಯ ಸಚಿವರೂ ಕೂಡ ಇಲ್ಲಿ ತಾವು ಮಾಡಿರುವ ಪ್ರಯತ್ನಗಳನ್ನು ಕುರಿತು ಇಲ್ಲಿ ತಿಳಿಸಿದರು. ತಾವು ಈಗ ತಾತ್ಕಾಲಿಕವಾದ ಪರಿಹಾರಗಳನ್ನು ಮಾಡಿ ಮುಂದೆ ಈ ತರಹದ ಕ್ಷಾಮ ಬಾರದಂತೆ ಶಕ್ತಿ ಮೀರಿ ಖರ್ಚು ಮಾಡುತ್ತಿದ್ದರೂ ಅಲ್ಲಿರುವ ಜನರಲ್ಲಿ ಕ್ಷಾಮ ಪರಿಸ್ಥಿತಿ ನಿವಾರಣೆಯಾಗದೆ ಹಾಗೇ ಉಳಿಯುತ್ತಿದೆ. ಮತ್ತು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಕೃಷ್ಣ ಪರಮಾತ್ಮನೇ ಆಗಿದ್ದಾರೆ. ಅವರ ಹೆಸರು ಶಾಶ್ವತವಾಗಿ ಉಳಿಯುವಂತೆ ಶಕ್ತಿಯನ್ನು ಅವರಿಗೆ ಕೊಡಲಿ ಎಂದು ಹೇಳಬೇಕಾದರೆ ಇಂತಹ ತಾತ್ಕಾಲಿಕ ಪರಿಹಾರಗಳಿಂದ ಬರುವುದಿಲ್ಲ. ಕ್ಷಾಮವನ್ನು ನಿವಾರಣೆ ಮಾಡುತ್ತೇವೆಂದು ಕೆಲವು ಜನರು ದುಡ್ಡು ಮಾಡಿಕೊಂಡು ಉಪಯೋಗ ಮಾಡಿಕೊಳ್ಳುವಂತಹವರಿಗೆ ಸರ್ಕಾರ ಅವಕಾಶ ಕೊಡಕೂಡದು. ಕ್ಷಾಮದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ ಅರವತ್ತು ಜನಕ್ಕೆ ತಟ್ಟಿದೆ. ಅದರಲ್ಲೂ ಅಗ್ರಿಕಲ್‌ಚರ್ ಲೇಬರು ಜನ ಎಂದು ಯಾರಿದ್ದಾರೆ ಅವರಿಗೆ ಈ ಕ್ಷಾಮದ ತಾಪ ಹೆಚ್ಚಾಗಿ ತಟ್ಟಿದೆ. ಅವರಿಗೆ ಸರ್ಕಾರ ಸಾಕಷ್ಟು ಸಹಾಯಗಳನ್ನು ಕೊಡುವುದು ಅವಶ್ಯಕ. ಅದಕ್ಕಾಗಿ ಬಾವಿಗಳಿಗೆ ಸಬ್‌ಸಿಡಿಗಳನ್ನು ಸಾಲದ ರೂಪವಾಗಿ ಸಬ್‌ಸಿಡಿಯಾಗಿ ಕೊಡಿ. ಹಾಗೆ ಕೊಟ್ಟರೂ ಅವರಿಗೆ ಪ್ರಯೋಜನವಾಗಿಲ್ಲ. ಏಕೆಂದರೆ ಈಗ ಲ್ಯಾಂಡು ಮಾರ್ಟ್‌ಗೇಜು ಬ್ಯಾಂಕುಗಳೆಂದು ಮಾಡಿದ್ದೀರಿ. ಅದರ ಮೂಲಕ ಸಾಲ ಕೊಡಬೇಕೆಂದು ಸರ್ಕಾರ ಮಾಡಿದ್ದರೂ ಅದು ಕೇವಲ ಜಮೀನುಳ್ಳ ಮಧ್ಯಮವರ್ಗದ ರೈತರಿಗೆ ಮುಟ್ಟುತ್ತಿದೆ. ಭೂಮಿ ಇಲ್ಲದ ಜನಗಳಿಗೆ ಈ ಸಾಲದಿಂದ ಏನೂ ಪ್ರಯೋಜನವಾಗುತ್ತಿಲ್ಲ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರ ಆಗಿಂದಾಗ್ಗೆ ಮಾಡುತ್ತಿರುವ ಕಾನೂನುಗಳು ಮತ್ತು ಅದರಿಂದ ಆಗುತ್ತಿರುವ ಪರಿಣಾಮ ಕಳೆದ 17 ವರ್ಷಗಳಿಂದಲೂ ಇತ್ತೀಚಿನ ರಾಜ್ಯಭಾರದವರೆಗೂ ಪ್ರಜಾಪ್ರಭುತ್ವದ ಸವಿ ಸಾಮಾನ್ಯ ರೈತನಿಗೆ ಮುಟ್ಟಿಲ್ಲ ಎಂದು ಹೇಳಬೇಕಾಗಿದೆ. ಇದರಿಂದ ಕ್ಷಾಮ ಡಾಮರಗಳು ಬಂದರೂ ಸರ್ಕಾರ ತಮಗೇನೂ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದಿದ್ದಾರೆ ಎಂದು ನಾನು ಇಲ್ಲಿ ಗಂಟಾಘೋಷವಾಗಿ ಹೇಳುತ್ತೇನೆ. ಸಾಮಾನ್ಯವಾಗಿ ಒಂದು ಕುಟುಂಬದವರನ್ನು ನೋಡುವುದಾದರೆ ಕ್ಷಾಮದ ಕಾಲದಲ್ಲಿ ತಮಗೆ ಹೊಟ್ಟೆಗೆ ತಿನ್ನಲು ಅಕ್ಕಿ ಸಿಗುವುದಿಲ್ಲ, ದನಗಳಿಗೆ ಮೇವು ಸಿಗುವುದಿಲ್ಲ. ಇಂತಹ ಸ್ಥಿತಿಗಳನ್ನು ಸಹಿಸಿಕೊಂಡು ಯಾರಿಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗುವುದಿಲ್ಲ ಎಂದು ಅನುಭವಿಸಿಕೊಂಡು ಬರುತ್ತಿದ್ದಾರೆ. ಆದರೆ ಇಂತಹ ಸಂದರ್ಭಗಳನ್ನುಪಯೋಗಿಸಿಕೊಂಡು ಬರೀ ಖಾಲಿ ಗಲಾಟೆ ಮಾಡುವ ನಮ್ಮಂತಹ ಪುಢಾರಿಗಳು ಸಹ ಬಾವಿಗಳಿಗಾಗಿ ಆಯಾ ತಾಲ್ಲೂಕಿನಲ್ಲಿರುವ ಒಂದೊಂದು ಬಾವಿಗಳಿಗಾಗಿ 3000 ದಷ್ಟು ಎಂದು ಸಬ್‌ಸಿಡಿ ಪಡೆಯುತ್ತಾರೆ. ಮತ್ತು ಒಂದು ತಾಲ್ಲೂಕಿನಲ್ಲಿ ನೂರಾರು ಬಾವಿಗಳಿಗಾಗಿ ಪ್ರಯೋಜನವಾಗುತ್ತದೆ, ಅಲ್ಲದೆ ಇದಕ್ಕಾಗಿ ಸಾವಿರಾರು ರೂಪಾಯಿಗಳಷ್ಟು ಹಣವನ್ನು ತಕಾವಿ ಸಾಲವಾಗಿ ಪಡೆಯುತ್ತಾರೆ. ಇದರಿಂದ ಒಂದು ತಾಲ್ಲೂಕಿನಲ್ಲಿರುವ ಹತ್ತಾರು ಜನಕ್ಕೆ ಮತ್ತು ಅವರ ಸಂಸಾರಗಳಿಗೆ ಮಾತ್ರ ಸ್ವಲ್ಪ ಸುಖವೇನೋ ಆಗುತ್ತದೆ,

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಪ್ರಯೋಜನವಾಗುತ್ತದೆ. ಇಲ್ಲಿ ಒಂದು ವಿಚಾರವನ್ನು ತಾವು ಆಲೋಚನೆ ಮಾಡಬೇಕು, ಇಂತಹ ಪರಿಹಾರಗಳನ್ನು ಕೊಡಲು ಸ್ವಲ್ಪ ತೀಕ್ಷ್ಣವಾಗಿ ಆಲೋಚನೆ ಮಾಡಿ ಸಮಗ್ರವಾಗಿ ಒಂದು ಯೋಜನೆಯನ್ನು ಮಾಡಿ ಎಲ್ಲರಿಗೂ ಅನುಕೂಲವಾಗುವಂತೆ ಕ್ಷಾಮ ನಿವಾರಣೆಯಾಗುವುದಕ್ಕೋಸ್ಕರ ಮಾಡಬೇಕು. ಪರಿಹಾರ ಕಾರ್ಯಗಳನ್ನು ಮಾಡುವಾಗ ಒಂದು ತಾಲ್ಲೂಕಿನಲ್ಲಿ ಕೆಲವರಿಗೆ 500 ರಿಂದ ಸಾವಿರ ರೂಪಾಯಿಗಳಷ್ಟು ಸಹಾಯ ಮಾಡಿದರೂ ಅದರಿಂದ ಅಲ್ಲಿರುವ ಎಲ್ಲ ಜನಕ್ಕೂ ರೂಪಾಯಿನ ಎಂಟಾಣೆ ಭಾಗದಷ್ಟೂ ಅನುಕೂಲವಾಗುತ್ತಿಲ್ಲ ಎನ್ನುವುದನ್ನು ಸರ್ಕಾರ ಸ್ವಲ್ಪ ಆಲೋಚನೆ ಮಾಡಬೇಕು. ಇದೇ ರೀತಿ ತಕಾವಿ ಸಾಲಗಳೆಂದು ಲಕ್ಷಗಟ್ಟಲೆ ಕೊಟ್ಟರೂ ಕೂಡ ಕೇವಲ ಹತ್ತಾರು ಜನರಿಗೆ ಇಲ್ಲವೇ ಒಂದು ನೂರು ಜನರಿಗೆ ಅನುಕೂಲವಾಗುತ್ತದೆಯೋ ಹೊರತು ಇತರರಿಗೆ ಸಿಗುತ್ತಿಲ್ಲ. ಇದನ್ನೂ ತಾವು ಯೋಚನೆ ಮಾಡಬೇಕು. ಕ್ಷಾಮ ಬಹಳ ತೀಕ್ಷ್ಣವಾಗಿರತಕ್ಕ ಪ್ರದೇಶಗಳಲ್ಲಿ ತಕ್ಷಣ ಗಂಜಿ ಕೇಂದ್ರಗಳನ್ನು ಸರ್ಕಾರ ತೆರೆದು ಅವರೆಲ್ಲರಿಗೂ ಗಂಜಿಯನ್ನು ಹಂಚುವ ವ್ಯವಸ್ಥೆ ಮಾಡಬೇಕು. ಅಲ್ಲಿ ಇನ್ನು ಹೆಚ್ಚಿನ ತೀವ್ರವಾದ ಪರಿಸ್ಥಿತಿ ಮುಂದುವರಿಯದಂತೆ ಅವಕಾಶ ಮಾಡಲು ಗಂಜಿ ಕೇಂದ್ರಗಳನ್ನು ಬೇಗನೆ ತೆರೆಯಬೇಕು. ಇದರಿಂದ ಅಲ್ಲಿನ ಜನಕ್ಕೆ ಬಹಳ ಅನುಕೂಲವಾಗುತ್ತದೆ. ಎರಡನೇದು ತಾವು ಬಾವಿಗಳಿಗಾಗಿ ಸಬ್‌ಸಿಡಿ ಎಂದು ಕೊಡುತ್ತಿದ್ದೀರಿ, ಅದನ್ನೂ ಕೊಡಿ. ಮತ್ತು ತಾತ್ಕಾಲಿಕವಾಗಿ ಕೆಲವು ಪರಿಹಾರಗಳನ್ನು ಮಧ್ಯಮ ವರ್ಗದ ಬಡವರಿಗೆ ಕೊಡಬೇಕು, ಎಂದರೆ ಒಂದು ಕುಟುಂಬದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಇದ್ದರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರದವರೇ ನೇರವಾಗಿ ಹೋಗಿ ಅವರಿಗೆ ದವಸವನ್ನು ಅಳೆಯಬೇಕು, ಇದನ್ನೂ ಒಂದು ತರಹದ ಸಬ್‌ಸಿಡಿಯಂತೆ ಸರ್ಕಾರದವರು ಧರ್ಮ ಮಾಡಬೇಕು.

ಒಬ್ಬ ಮನುಷ್ಯನಿಗೆ 80 ಸೇರೋ ಅಥವಾ ಒಂದು ಪಲ್ಲವೋ ಕಾಳು ಬೇಕಾಗಿದ್ದರೆ ಸರ್ಕಾರದವರು ಅದನ್ನು ಅವನ ಮನೆಯಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡಬೇಕು. ಆಗಲೇ ಆ ಜನರಲ್ಲಿ ಸರ್ಕಾರ ಜನರ ಸಹಾಯಕ್ಕೆ ಬರುತ್ತದೆಯೆಂಬ ನಂಬಿಕೆ ಅವರಲ್ಲಿ ಬರುತ್ತದೆ. ಆದುದರಿಂದ ಈ ದಿವಸ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಲ್ಲೆಲ್ಲಾ ಸರ್ಕಾರದವರು ಕೂಡಲೇ ಪರಿಹಾರವನ್ನೊದಗಿಸಬೇಕು. ಪರಿಹಾರ ಕಾರ್ಯಗಳನ್ನು ಕೈಗೊಳ್ಳತಕ್ಕ ವಿಚಾರದಲ್ಲಿ ಒಂದು ಮಾತು: ಇದನ್ನು ಸರ್ಕಾರದವರು ಕಂಟ್ರಾಕ್ಟರ ಮೂಲಕ ಮಾಡಿಸಬಾರದು. ಕಂಟ್ರಾಕ್ಟರನು ತನ್ನ ಲಾಭದ ದೃಷ್ಟಿಯಿಂದ ಜನರನ್ನು ಆಂಧ್ರದ ಕಡೆಯಿಂದಲೋ ಅಥವಾ ಇನ್ನೆಲ್ಲಿಂದಲೋ ತಂದು ಇಲ್ಲಿಯ ಜನರ ಜೀವನಕ್ಕೆ ತೊಂದರೆ ಉಂಟಾಗುತ್ತದೆ. ಆದುದರಿಂದ ಹಾಗೆ ಮಾಡಬಾರದೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲೇನು ಕೆಲಸಗಳು ನಡೆದರೂ ಅದರಿಂದ ಇಲ್ಲಿಯ ಜನರಿಗೇ ಕೂಲಿ ಸಿಗುವಂತೆ ತಾವು ನಿಗಾ ಇಡಬೇಕು. ಸರ್ಕಾರ ಈ ವಿಚಾರದಲ್ಲಿ ತೀವ್ರಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರಕ್ಕೆ ಎನ್. ಈ. ಎಸ್. ನಲ್ಲಿ ಬೇಕಾದಷ್ಟು ಶಿಬ್ಬಂದಿಯಿದೆ. ಇನ್ನೂ ಸರ್ಕಾರದವರ ಕೈಕೆಳಗೆ ಬೇಕಾದಷ್ಟು ನೌಕರರಿದ್ದಾರೆ. ಈ ಕ್ಷಾಮ ನಿವಾರಣೆಯ ಕೆಲಸ ಬಹಳ ಮುಖ್ಯವಾದದ್ದು. ಇದನ್ನು ಸರ್ಕಾರದವರು ಮೊದಲು ಕೈಗೊಳ್ಳಬೇಕು.

ಇನ್ನು ಮಧ್ಯಮ ವರ್ಗದ ಜನರಿಂದ ಬರತಕ್ಕ ಕಂದಾಯವನ್ನು ಮಾಫಿ ಮಾಡಬೇಕು. ಹಾಗೇ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಕಂತುಗಳನ್ನೂ ಸದ್ಯಕ್ಕೆ ವಸೂಲ್ಮಾಡದಂತೆ ನಿಲ್ಲಿಸಬೇಕು. ಕೋರ್ಟಿನ ಡಿಕ್ರಿಗಳನ್ನೂ ಕೂಡ ಕೆಲವು ಕಾಲ ತಡೆ ಹಿಡಿಯಬೇಕೆಂದು ಹೇಳುತ್ತೇನೆ. ರೈತ ಒಂದಾವರ್ತಿ ಕೆಳಗೆ ಬಿದ್ದರೆ ಆತ ಚೇತರಿಸಿಕೊಳ್ಳಲು ಮತ್ತೆ 4-5 ವರ್ಷಗಳು ಬೇಕು. ಇನ್ನು ಮಧ್ಯಮ ವರ್ಗದ ಜನರಿಗೆ ದನಗಳಿಗೆ ಹುಲ್ಲನ್ನು ಕೊಂಡುಕೊಳ್ಳಲು ಅವರಿಗೆ ಧಾರಾಳವಾಗಿ ಹಣವನ್ನು ಸಾಲದ ರೂಪದಲ್ಲಿ ಒದಗಿಸಬೇಕೆಂದು ಹೇಳುತ್ತೇನೆ. ಸರ್ಕಾರದವರು ಕ್ರ್ಯಾಪ್ ಇನ್‌ಷೂರೆನ್ಸನ್ನು ಬೇಗ ಜಾರಿಗೆ ತರಬೇಕು. ಇದರಿಂದ ರೈತರಿಗೆ ಈ ವೇಗರೀಸ್ ಕಾಲದಲ್ಲಿ ತುಂಬಾ ಅನುಕೂಲವಾಗುತ್ತದೆ. ಹಾಗೇ ದೊಡ್ಡ ದೊಡ್ಡ ಬ್ಯಾಂಕಿನವರೂ ಮತ್ತು ಇನ್‌ಷೂರೆನ್ಸ್ ಕಂಪೆನಿಗಳವರೂ ಅವರಲ್ಲಿ ಹೆಚ್ಚಿಗೆ ಹಣವಿರುವುದರಿಂದ ಅವರು ಮುಂದೆ ಬಂದು ಸಹಾಯ ಮಾಡುವಂತೆ ಏರ್ಪಾಡನ್ನು ಮಾಡಿದರೆ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಅದು ಬಡ್ಡಿ ಇಲ್ಲದ ಹಾಗೆ ಸಾಲ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಇಷ್ಟೂ ತಾತ್ಕಾಲಿಕ ಪರಿಹಾರದ ವಿಚಾರವಾಯಿತು.

ನಮ್ಮ ದೇಶದಲ್ಲಿ ಅನೇಕರಿಗೆ ಗೊತ್ತಿರುವ ಹಾಗೆ ಅನೇಕ ವೇಳೆ ಕ್ಷಾಮ ಬಂದು ಇಲ್ಲಿಯ ಜನರಿಗೆ ತುಂಬಾ ತೊಂದರೆಯುಂಟಾಗಿದೆ. ಇದಕ್ಕೊಂದು ಶಾಶ್ವತವಾದ ಪರಿಹಾರ ಮಾರ್ಗವನ್ನು ಕಂಡುಹಿಡಿದು ಇದನ್ನು ತಪ್ಪಿಸಲೇಬೇಕು. ಆದರೆ ಜನರೂ ಕೂಡ ಈ ವಿಚಾರದಲ್ಲಿ ಸ್ವಲ್ಪ ತಮ್ಮ ನಡವಳಿಕೆಯನ್ನು ಪರಿಪಡಿಸಿಕೊಳ್ಳಬೇಕಾಗಿದೆ. ಅವರಲ್ಲಿ ಸತ್ಯ, ಧರ್ಮ, ನೀತಿಗಳಿದ್ದಲ್ಲಿ ಮಳೆ ಬೆಳೆಗಳು

ಚೆನ್ನಾಗಿ ಆಗುತ್ತವೆಂದು ಹಿರಿಯರು ಹೇಳುತ್ತಿದ್ದರು. ಜನರಿಗೆ ದೇವರ ವಿಷಯದಲ್ಲೂ ಚೆನ್ನಾಗಿ ನಂಬಿಕೆಯಿರಬೇಕು. ಹಿಂದಿನ ಕಾಲದಲ್ಲಿ ಜನರಲ್ಲಿ ದೈವಭಕ್ತಿ, ಸತ್ಯ, ಧರ್ಮ, ನೀತಿಗಳಿದ್ದುದರಿಂದ ಮಳೆ ಸ್ವಲ್ಪ ಬಂದರೂ ಕಾಲಕಾಲಕ್ಕೆ ಸರಿಯಾಗಿ ಬಂದು ಅವರಿಗೆ ಸಾಕಷ್ಟು ಬೆಳೆಗಳಾಗುತ್ತಲೇ ಇದ್ದವು. ಆದರೆ ಈಗ ಜನರಲ್ಲಿ ಇವು ಸ್ವಲ್ಪ ಕಡಮೆಯಾಗಿರುವುದರಿಂದ ಮಳೆ ಬಂದರೂ ಬೆಳೆಯಾಗುತ್ತಿಲ್ಲ. ಅದು ಅತಿವೃಷ್ಟಿ ಅನಾವೃಷ್ಟಿಯಲ್ಲಿ ಪರ್ಯವಸಾನವಾಗುತ್ತದೆ. ಕಾಲಕಾಲಕ್ಕೆ ಸರಿಯಾಗಿ ಮಳೆ ಬೀಳುತ್ತಿಲ್ಲ. ಸ್ವಲ್ಪವೇ ಬಂದರೂ ಕಾಲಕಾಲಕ್ಕೆ ಬಿದ್ದರೆ ಇಷ್ಟು ಹಾಹಾಕಾರವಿರುವುದಿಲ್ಲ. ಇದಕ್ಕೆಲ್ಲಾ ಮನುಷ್ಯನಲ್ಲಿರತಕ್ಕ ಅವರ ನಡವಳಿಕೆ ಮತ್ತು ದೈವ ಭಕ್ತಿಗಳೇ ಕಾರಣ. ಅದಕ್ಕಾಗಿ ಜನರೂ ಕೂಡ ಸರಿಯಾದ ರೀತಿಯಲ್ಲಿ ನಡೆಯಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಜನರಿಗೆ ಸರ್ಕಾರದವರಿಂದ ಬೇಕಾಗಿರತಕ್ಕ ಸೌಕರ್ಯಗಳು ಅನೇಕ ರೂಪದಲ್ಲಿವೆ. ಅವರಿಗೆ ಮೊಟ್ಟ ಮೊದಲನೇಯದಾಗಿ ಅಷ್ಯೂರ್ಡ್ ವಾಟರ್ ಸಪ್ಲೈ ಬೇಕು. ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ರೈತನಿಗೆ ಇರತಕ್ಕ ಜಮೀನಿನಲ್ಲಿ ಯಾವುದಾದರೊಂದು ಭಾಗದಲ್ಲಿ ಅವನಿಗೆ ಅಷ್ಯೂರ್ಡ್ ಬೆಳೆ ಸಿಗುವಂತೆ ಮಾಡಬೇಕು. ಇದಕ್ಕೆ ನಾಲಾ ರಿಪೇರಿ ವಗೈರೆ ಕೆಲಸಗಳು ಚುರುಕಾಗಿ ನಡೆಯಬೇಕು. ಈಗ ಜನರಲ್ಲಿ ಆರಾಂ ಚೇರ್ ಪಾಲಿಟೀಷಿಯನ್ಸ್ ಜಾಸ್ತಿಯಾಗಿದ್ದಾರೆ. 500 ಜನರಿರತಕ್ಕ ಹಳ್ಳಿಯಲ್ಲಿ ಕಷ್ಟಪಟ್ಟು ಕೆಲಸಮಾಡತಕ್ಕ ಜನರು 50ಕೂಡ ಸಿಕ್ಕುವುದಿಲ್ಲ. ಎಲ್ಲೆಲ್ಲೂ ಇಸ್ಪೀಟು ಆಟ ಪುಡಾರಿಗಳಾಗಿ ತಿರುಗುವುದು ಹೀಗೆಲ್ಲಾ ಆಗಿ ಜನರಲ್ಲೂ ತಪ್ಪಿದೆ. ಈ ವಿಚಾರದಲ್ಲಿ ಸರ್ಕಾರವೊಂದನ್ನೇ ದೂಷಿಸಿದರೆ ಪ್ರಯೋಜನವಿಲ್ಲ. ಸದಸ್ಯರಾದ ನಾವು ಜನರಲ್ಲಿ ಹೋಗಿ ಪ್ರಚಾರ ಮಾಡಬೇಕು. ಅವರನ್ನು ಕಷ್ಟಪಟ್ಟು ಕೆಲಸ ಮಾಡುವಂತೆ ಪ್ರೇರೇಪಿಸಬೇಕು. ಸರ್ಕಾರದವರು ನೀರನ್ನು ಕೊಟ್ಟರೂ ಜನರು ಮೈಬಗ್ಗಿಸಿ ಕೆಲಸ ಮಾಡದಿದ್ದರೆ ತಪ್ಪು ಯಾರದು ? ಜನರು ಕಷ್ಟಪಟ್ಟು ಕೆಲಸ ಮಾಡಿದರಲ್ಲವೇ ಅವರು ದವಸ ಧಾನ್ಯಗಳನ್ನು ಚೆನ್ನಾಗಿ ಬೆಳೆಯುವುದು ?

ಇನ್ನು ಇಂಟೆನ್ಸೀವ್ ಎಕ್ಸ್‌ಟೆನ್ಸೀವ್ ಕಲ್ಟಿವೇಷನ್ ಬಗ್ಗೆ ಹಾಗೂ ಮೆಕನೈಸ್ಡ್ ಕಲ್ಟಿವೇಷನ್ ಬಗ್ಗೆ ಹೇಳಬೇಕಾದ್ದು ಬಹಳ ಮುಖ್ಯ. ನಮ್ಮ ಸರ್ಕಾರದವರು ಕೇವಲ ಬಸ್ಸುಗಳ ಸೌಕರ್ಯ ಒಂದನ್ನು ಜನರಿಗೆ ಒದಗಿಸಿ ಸಂತೋಷಪಟ್ಟುಕೊಂಡರೆ ಸಾಲದು. ಅದರಿಂದ ಜನರು ಹಳ್ಳಿಗಳ ಕಡೆ ಸೋಮಾರಿಗಳಾಗಿ ಕೈಲಿದ್ದ ದುಡ್ಡನ್ನು ಕಳೆದುಕೊಂಡು ಊರೂರುಗಳನ್ನು ಅಲೆಯುತ್ತಾ ಪಾಪರ್ ಆಗಿದ್ದಾರೆ. ಇಷ್ಟರಿಂದಲೇ ಜನರು ತೃಪ್ತರಾಗುವುದಿಲ್ಲ. ರೈತನಿಗೆ ಬಹಳ ಮುಖ್ಯವಾಗಿ ಬೇಕಾದ ಟ್ರಾಕ್ಟರುಗಳು ಇತ್ಯಾದಿಗಳನ್ನು ತಯಾರಿಸಲು ಇಲ್ಲೇನು ಪ್ರಯತ್ನಗಳು ನಡೆದಿವೆ ? ನಮಗೆ ಕೆಮಿಕಲ್ ಫರ್ಟಿಲೈಸರುಗಳು ಬೇಕು. ಎಲ್ಲಿವೆ ? ಫ್ಯಾಕ್ಟರಿಗಳೆಲ್ಲಿವೆ ? ಸರ್ಕಾರ ಈ ವಿಚಾರದಲ್ಲಿ ಏನು ಅಂಥ ಮಹಾ ಪ್ರಯತ್ನಗಳನ್ನು ನಡೆಸಿದ್ದಾರೆ ? ರಷ್ಯಾ ದೇಶದಲ್ಲಿ ಮೊದಲು ಅ ದೇಶಕ್ಕೆ ಬೇಕಾಗುವಷ್ಟು ಸ್ಟೀಲನ್ನೂ ಮತ್ತು ಕಬ್ಬಿಣವನ್ನೂ ತಯಾರಿಸಿಕೊಂಡು ಅಲ್ಲಿ ಅನಿಮಲ್ ಪವರನ್ನು ಮೊದಲು ಎಲಿಮಿನೇಟ್ ಮಾಡಿದರು. ನಮ್ಮಲ್ಲಿ ಅಂಥಾ ಯಾವ ಒಂದು ಪ್ರಯತ್ನ ನಡೆದಿದೆಯೇ ? ಇಲ್ಲಿ ದಿನಕ್ಕೆ ಸಾವಿರ ಗಟ್ಟಲೇ ಬಸ್ಸುಗಳನ್ನು ಓಡಿಸುತ್ತಾರೆ. ಜನ ಊರೂರು ತಿರುಗಿ ನಿರ್ಗತಿಕರಾಗಿದ್ದಾರೆ. ಇದಕ್ಕೆ ಬದಲಾಗಿ ರೈತನಿಗಾಗಬೇಕಾದ ನೀರಾವರಿ ಸೌಕರ್ಯಗಳನ್ನೂ, ಗೊಬ್ಬರ ಮತ್ತು ಇನ್ನಿತರ ಯಂತ್ರೋಪಕರಣಗಳನ್ನು ಸರಬರಾಜು ಮಾಡತಕ್ಕದ್ದು ಅತ್ಯಗತ್ಯ. ಸರ್ಕಾರದವರು ಇತ್ತ ಕಡೆಗೆ ಹೆಚ್ಚಿನ ಗಮನ ಕೊಡದೆ ಇಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲು ಸಾಧ್ಯವೇ ಇಲ್ಲ. ಇಲ್ಲಿ ಫರ್ಟಿಲೈಜರ್ ಕಾರ್ಖಾನೆಗಳನ್ನು ತೆರೆಯಬೇಕು. ಗೊಬ್ಬರವನ್ನು ರೈತನಿಗೆ ಅಗ್ಗದ ದರದಲ್ಲಿ ಒದಗಿಸಬೇಕು. ನಮ್ಮ ಅಗ್ರಿಕಲ್ಚರಲ್ ಇಲಾಖೆಯು ಈ ದಿವಸ ಒಬ್ಬ ರೈತನ ಮಗನ ಕೈಲಿದ್ದರೆ ದೇಶ ಹೀಗಿರುತ್ತಿರಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಿರತಕ್ಕ ವ್ಯವಸಾಯ ಮಂತ್ರಿಗಳು ಪಕ್ಕಾ ರೈತನ ಮಗ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಆದರೆ ನಾನು ಹೇಳುವುದಿಷ್ಟೇ ; ನಮಗೆ ಉತ್ತಮ ತಳೀ ಬೀಜಗಳು ಬೇಕು. ರೀಸರ್ಚ್ ಸ್ಟೇಷನ್ನಿನಲ್ಲಿ ಸಾಕಷ್ಟು ಕೆಲಸಗಳಾಗುತ್ತಿಲ್ಲ. ವೇಗರೀಸ್‌ನಲ್ಲಿ ನಮಗೆ ತಡೆದುಕೊಂಡು ಬೆಳೆಯನ್ನು ಕೊಡತಕ್ಕಂಥ ಬೀಜಗಳನ್ನು ಅವರಿನ್ನೂ ಕಂಡುಹಿಡಿದಿಲ್ಲ. ನಮಗೆ ಹೆಚ್ಚು ಮಳೆಯೇ ಬರಲೀ ಅಥವಾ ಕೆಲವು ಕಾಲ ಮಳೆಯು ಬೀಳದೇನೆ ಇದ್ದರೂ ಅಂಥ ಸನ್ನಿವೇಶಕ್ಕೆ ತಡೆಯತಕ್ಕ ಬೀಜಗಳನ್ನು ಸರಬರಾಜು ಮಾಡಬೇಕು. ಸ್ವಲ್ಪ ಮಳೆ ಬಾರದಿದ್ದರೆ ಒಣಗತಕ್ಕ ಬೀಜ ಸರಿಯಲ್ಲ. ಆದ್ದರಿಂದ ಅವರು ಹೆಚ್ಚು ಉತ್ಪತ್ತಿ ಕೊಡತಕ್ಕಂಥ ಮತ್ತು ಹೆಚ್ಚು ಬೆಳೆ ಕೊಡತಕ್ಕ ಬೀಜಗಳನ್ನು ಕಂಡು ಹಿಡಿಯಬೇಕು. ಹಾಗೆ ಕಂಡು ಹಿಡಿದರೆ ರೈತನಿಗೆ ಅನುಕೂಲವಾಗುತ್ತದೆ. ಏಕೆಂದರೆ ರೈತನಿಗೆ ಅಷ್ಟಾಗಿ ತಿಳುವಳಿಕೆ ಇಲ್ಲ. ಕೆಲವು ಕಡೆಗಳಲ್ಲಿ ಒಂದು ಎಕರೆಯಲ್ಲಿ ಹತ್ತು ಪಲ್ಲಾ ಜೋಳವನ್ನು ಬೆಳೆಯುತ್ತಾರೆ. ಆದರೆ ನಮ್ಮ ಕಡೆ ಯಾವುದೋ ಓಬಿರಾಯನ ಕಾಲದ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಕೇವಲ ಒಂದೆರಡು ಪಲ್ಲ ಜೋಳ ಕೂಡ ಬೆಳೆಯುವುದಿಲ್ಲ. ನಮ್ಮಲ್ಲಿರತಕ್ಕ ರೈತರಿಗೆ ತಿಳುವಳಿಕೆ ಅಷ್ಟಿಲ್ಲ, ಎಲ್ಲಿ ರೈತರಿಗೆ ತಿಳುವಳಿಕೆ ಕಡಿಮೆ ಇದೆಯೋ ಅಲ್ಲಿ ಹೆಚ್ಚು ಪೈರು

(ಶ್ರೀ ಎಚ್. ಆರ್. ಕೇಶವಮೂರ್ತಿ)

ಬರುವುದು ಉಂಟು. ಆಗ ಸರ್ಕಾರದವರು ಅಂತಹವರಿಗೆ ಸರಿಯಾಗಿ ಸೂಚನೆಗಳನ್ನು ಅಲ್ಲಿ ಹೆಚ್ಚು ಬೆಳೆಯುವುದಕ್ಕೆ ಸಹಕಾರ ಮಾಡಬೇಕು. ಎಂತಹ ರೋಗಗಳು ಬಂದರೂ ಅವನ್ನು ಎದುರಿಸತಕ್ಕ ತಳಿಗಳು ಇರಬೇಕು. ಆಗ ಹೆಚ್ಚು ಉತ್ಪತ್ತಿ ಮಾಡಬಹುದು ಮತ್ತು ಇರತಕ್ಕ ಭೂಮಿಯನ್ನು ಹೊಂದಿಕೊಂಡು ಇನ್ನೂ ಒಳ್ಳೆಯ ಬೆಳೆಯನ್ನು ಬೆಳೆಯುವ ಹಾಗೆ ವ್ಯವಸ್ಥೆಮಾಡಬೇಕು.

Mr. SPEAKER.—The House now stands adjourned to meet tomorrow at 12 Noon.

The House adjourned at Six of the Clock to meet again at Twelve of the Clock on Wednesday, the 1st July 1964.